www.KannadaPrabha.in | ಬುಧವಾರ 6.05.2026 | • ಬೆಂಗಳೂರು • ಬೆಳಗಾವಿ • ಶಿವಮೊಗ್ಗ • ಹುಬ್ಬಳ್ಳಿ • ಮಂಗಳೂರು • ಕಲಬುರಗಿ | Kannada Prabha • Daily • Wednesday • 06.05.2026 • Volume 60 • Issue 125 • Pages 10+2 | • Price ₹7 | Mangaluru

ಕನ್ನಡಪ್ರಭ

ನೇರ.ದಿಟ್ಟ.ನಿರಂತರ



ಇಂದಿನ ಸ್ಪೆಷಲ್! ಪುಟದಲ್ಲಿಂದು

ಟಾಕ್ಸಿಕ್ ಚಿತ್ರದ ರೊಮ್ಯಾಂಟಿಕ್ ದೃಶ್ಯಕ್ಕೆ ಕಟ್ ಕೇಳಿಲ್ಲ: ಕಿಯಾರಾ

ಬಹುನಿರೀಕ್ಷಿತ 'ಟಾಕ್ಸಿಕ್' ಸಿನಿಮಾದಲ್ಲಿ ರಾಕಿಂಗ್ ಸ್ಟಾರ್ ಯಶ್ ಜೊತೆಗಿನ ರೊಮ್ಯಾಂಟಿಕ್ ಸೀನ್ ಎಡಿಟ್‌ಗೆ ನಾನು ಬೇಡಿಕೆ ಇಲ್ಲ. ಈ ಕುರಿತ ವದಂತಿ 'ಪಕ್ಕಾ ಅಸಂಬದ್ಧ'. ಚಿತ್ರದ ನಟಿ ಕಿಯಾರಾ ಅಡ್ವಾಣಿ ಸ್ಪಷ್ಟನೆ. 10



ಯುರೋಪ್ ಟು ಆಫ್ರಿಕಾ ಈಜಿ 60 ವರ್ಷದ ಮಿಲಿಂದ್ ಸಾಧನೆ! ↘ 7



ಪಿಐಎಲ್‌ಗಳು ಪ್ರಚಾರದ ಹಿತಾಸಕ್ತಿ ಅರ್ಜಿಗಳಾಗುತ್ತಿವೆ: ಸುಪ್ರೀಂ ಕಿಡಿ ↘ 7



ವಾಣಿಜ್ಯ ಎಲ್ಪಿಜಿ ದರ ಏರಿಕೆ ಖಂಡಿಸಿ ಕೇರಳ ಹೋಟೆಲ್ ಬಂದ್ ↘ 7



ಬಿಜೆಪಿ ಸೇರಿದ 6 ಆಪ್ ಸಂಸದರ ಅನರ್ಹತೆಗೆ ರಾಷ್ಟ್ರಪತಿಗೆ ಮನವಿ ↘ 6

ಬಂಗಾಳ ಗೆಲುವಿಗೆ ಮೋದಿಗೆ ಅಧ್ಯಕ್ಷ ಟ್ರಂಪ್ ಅಭಿನಂದನೆ



ವಾಷಿಂಗ್ಟನ್: ಬಂಗಾಳ ಸೇರಿ 3 ರಾಜ್ಯಗಳಲ್ಲಿ ಬಿಜೆಪಿಯ ಚುನಾವಣಾ ಗೆಲುವಿಗಾಗಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅಭಿನಂದನೆ ಸಲ್ಲಿಸಿದ್ದಾರೆ ಎಂದು ಶ್ವೇತಭವನ ಮಾಹಿತಿ ನೀಡಿದೆ. ವಿವರ ↘ 7

ಜೀವನಕ್ಕಾಗಿ 4 ಮನೆಗಳಲ್ಲಿ ಮುಸುರೆ ತಿಕ್ಕುತ್ತಿದ್ದ ಕಲಿತಾ ಈಗ ಬಿಜೆಪಿ ಶಾಸಕಿ!

ಬಂಗಾಳದ ಆಸ್ಗ್ರಾಮ್ ಕ್ಷೇತ್ರದಲ್ಲಿ ಜಯ | ಬಿಜೆಪಿ ಟಿಕೆಟ್‌ನಿಂದ ಗೆಲುವು

ಕೋಲ್ಕತಾ: ರಾಜಕೀಯ ಕೇವಲ ಹಣವಂತರಿಗೆ, ಪ್ರಭಾವಿಗಳಿಗೆ ಮಾತ್ರ ಎನ್ನುವ ಹೊತ್ತಿನಲ್ಲಿ ಜೀವನಕ್ಕಾಗಿ ಅವರಿವರ ಮನೆ ಪಾತ್ರೆ ತಿಕ್ಕುತ್ತಿದ್ದ ಬಡ ಮಹಿಳೆಯೊಬ್ಬರು ಪಶ್ಚಿಮ ಬಂಗಾಳ ವಿಧಾನಸಭೆಗೆ ಆಯ್ಕೆಯಾಗುವ ಮೂಲಕ ಎಲ್ಲರ ಅಚ್ಚರಿಗೆ ಕಾರಣವಾಗಿದ್ದಾರೆ.

ಕೆಲವೇ ವರ್ಷಗಳ ಹಿಂದಿನವರೆಗೂ 4 ಮನೆಗಳಲ್ಲಿ ಪಾತ್ರೆ ತಿಕ್ಕಿ ಮಾಸಿಕ ಕೇವಲ 2500 ರು. ಸಂಪಾದಿಸುತ್ತಿದ್ದ ಕಲಿತಾ ಮಾಝಿ ಇದೀಗ ಆಸ್ಗ್ರಾಮ್ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ 107692 ಮತಗಳನ್ನು ಪಡೆಯುವ ಮೂಲಕ ಟಿಎಂಸಿಯ ಶ್ಯಾಮಪ್ರಸನ್ನ ಲೋಹರ್ ಅವರನ್ನು 12,535 ಮತಗಳ ಅಂತರದಿಂದ ಸೋಲಿಸಿದ್ದಾರೆ. ↘ 6



ಎಲ್ಲರ ಮನೆ ಕೆಲಸ ಮಾಡುತ್ತಿದ್ದ ನನಗೆ ಜನರ ಸಮಸ್ಯೆ ಅರಿವಿದೆ. ರಸ್ತೆ, ಕುಡಿಯುವ ನೀರು, ಮಹಿಳೆಯರಿಗೆ ಭದ್ರತೆ, ಯುವಕರಿಗೆ ಉದ್ಯೋಗ ನನ್ನ ಆದ್ಯತೆಯಾಗಿರಲಿದೆ.
• **ಕಲಿತಾ ಮಾಝಿ** ಬಿಜೆಪಿ ಶಾಸಕಿ

ಕರ್ನಾಟಕ ಪಿಯು ಪಠ್ಯದ ಭಾಗವಾದ ಬಾಬರ್ ಇದೀಗ ಪ.ಬಂಗಾಳ ಶಾಸಕ!

ಅನಾಥ ಮಕ್ಕಳ ಟೀಚರ್ ಖ್ಯಾತಿ | ಕರ್ನಾಟಕದಲ್ಲೂ ಸರಣಿ ಉಪನ್ಯಾಸ

• **ರಮೇಶ್ ಬಿದರಕೆರೆ**
ಕನ್ನಡಪ್ರಭ ವಾರ್ತೆ ಹಿರಿಯೂರು


ಕರ್ನಾಟಕದ ಪಿಯು ಪಠ್ಯದ ಭಾಗವಾಗಿರುವ ಪಶ್ಚಿಮ ಬಂಗಾಳದ ಮುರ್ಷಿದಾಬಾದ್ ಜಿಲ್ಲೆಯ ಭಾಪ್ಪ ಗ್ರಾಮದ ಶಿಕ್ಷಣ ತಜ್ಞ ಬಾಬರ್‌ಅಲಿ (34), ಈಗ ಪಶ್ಚಿಮ ಬಂಗಾಳ ವಿಧಾನಸಭೆ ಪ್ರವೇಶಿಸಿದ್ದಾರೆ. ಜಲಂಗಿ ವಿಧಾನ ಸಭಾ ಕ್ಷೇತ್ರದಲ್ಲಿ ಟಿಎಂಸಿಯಿಂದ ಸ್ಪರ್ಧಿಸಿ, ಗೆಲುವು ಸಾಧಿಸಿದ್ದಾರೆ.

ತಮ್ಮ 9ನೇ ವಯಸ್ಸಿನಲ್ಲಿಯೇ ಬೀದಿಗಳಲ್ಲಿ ಅಲೆಯುತ್ತಾ ಚಿಂದಿ ಆಯುವ ಮಕ್ಕಳು, ಅಲೆಮಾರಿ, ಅನಾಥ ಮಕ್ಕಳನ್ನು ಮನೆಯ ಹಿತ್ತಲಲ್ಲಿ ಕೂರಿಸಿಕೊಂಡು ಪಾಠ ಹೇಳಲು ಪ್ರಾರಂಭಿಸಿದ ಬಾಬರ್‌ಅಲಿ, ಇಂದು ಸುಮಾರು 2,000 ಮಕ್ಕಳು ಓದುವ ಶಾಲೆಯನ್ನು ನಡೆಸುತ್ತಿದ್ದಾರೆ. ↘ 6



- 2000ಕ್ಕೂ ಹೆಚ್ಚು ಅಲೆಮಾರಿ, ಅನಾಥ ಮಕ್ಕಳಿಗೆ ಶಿಕ್ಷಣ ನೀಡುತ್ತಿರುವ ಬಾಬರ್
- ಕರ್ನಾಟಕ ಸೇರಿ ಹಲವು ರಾಜ್ಯಗಳಲ್ಲಿ ಶಿಕ್ಷಣದ ಉಪನ್ಯಾಸದ ಮೂಲಕ ಖ್ಯಾತಿ
- ಸಾಧನೆ ಮೆಚ್ಚಿ 2013ರಲ್ಲಿ ಕರ್ನಾಟಕ ಪಿಯು ಪಠ್ಯದಲ್ಲಿ ಬಾಬರ್ ಪರಿಚಯ
- ಬಿಬಿಸಿಯಿಂದ ಬಾಬರ್ ಬಗ್ಗೆ 'ವಿಶ್ವದ ಅತಿ ಕಿರಿಯ ಮುಖ್ಯ ಶಿಕ್ಷಕ' ಸಾಕ್ಷ್ಯಚಿತ್ರ ಪ್ರಸಾರ

ಶ್ರೀ ಶ್ರೀ ಕಾರ್ಯಕ್ರಮಕ್ಕೆ ಮೇ 10ಕ್ಕೆ ಮೋದಿ ಬೆಂಗ್ಳೂರಿಗೆ ಆಗಮನ



ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಮೇ 10ರಂದು ಆರ್ಟ್ ಆಫ್ ಲಿವಿಂಗ್‌ನ 45ನೇ ವಾರ್ಷಿಕೋತ್ಸವ, ರವಿಶಂಕರ್‌ಗುರೂಜಿ 70ನೇ ಹುಟ್ಟುಹಬ್ಬದ ಅಂಗವಾಗಿ ನಡೆಯುವ ಕಾರ್ಯಕ್ರಮಗಳ ಹಿನ್ನೆಲೆಯಲ್ಲಿ ಬೆಂಗಳೂರಿಗೆ ಆಗಮಿಸಲಿದ್ದಾರೆ. ವಿವರ ↘ 5

ಶೃಂಗೇರಿ ಮರು ಎಣಿಕೇಲಿ ವೋಟ್ ಡಕಾಯಿತಿ: ಸಿಎಂ

ಬೆಂಗಳೂರು: ಶೃಂಗೇರಿ ಕ್ಷೇತ್ರದ ಅಂಚೆ ಮತ ಮರು ಎಣಿಕೆ ವೇಳೆ ನಡೆದಿದ್ದು ವೋಟ್ ಚೋರಿ ಅಲ್ಲ, ವೋಟ್ ಡಕಾಯಿತಿ. ಬಿಜೆಪಿಯವರು ಅಂಚೆ ಮತ ಚೀಟಿ ತಿದ್ದಿ ರಾಜೇಗೌಡರ 255 ಮತ ಅಸಿಂಧುಗೊಳಿಸಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದ್ದಾರೆ. ವಿವರ ↘ 4

ಕಬ್ಬಿನ ಬೆಂಬಲ ಬೆಲೆ 365 ರು.ಗೆ ಏರಿಕೆ: ಸಂಪುಟ ನಿರ್ಧಾರ

ನವದೆಹಲಿ: ಕಬ್ಬು ಪೂರೈಸುವ ರೈತರಿಗೆ ಮಿಲ್‌ಗಳು ಪಾವತಿಸಬೇಕಾದ ಮೊತ್ತದಲ್ಲಿ 10 ರುಪಾಯಿ ಹೆಚ್ಚಳ ಮಾಡಲಾಗಿದ್ದು, ಕ್ವಿಂಟಾಲ್‌ಗೆ 365 ರುಪಾಯಿ ಆಗಲಿದೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಈ ನಿರ್ಧಾರ ಮಾಡಲಾಗಿದೆ. ವಿವರ ↘ 6

ಬಯೋಕಾನ್‌ಗೆ ಕ್ಲೇರ್ ಉತ್ತರಾಧಿಕಾರಿ: ಕಿರಣ್ ಮಜುಂದಾರ್

ನವದೆಹಲಿ: ಬೆಂಗಳೂರು ಮೂಲದ ಬಹುರಾಷ್ಟ್ರೀಯ ಬಯೋಟೆಕ್ ದಿಗ್ಗಜ ಕಂಪನಿ ಬಯೋಕಾನ್‌ನ ಸಂಸ್ಥಾಪಕಿ ಕಿರಣ್ ಮಜುಂದಾರ್ ಅವರು ತಮ್ಮ ಉತ್ತರಾಧಿಕಾರಿಯಾಗಿ ಸಂಬಂಧದಲ್ಲಿ ಸೊಸೆಯಾಗಿರುವ ಕ್ಲೇರ್ ಮಜುಂದಾರ್ (37) ಅವರ ಹೆಸರು ಘೋಷಿಸಿದ್ದಾರೆ. ವಿವರ ↘ 7

ಪುಟ ↘ 6

ಸುಪ್ರೀಂ ಜಡ್ಜ್‌ಗಳ ಸಂಖ್ಯೆ 38ಕ್ಕೇರಿಕೆ: ಕೇಂದ್ರ ಸಂಪುಟ

ನಾವು ಸೋತಿಲ್ಲ, ಸಿಎಂ ಸ್ಥಾನ ಬಿಡಲ್ಲ: ಮಮತಾ

ಬಿಜೆಪಿಯ ಗೆಲುವು ಜನಾದೇಶವಲ್ಲ, ದೊಡ್ಡ ಪಿತೂರಿ ರಾಜೀನಾಮೆ ನೀಡಲ್ಲ, ನನ್ನ ಹೋರಾಟ ನಿಲ್ಲುವುದಿಲ್ಲ ಸಂವಿಧಾನ ಪ್ರಕ್ರಿಯೆಗೇ ಬಂಗಾಳ ಸಿಎಂ ದೀದಿ ಸವಾಲ್

• **ಪಿಟಿಐ** ಕೋಲ್ಕತಾ



ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣಾ ಫಲಿತಾಂಶವು 'ಜನಾದೇಶವಲ್ಲ, ಬದಲಾಗಿ ಪಿತೂರಿ' ಎಂದು ಆರೋಪಿಸಿರುವ ಟಿಎಂಸಿ ಮುಖ್ಯಸ್ಥೆ ಹಾಗೂ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ತಾವು ಸಿಎಂ ಸ್ಥಾನದಿಂದ ಕೆಳಗಿಳಿಯುವ ಸಾಧ್ಯತೆಯನ್ನು ತಳ್ಳಿಹಾಕಿದ್ದಾರೆ. ಆದರೆ ಬೀದಿಗಿಳಿದು ವಿರೋಧ ಪಕ್ಷವಾದ ಇಂಡಿಯಾ ಕೂಟವನ್ನು ಬಲಪಡಿಸುವುದಾಗಿ ಪ್ರತಿಜ್ಞೆ ಮಾಡಿದ್ದಾರೆ. ಮಮತಾ ಅವರ ಈ ಹೇಳಿಕೆ ಕಂಡು ಕೇಳರಿಯದ ಹೇಳಿಕೆಯಾಗಿದೆ. ಏಕೆಂದರೆ ಚುನಾವಣೆಯಲ್ಲಿ ಪಕ್ಷ ಸೋತ ಬಳಿಕ ಸಿಎಂಗಳು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವುದು ವಾಡಿಕೆ. ↘ 6

ಮುಂದೇನು?

- 5 ವರ್ಷದ ಜನಾದೇಶ ಮುಗಿದ ಬಳಿಕ ಯಾವ ಸರ್ಕಾರಕ್ಕೂ ಮುಂದುವರಿವ ಅಧಿಕಾರವಿಲ್ಲ
- ಇದೇ ನಿಯಮ ಆಧರಿಸಿ 5 ವರ್ಷ ಅವಧಿ ಬಳಿಕ ಸಿಎಂ ರಾಜೀನಾಮೆ ನೀಡ್ಬೇಕು, ಇಲ್ಲದಿದ್ರೆ ವಜಾ
- ಹೊಸ ಸಿಎಂ ಪ್ರಮಾಣ ವಚನ ಸ್ವೀಕಾರದವರೆಗೂ ರಾಜ್ಯಪಾಲರಿಗೆ ಕಾಯುವ ಅವಕಾಶ ಇದೆ
- ಅಲ್ಲಿಯವರೆಗೂ ಸಿಎಂ ರಾಜೀನಾಮೆ ನೀಡದಿದ್ರೆ ರಾಜ್ಯಪಾಲರಿಗೆ ವಜಾದ ಅಧಿಕಾರ ಇದೆ
- ಚುನಾವಣೆ ಪ್ರಕ್ರಿಯೆಯನ್ನೇ ಪ್ರಶ್ನಿಸಿ ಮಮತಾ ಕೋರ್ಟಿಗೆ ಹೋಗುವ ಅಧಿಕಾರವಿದೆ.ಆದಾಗ್ಯೂ ರಾಜೀನಾಮೆ ಕೊಟ್ಟೇ ಹೋರಾಡಬೇಕು


ಮುಂದಿನ ವಾರ ಸಿಎಂ ಸಿದ್ದು, ಡಿಕೆಶಿಗೆ ದೆಹಲಿಗೆ ಬುಲಾವ್?

ಸದ್ಯ ಕೇರಳದಲ್ಲಿ ಹೈಕಮಾಂಡ್ ಬ್ಯುಸಿ | ಸರ್ಕಾರ ರಚನೆ ಬಳಿಕ ರಾಜ್ಯದತ್ತ ಚಿತ್ತ ಬಳಿಕ ಉಭಯ ನಾಯಕರ ಕರೆಸಿ ನಾಯಕತ್ವ, ಸಂಪುಟ ಪುನಾರಚನೆ ಚರ್ಚೆ?

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕೇರಳದಲ್ಲಿ ಕಾಂಗ್ರೆಸ್ ಪಕ್ಷದ ಸರ್ಕಾರ ರಚನೆ ಪ್ರಕ್ರಿಯೆ ಪೂರ್ಣಗೊಂಡ ನಂತರ ಕಾಂಗ್ರೆಸ್ ಹೈಕಮಾಂಡ್ ರಾಜ್ಯ ರಾಜಕಾರಣದತ್ತ ಗಮನ ಹರಿಸುವ ಸಾಧ್ಯತೆಯಿದ್ದು, ನಂತರವಷ್ಟೇ ರಾಜ್ಯ ನಾಯಕತ್ವ ಹಾಗೂ ಸಚಿವ ಸಂಪುಟ ಪುನಾರಚನೆಯಂಥ ವಿಚಾರಗಳ ಬಗ್ಗೆ ಹೈಕಮಾಂಡ್ ಚರ್ಚೆ ಆರಂಭಿಸಬಹುದು ಎನ್ನಲಾಗುತ್ತಿದೆ.

ಮೂಲಗಳಪ್ರಕಾರಕಾಂಗ್ರೆಸ್ ಹೈಕಮಾಂಡ್ ಮೇ 10ರವರೆಗೂ ಕೇರಳ ಸಿಎಂ ಆಯ್ಕೆ ವಿಚಾರದಲ್ಲಿ ಸಂಪೂರ್ಣ ವ್ಯಸ್ತವಾಗಿರಲಿದೆ. ನಂತರ ಅಂದರೆ ಬಹುತೇಕ ಮೇ 13 ಅಥವಾ 14ರ ವೇಳೆಗೆ ರಾಜ್ಯ ರಾಜಕಾರಣದ ಬಗ್ಗೆ ಗಮನ ಹರಿಸಲು ಮನಸ್ಸು ಮಾಡಬಹುದು. ↘ 10



ಸಚಿವ ಸ್ಥಾನ ಆಕಾಂಕ್ಷಿಗಳ ದಿಲ್ಲಿ ಭೇಟಿ ತಪ್ಪಲ್ಲ. ಈ ಬಗ್ಗೆ ಅವರು ಮಾಹಿತಿ ನೀಡಿದ್ದರು. ಹೋಗುವುದು ನಿಮ್ಮಿಷ್ಟ ಎಂದಿದ್ದೆ. ಆದರೆ ನನಗೆ ದೆಹಲಿ ಕರೆ ಬಂದಿಲ್ಲ. ಬಂದರೆ ಹೋಗುವೆ.
• **ಸಿದ್ದರಾಮಯ್ಯ** ಮುಖ್ಯಮಂತ್ರಿ

ಸರ್ಕಾರಕ್ಕೆ 3 ವರ್ಷ ತುಂಬುವ ಮೊದಲೋ, ನಂತರವೋ?

- ನಾಯಕತ್ವ ಗೊಂದಲ, ಸಂಪುಟ ಪುನಾರಚನೆ ಬಗ್ಗೆ ರಾಜ್ಯ ಕಾಂಗ್ರೆಸ್‌ನಲ್ಲಿ ಗೊಂದಲ ಹಿನ್ನೆಲೆ
- ಈ ಸಮಸ್ಯೆ ಇತ್ಯರ್ಥ ಆಗದಿದ್ದರೆ ಮುಂದಿನ ಎಲೆಕ್ಷನ್‌ನಲ್ಲಿ ಪಕ್ಷಕ್ಕೆ ಹೊಡೆತ ಬೀಳುವ ಆತಂಕ
- ಹೀಗಾಗಿ ಈ ಬಗ್ಗೆ ಸಿಎಂ, ಡಿಸಿಎಂ ಇಬ್ಬರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ನಿರ್ಧಾರ ಸಾಧ್ಯತೆ
- ಪಕ್ಷದ ಒಂದು ಬಣದ ಪ್ರಕಾರ ಸರ್ಕಾರಕ್ಕೆ 3 ವರ್ಷ ತುಂಬುವ ಮೊದಲು ನಿರ್ಧಾರ ಪ್ರಕಟ?
- ಇನ್ನೊಂದು ಬಣದ ಪ್ರಕಾರ ಸರ್ಕಾರಕ್ಕೆ 3 ವರ್ಷ ತುಂಬುವ ಮೇ 20ರ ಬಳಿಕವಷ್ಟೇ ನಿರ್ಧಾರ

ಸರ್ಕಾರ ರಚನೆಗೆ ವಿಜಯ್ ಕಸರತ್ತು: ನಾಳೆ ಪ್ರಮಾಣ?

2 ವಾರದಲ್ಲಿ ವಿಶ್ವಾಸ: ಗೌರ್ನರ್‌ಗೆ ಪತ್ರ ಬಹುಮತದ 10 ಸೀಟಿಗೆ ಮಾತುಕತೆ




ಚೆನ್ನೈ: ತಮಿಳುನಾಡಿನಲ್ಲಿ ಅತಂತ್ರ ವಿಧಾನಸಭೆ ಸೃಷ್ಟಿ ಆಗಿರುವ ಕಾರಣ, ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿರುವ ನಟ ವಿಜಯ್ ಅವರ ಟಿವಿಕೆ ಪಕ್ಷವು ಕಾಂಗ್ರೆಸ್ ಹಾಗೂ ಸಣ್ಣಪುಟ್ಟ ಪಕ್ಷಗಳ ಜತೆ ಮೈತ್ರಿ ಕಸರತ್ತು ಆರಂಭಿಸಿದೆ. ಮೇ 7ಕ್ಕೆ ಪ್ರಮಾಣ ವಚನ ಸ್ವೀಕರಿಸುವ ಇರಾದೆಯನ್ನು ವಿಜಯ್ ವ್ಯಕ್ತಪಡಿಸಿದ್ದಾರೆಂದು ಗೊತ್ತಾಗಿದೆ. ಇದಕ್ಕೆ ಪೂರಕವಾಗಿ ಕಾಂಗ್ರೆಸ್ ನಾಯಕ ಕೆ.ಸಿ. ವೇಣುಗೋಪಾಲ್ ಪ್ರತಿಕ್ರಿಯಿಸಿ, ಮೈತ್ರಿ ಬಗ್ಗೆ ಬುಧವಾರ ಪಕ್ಷ ನಿರ್ಧರಿಸಲಿದೆ ಎಂದಿದ್ದಾರೆ.


ಸೋಮವಾರ ವಿಜಯ್ ಅಧ್ಯಕ್ಷತೆಯಲ್ಲಿ ಟಿವಿಕೆ ಶಾಸಕರ ಸಭೆ ನಡೆಯಿತು. ಈ ವೇಳೆ ಅವರನ್ನು ಶಾಸಕಾಂಗ ನಾಯಕ ಎಂದು ಆಯ್ಕೆ ಮಾಡಲಾಯಿತು. ↘ 10

ಪ.ಬಂಗಾಳ ಸಿಎಂ ಹುದ್ದೆಗಾಗಿ ನಾಲ್ವರ ನಡುವೆ ಸೆಣಸಾಟ

ಸುವೇಂದು, ದಿಲೀಪ್, ಪೌಲ್, ರೂಪಾ ಮೀಸಲು ಚರ್ಚೆ ನಡುವೆ ಸ್ತ್ರೀಗೆ ಪಟ್ಟ?



ಸುವೇಂದು



ದಿಲೀಪ್



ಅಗ್ನಿಮಿತ್ರಾ



ರೂಪಾ ಗಂಗೂಲಿ

ಕೋಲ್ಕತಾ: ಪ.ಬಂಗಾಳದಲ್ಲಿ ಬಿಜೆಪಿ ಸರ್ಕಾರ ರಚನೆ ಪ್ರಕ್ರಿಯೆಗಳು ಆರಂಭವಾಗಿವೆ. ರವೀಂದ್ರನಾಥ ಟ್ಯಾಗೋರ್ ಅವರ ಜನ್ಮದಿನವಾದ ಮೇ 9ರಂದು ಹೊಸ ಸಿಎಂ ಪ್ರಮಾಣವಚನ ಸ್ವೀಕಾರ ಸಾಧ್ಯತೆ ಇದೆ. ಸುವೇಂದು ಅಧಿಕಾರಿ, ಬಿಜೆಪಿ ಮಾಜಿ ರಾಜ್ಯಾಧ್ಯಕ್ಷ ದಿಲೀಪ್ ಘೋಷ್, ಅಗ್ನಿಮಿತ್ರಾ ಪೌಲ್ ಮತ್ತು ಮಹಾಭಾರತದ ದ್ರೌಪದಿ ಖ್ಯಾತಿಯ ರೂಪಾ ಗಂಗೂಲಿ ಹೆಸರು ಸಿಎಂ ಸ್ಥಾನಕ್ಕೆ ಕೇಳಿಬರುತ್ತಿದೆ. ↘ 10

ಖರ್ಗೆ ಹೇಳಿದ ಮೇಲೆ ಸಿಎಂ ಚರ್ಚೆ ಬೇಕಿಲ್ಲ: ಪ್ರಿಯಾಂಕ್

ಸಂದರ್ಭ, ಸನ್ನಿವೇಶ ಬರಲಿ ಅಂತ ಹೇಳಿದ್ದಾರೆ ಖರ್ಗೆ ಹೇಳಿದ ಮೇಲೆ ಮತ್ತೆ ಚರ್ಚೆ ಅಪ್ರಸ್ತುತ

• **ಕನ್ನಡಪ್ರಭ ವಾರ್ತೆ** ಬೆಂಗಳೂರು



ರಾಜ್ಯದಲ್ಲಿ ಮುಖ್ಯಮಂತ್ರಿ ಸ್ಥಾನ ಖಾಲಿಯಿಲ್ಲ ಎಂದು ಎಐಸಿಸಿ ಅಧ್ಯಕ್ಷರೇ ಹೇಳಿದ್ದಾರೆ. ಅವರೇ ಈ ರೀತಿ ಹೇಳಿದ ಮೇಲೆ ನಾವೆಲ್ಲ ಆ ವಿಚಾರ ಕುರಿತು ಮಾತನಾಡುವುದೇ ಅಪ್ರಸ್ತುತ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

ಸದಾಶಿವನಗರದ ತಮ್ಮ ನಿವಾಸದ ಬಳಿ ಮಂಗಳವಾರ ಸುದ್ದಿಗಾರರ ಜತೆ ಮಾತನಾಡಿ, ಸಿಎಂ ಸ್ಥಾನದ ವಿಚಾರವಾಗಿ ಸಂದರ್ಭ ಬಂದಾಗ ತೀರ್ಮಾನ ತೆಗೆದುಕೊಳ್ಳುತ್ತೇವೆಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೇ ಹೇಳಿದ್ದಾರೆ. ಅವರು ಹೇಳಿದ ಮೇಲೆ ಇನ್ನೇನು ಉಳಿಯಿತು. ಜತೆಗೆ ಮುಖ್ಯಮಂತ್ರಿ ಸ್ಥಾನ ಖಾಲಿಯಿಲ್ಲ ಎಂದಿದ್ದಾರೆ. ↘ 10

- ಎಲೆಕ್ಷನ್ ರಿಸಲ್ಟ್‌ಗೂ ಸಂಪುಟ ಪುನಾರಚನೆಗೂ ಸಂಬಂಧವಿಲ್ಲ
- ಸಿಎಂ ಸ್ಥಾನ ಖಾಲಿ ಇಲ್ಲವೆಂದು ಎಐಸಿಸಿ ಅಧ್ಯಕ್ಷರೇ ಸ್ಪಷ್ಟಪಡಿಸಿದ್ದಾರೆ
- ಸನ್ನಿವೇಶ ಬಂದಾಗ ತೀರ್ಮಾನ ತೆಗೆದುಕೊಳ್ಳುವ ಮಾತಾಡಿದ್ದಾರೆ
- ಆ ಬಗ್ಗೆ ಸ್ಪಷ್ಟನೆ ಬಳಿಕ ನಾವು ಮತ್ತೆ ಚರ್ಚೆ ನಡೆಸುವುದು ಅಪ್ರಸ್ತುತ
- ಸರ್ಕಾರಕ್ಕೆ 3 ವರ್ಷ ಆದಾಗ ಬದಲಾವಣೆ ಸಹಜ. ಸದ್ಯ ಆ ಚರ್ಚೆ ಇಲ್ಲ: ಪ್ರಿಯಾಂಕ್

77 ವರ್ಷದ ಸಿದ್ದು ದೇಶದ ಅತ್ಯಂತ ಹಿರಿಯ ಸಿಎಂ!

ಕೇರಳ ಸಿಎಂ ಸೋಲಿನ ಬಳಿಕ ಸಿದ್ದುಗೆ ಪಟ್ಟ ಪಿಣರಾಯಿ ಸ್ಥಾನವೀಗ ಕರ್ನಾಟಕ ಸಿಎಂಗೆ



ನವದೆಹಲಿ: ಇತ್ತೀಚೆಗಷ್ಟೇ 'ಕರ್ನಾಟಕದಲ್ಲಿ ಸುದೀರ್ಘಾವಧಿ ಮುಖ್ಯಮಂತ್ರಿ' ಎಂಬ ಪಟ್ಟವನ್ನು ಪಡೆದಿದ್ದ ಸಿದ್ದರಾಮಯ್ಯ (77) ಅವರು ಇದೀಗ ದೇಶದ ಅತಿ ಹಿರಿಯ ಸಿಎಂ ಆಗಿ ಹೊರಹೊಮ್ಮಿದ್ದಾರೆ. ಕೇರಳ ಸಿಎಂ ಆಗಿದ್ದ 82 ವರ್ಷದ ಪಿಣರಾಯಿ ವಿಜಯನ್ ರಾಜೀನಾಮೆಯಿಂದಾಗಿ ಅವರ ನಂತರದಲ್ಲಿದ್ದ ಸಿದ್ದರಾಮಯ್ಯ ಮೊದಲ ಸ್ಥಾನಕ್ಕೇರಿದ್ದಾರೆ.


ಈ ಪಟ್ಟಿಯಲ್ಲಿ ನಂತರದ ಸ್ಥಾನಗಳಲ್ಲಿ ಆಂಧ್ರಪ್ರದೇಶ ಸಿಎಂ ಚಂದ್ರಬಾಬು ನಾಯ್ಡು (75), ಮಿಜೋರಂನ ಲಾಲ್‌ದುಹೋಮಾ (74), ನಾಗಾಲ್ಯಾಂಡ್‌ನ ನೆಫ್ಯು ರಿಯೋ (74), ಪುದುಚೇರಿಯ ರಂಗಸಾಮಿ (74) ಇದ್ದಾರೆ. ↘ 10

- ಈವರೆಗೆ ದೇಶದ ಅತಿ ಹಿರಿಯ ಸಿಎಂ ಪಟ್ಟ ವಿಜಯನ್‌ಗಿತ್ತು (82)
- ಚುನಾವಣೆಯಲ್ಲಿ ಕೇರಳ ಸಿಎಂ ಸೋಲಿನ ಬಳಿಕ ಸಿದ್ದುಗೆ ಹಿರಿಮೆ
- ಕರ್ನಾಟಕದ ದೀರ್ಘ ಅವಧಿಯ ಸಿಎಂ ದಾಖಲೆಗೂ ಸಿದ್ದು ಪಾತ್ರ
- ಅರುಣಾಚಲ ಪ್ರದೇಶ ಪೇಮಾ ಖಂಡು (46) ಅತಿ ಕಿರಿಯ ಸಿಎಂ
- ತ.ನಾಡು ಮಾಜಿ ಸಿಎಂ ದಿ.ಕರುಣಾನಿಧಿಗೆ (92) ರಾಜ್ಯ ಆಳಿದ ಅತಿ ಹಿರಿಯ ನಾಯಕ

ಅಚ್ಚರಿ | ಕಾಂಗ್ರೆಸ್, ಮಿತ್ರಪಕ್ಷಗಳಿಂದ ಸ್ಪರ್ಧಿಸಿದ್ದ ಮುಸ್ಲಿಂ ಅಭ್ಯರ್ಥಿಗಳ ಗೆಲುವಿನ ದರ ಶೇ.80 | ಮುಸ್ಲಿಮೇತರರು ಸ್ಪರ್ಧಿಸಿದ ಕಡೆ ಸೋಲೇ ಹೆಚ್ಚು

4 ರಾಜ್ಯಗಳಲ್ಲಿ ಕಾಂಗ್ರೆಸ್‌ಗೆ ಮುಸ್ಲಿಂ ಶಾಸಕರದ್ದೇ ಬಲ

ಅಸ್ಸಾಂನಲ್ಲಿ 19ರ ಪೈಕಿ 18, ಬಂಗಾಳದಲ್ಲಿ 2ಕ್ಕೆ 2, ತ.ನಾಡಲ್ಲಿ 1, ಕೇರಳದಲ್ಲಿ 35ರ ಪೈಕಿ 30 ಜನರಿಗೆ ಗೆಲುವು



ಗುವಾಹಟಿ: ಪಂಚರಾಜ್ಯಗಳ ಚುನಾವಣಾ ಫಲಿತಾಂಶ ಪ್ರಕಟವಾದ ಬೆನ್ನಲ್ಲೇ, ಐದೂ ರಾಜ್ಯಗಳಲ್ಲಿ ಕಾಂಗ್ರೆಸ್‌ನಿಂದ ಗೆದ್ದ ಅಭ್ಯರ್ಥಿಗಳಲ್ಲಿ ಬಹುತೇಕರು ಮುಸ್ಲಿಮರು ಎಂಬ ಅಚ್ಚರಿಯ ವಿಚಾರ ಬೆಳಕಿಗೆ ಬಂದಿದೆ.

ಅಸ್ಸಾಂನ 126 ಶಾಸಕ ಸ್ಥಾನಗಳಲ್ಲಿ ಕಾಂಗ್ರೆಸ್ ಕೇವಲ 19 ಸ್ಥಾನಗಳನ್ನು ಗೆದ್ದಿದೆ. ಈ 19 ಮಂದಿಯಲ್ಲಿ 18 ಜನ ಮುಸ್ಲಿಂ ಅಭ್ಯರ್ಥಿಗಳು ಎಂಬುದು ಗಮನಾರ್ಹ. ಪಕ್ಷವು ಒಟ್ಟು 20 ಮುಸ್ಲಿಂ ಅಭ್ಯರ್ಥಿಗಳನ್ನು ಕಣಕ್ಕಿಳಿಸಿತ್ತು. ಇವರಲ್ಲಿ ಇಬ್ಬರು ಮಾತ್ರ ಪರಾಜಿತರಾಗಿದ್ದಾರೆ. ಇದಕ್ಕೆ ವ್ಯತಿರಿಕ್ತವಾಗಿ, ಪಕ್ಷವು ಕಣಕ್ಕಿಳಿಸಿದ 79 ಮುಸ್ಲಿಮೇತರ ಅಭ್ಯರ್ಥಿಗಳಲ್ಲಿ ಒಬ್ಬರು ಮಾತ್ರ ಗೆಲ್ಲುವಲ್ಲಿ ಯಶಸ್ವಿಯಾಗಿದ್ದಾರೆ.

ಇನ್ನು ಕಾಂಗ್ರೆಸ್‌ನ ಮಿತ್ರಪಕ್ಷ ರೈಜೋರ್ ದಳ 2 ಸ್ಥಾನಗಳನ್ನು ಗೆದ್ದಿದೆ. ಅದರ ವಿಜೇತ ಅಭ್ಯರ್ಥಿಗಳಲ್ಲಿ ಒಬ್ಬರು ಮುಸ್ಲಿಂ ಆಗಿದ್ದರೆ, ಮತ್ತೊಬ್ಬರು ಅಖಿಲ್ ಗೊಗೊಯ್. ಇವರು ಮಾವೋವಾದಿಗಳ ಸಂಪರ್ಕದ ಆರೋಪದ ಮೇಲೆ ರಾಷ್ಟ್ರೀಯ ತನಿಖಾ ಸಂಸ್ಥೆಯಿಂದ ತನಿಖೆ ಎದುರಿಸಿದ್ದಾರೆ.

ಕೇರಳ: ಕೇರಳದ 140 ಸ್ಥಾನಗಳ ಪೈಕಿ 35 ಮುಸ್ಲಿಂ ಅಭ್ಯರ್ಥಿಗಳು ವಿಜಯಶಾಲಿಗಳಾಗಿದ್ದಾರೆ. ಇವರಲ್ಲಿ 30 ಜನ ಕಾಂಗ್ರೆಸ್ ನೇತೃತ್ವದ ಯುಡಿಎಫ್‌ನಿಂದ ಸ್ಪರ್ಧಿಸಿದ್ದರು. ಈ ಮಿತ್ರಕೂಟದಲ್ಲಿ 8 ಕಾಂಗ್ರೆಸ್ ಶಾಸಕರು ಮುಸ್ಲಿಮರು, ಉಳಿದ 22 ಶಾಸಕರು ಯುಡಿಎಫ್‌ನ ಮುಖ್ಯ ಮಿತ್ರಪಕ್ಷವಾದ ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್‌ಗೆ ಸೇರಿದವರು. ↘ 6

ಕೇರಳ: ಈ ಸಲ 6 ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿಗೆ 2ನೇ ಸ್ಥಾನ



ತಿರುವನಂತಪುರಂ: ಕೇರಳದಲ್ಲಿ 3 ಸ್ಥಾನಗಳನ್ನು ತನ್ನದಾಗಿಸಿಕೊಳ್ಳುವ ಮೂಲಕ ಐತಿಹಾಸಿಕ ಜಯವನ್ನು ಗಳಿಸಿರುವ ಬಿಜೆಪಿ, 6 ಕ್ಷೇತ್ರಗಳಲ್ಲಿ 2ನೇ ಸ್ಥಾನ ಪಡೆಯುವಲ್ಲಿ ಯಶಸ್ವಿಯಾಗಿದೆ. ಈ ಮೂಲಕ, ದಶಕದ ಹಿಂದಷ್ಟೇ ರಾಜ್ಯದಲ್ಲಿ ಖಾತೆ ತೆರೆದಿದ್ದ ಪಕ್ಷ ಈ ಬಾರಿ ಉತ್ತಮ ಪ್ರದರ್ಶನ ನೀಡಿದೆ. ಇದು ಮುಂದಿನ ಚುನಾವಣೆಗಳಲ್ಲಿ ಪಕ್ಷ ಮತ್ತಷ್ಟು ಸ್ಥಾನಗಳನ್ನು ಗೆಲ್ಲುವ ಮತ್ತು ರಾಜ್ಯ ಕಾರಣದಲ್ಲಿ ತನ್ನದೇ ಛಾಪು ಮೂಡಿಸುವತ್ತ ಮಹತ್ವದ ಬೆಳವಣಿಗೆ ಎಂದು ವಿಶ್ಲೇಷಿಸಲಾಗಿದೆ. ತಿರುವಳ್ಳ, ಪಾಲಕ್ಕಾಡ್, ಮಲಂಪುಳ, ಅಟ್ಟಿಂಗಲ್, ಕಾಸರಗೋಡು ಮತ್ತು ಮಂಜೇಶ್ವರದಲ್ಲಿ 2ನೇ ಸ್ಥಾನ ಪಡೆದಿರುವ ಬಿಜೆಪಿ, ಕಳೆದ ಚುನಾವಣೆಗೆ ಹೋಲಿಸಿದರೆ ಮತ ಗಳಿಕೆ ಸುಧಾರಣೆ ಕಂಡಿದೆ.

ಪ.ಬಂಗಾಳದ 3 ಮುಸ್ಲಿಂ ಬಾಹುಳ್ಯ ಜಿಲ್ಲೆಗಳಲ್ಲೂ ಬಿಜೆಪಿ ಭಾರೀ ಹವಾ!

ಕೋಲ್ಕತಾ: ಬಂಗಾಳದ ಮುಸ್ಲಿಂ ಪ್ರಾಬಲ್ಯದ ಮುರ್ಷಿದಾಬಾದ್, ಮಾಲ್ಡಾ, ಉತ್ತರ ದಿನಾಜ್‌ಪುರನಲ್ಲಿ ಬಿಜೆಪಿ ಭರ್ಜರಿ ಪ್ರದರ್ಶನ ತೋರಿದೆ. 3 ಜಿಲ್ಲೆಯ 43 ಕ್ಷೇತ್ರಗಳಲ್ಲಿ 2021ರಲ್ಲಿ 8 ಸ್ಥಾನ ಗೆದ್ದಿದ್ದ ಬಿಜೆಪಿ ಬಲ ಈಗ 19ಕ್ಕೆ ಏರಿದೆ. 35 ಸ್ಥಾನ ಹೊಂದಿದ್ದ ಟಿಎಂಸಿ ಬಲ 22ಕ್ಕೆ ಕುಸಿದಿದೆ. ಮುಸ್ಲಿಂ ಮತಗಳ ವಿಭಜನೆ ಬಿಜೆಪಿಗೆ ನೆರವಾಗಿದೆ.

ಬಂಗಾಳದ 23 ಜಿಲ್ಲೆಗಳ ಪೈಕಿ 9 ಕಡೆ ಟಿಎಂಸಿ ಶೂನ್ಯ ಸಂಪಾದನೆ

ಕೋಲ್ಕತಾ: 15 ವರ್ಷಗಳ ಕಾಲ ಪಶ್ಚಿಮ ಬಂಗಾಳ ಆಳಿದ್ದ ಟಿಎಂಸಿ ಈ ಬಾರಿಯ ಬಿಜೆಪಿ ಅಬ್ಬರಕ್ಕೆ ಧೂಳೀಪಟವಾಗಿದೆ. ರಾಜ್ಯದ 23 ಜಿಲ್ಲೆಗಳ ಪೈಕಿ 9 ಜಿಲ್ಲೆಗಳಲ್ಲಿ ಸೊನ್ನೆ ಸುತ್ತಿದೆ. ಈ ಮೂಲಕ 68 ಕ್ಷೇತ್ರಗಳಲ್ಲಿ ತನ್ನ ಅಸ್ತಿತ್ವವನ್ನೇ ಕಳೆದುಕೊಂಡಿದೆ.

ತ.ನಾಡಿನಲ್ಲಿ ಟಿವಿಕೆಯಿಂದ ತುರುವೇಕೆರೆ ವ್ಯಕ್ತಿ ವಿಜಯ!

ಉದ್ಯಮಿ ಎನ್. ಸುನಿಲ್ ಆನಂದ್‌ಗೆ ಜಯ ಮೆಟ್ಟುಪಾಳ್ಯಂನಿಂದ ವಿಧಾನಸಭೆಗೆ ಪ್ರವೇಶ



ಚೆನ್ನೈ/ತುರುವೇಕೆರೆ: ತಮಿಳುನಾಡಿನಲ್ಲಿ ನಟ ವಿಜಯ್ ಅವರ ಟಿವಿಕೆ ಪಕ್ಷ ಜಯಭೇರಿ ಬಾರಿಸಿದ ಬೆನ್ನಲ್ಲೇ, ಕರ್ನಾಟಕದ ತುಮಕೂರು ಜಿಲ್ಲೆಯ ತುರುವೇಕೆರೆಯ ವ್ಯಕ್ತಿಯೊಬ್ಬರು ಟಿವಿಕೆಯಿಂದ ಸ್ಪರ್ಧಿಸಿ ಗೆಲುವು ಸಾಧಿಸಿದ್ದಾರೆ ಎಂಬ ಅಚ್ಚರಿಯ ವಿಷಯ ತಿಳಿದುಬಂದಿದೆ.

ಎನ್. ಸುನೀಲ್ ಆನಂದ್ ಇಂಥ ಗೆಲುವು ಸಾಧಿಸಿದವರು. 75,664 ಮತ ಪಡೆದ ಇವರು ಡಿಎಂಕೆ ಹಾಗೂ ಎಐಎಡಿಎಂಕೆ ಎರಡೂ ಪಕ್ಷದವರನ್ನು ಮಣಿಸಿ, 7778 ಮತಗಳ ಅಂತರದಿಂದ ಮೆಟ್ಟುಪಾಳ್ಯಂನಲ್ಲಿ ವಿಜಯ ಸಾಧಿಸಿದ್ದಾರೆ. ↘ 10

- ಸುನೀಲ್ ಅವರ ತವರೂರು ತುರುವೇಕೆರೆ ತಾಲೂಕಿನ ಹೊಡಿಕೇಘಟ್ಟ ಗ್ರಾಮ
- ಕೆಲ ದಶಕಗಳ ಹಿಂದೆ ಇವರ ಅಜ್ಜ ತಮಿಳುನಾಡಿನ ಮೆಟ್ಟುಪಾಳ್ಯಂಗೆ ವಲಸೆ
- ರಿಯಲ್ ಎಸ್ಟೇಟ್ ಸೇರಿ ಹಲವು ಉದ್ಯಮ ನಡೆಸುತ್ತಿರುವ ಕನ್ನಡಿಗ
- ಮೊದಲಿನಿಂದಲೂ ವಿಜಯ್ ಜತೆ ಗುರುತಿಸಿಕೊಂಡಿದ್ದ ಎನ್.ಸುನೀಲ್ ಆನಂದ್
- ಚುನಾವಣೆಯಲ್ಲಿ 75664 ಮತ ಪಡೆದು ಭರ್ಜರಿ ಜಯ

25ನೇ ವರ್ಷದ ಸಂಭ್ರಮ

ಕರಾವಳಿ ಪ್ರಭಾವಳಿ

ಗರಿಷ್ಠ 33 | ಕನಿಷ್ಠ 27

ನೀರಿನ ಸಮಸ್ಯೆ ವರದಿ ಪಡೆದು ಡಿಸಿ ಜೊತೆ ಸಭೆ: ಭರತ್ ಶೆಟ್ಟಿ

ತ್ರೈಮಾಸಿಕ ಕೆಡಿಪಿ ಸಭೆಯಲ್ಲಿ ಶಾಸಕ ಭರವಸೆ | ಅಡುಗೆ ಎಣ್ಣೆಯಲ್ಲಿ ಕಲಬೆರಕೆ ದೂರಿಗೆ ಕ್ರಮವೇನು ಭರತ್ ಪ್ರಶ್ನೆ

• **ಕನ್ನಡಪ್ರಭ ವಾರ್ತೆ** ಮಂಗಳೂರು

ಮಂಗಳೂರು ತಾಲೂಕು, ವಿಧಾನ ಸಭಾ ಕ್ಷೇತ್ರದಲ್ಲಿ ನೀರಿನ ಸಮಸ್ಯೆಗಳು ಇದ್ದಲ್ಲಿ ಆ ಬಗ್ಗೆ ವರದಿ ನೀಡಿ, ನಾನು ಜಿಲ್ಲಾಧಿಕಾರಿಗಳೊಂದಿಗೆ ಸಂಬಂಧಿಸಿದವರ ಸಭೆ ನಡೆಸಿ ಸಮಸ್ಯೆ ಬಗೆಹರಿಸಲು ಕ್ರಮ ವಹಿಸುತ್ತೇನೆ ಎಂದು ಮಂಗಳೂರು ಉತ್ತರ ಶಾಸಕ ಡಾ.ವೈ.ಭರತ್ ಶೆಟ್ಟಿ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಮಂಗಳೂರು ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಮಂಗಳವಾರ ಮಂಗಳೂರು ತಾಲೂಕಿನ 2026-27ನೇ ಸಾಲಿನ ತ್ರೈಮಾಸಿಕ ಕೆ.ಡಿ.ಪಿ. ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ತಾಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆಗಳಿವೆಯಾ, ಜೆಜೆಎಂ ಯೋಜನೆಗಳು ಯಾವ ಹಂತದಲ್ಲಿದೆ ಎಂದು ಶಾಸಕರು ಪ್ರಶ್ನಿಸಿದರು.

ಜೆಜೆಎಂ ಯೋಜನೆಗೆ ಸಂಬಂಧಿಸಿದಂತೆ ಡಿಪಿಆರ್ ಮಾಡಿದ ಕಾಮಗಾರಿಗಳು ಪೂರ್ಣಗೊಂಡಿದೆ. ಸಂಪರ್ಕ ಕಲ್ಪಿಸಲಾಗಿದೆ ಎಂದು ಜೆಜೆಎಂ ವಿಭಾಗದ ಎಂಜಿನಿಯರ್ ಉತ್ತರಿಸಿದರು. ಹೆದ್ದಾರಿ ಜಾಗದ ಸಮಸ್ಯೆಯಿಂದ ಕುಡಿಯುವ ನೀರಿನ ಕಾಮಗಾರಿ ನಡೆಯದೇ ಕೆಲವೆಡೆ ಸಮಸ್ಯೆ ಇದೆ. ನೀರುಮಾರ್ಗ, ಉಳಾಯಿಬೆಟ್ಟು, ಅಡ್ಯಾರ್, ಅದ್ಯಪಾಡಿ, ಕಂದಾವರ, ಗಂಜಿಮಠ, ಅಡ್ಡೂರು. ಕೊಳಂಬೆ ಪರಿಸರದಲ್ಲಿ ನೀರು ಸರಬರಾಜಿನಲ್ಲಿ ಸಮಸ್ಯೆ ಇದೆ. ಈ ಬಗ್ಗೆ ಜಿಲ್ಲಾಧಿಕಾರಿ, ಜಿ.ಪಂ. ಸಿಇಒ ಗಮನಕ್ಕೆ ತರಲಾಗಿದೆ ಎಂದರು ಎಂಜಿನಿಯರ್ ತಿಳಿಸಿದರು.



ಮಂಗಳೂರು ತಾಲೂಕು ತ್ರೈಮಾಸಿಕ ಕೆಡಿಪಿ ಸಭೆ ನಡೆಯಿತು. ಶಾಸಕ ಡಾ. ಭರತ್ ಶೆಟ್ಟಿ ಮಾತನಾಡಿದರು.

ನೀರಿನ ಯೋಜನೆಯ ಹೆಚ್ಚುವರಿ ಬೇಡಿಕೆಗಳು, ನೀರಿನ ಸಮಸ್ಯೆಗಳ ಬಗ್ಗೆ ಪಟ್ಟಿ ನೀಡಿ ನಾನು ಜಿಲ್ಲಾಧಿಕಾರಿ ಅವರೊಂದಿಗೆ ಸಂಬಂಧಿಸಿದವರ ಜೊತೆ ಪ್ರತ್ಯೇಕ ಸಭೆ ನಡೆಸಿ ಸಮಸ್ಯೆ ಪರಿಹಾರದ ಬಗ್ಗೆ ಚರ್ಚಿಸುತ್ತೇನೆ ಎಂದು ಶಾಸಕ ಡಾ.ಭರತ್ ಶೆಟ್ಟಿ ನಿರ್ದೇಶನ ನೀಡಿದರು.

ಆಹಾರ ಕಲಬೆರಕೆ ಬಗ್ಗೆ ಹೆಚ್ಚಿನ ದೂರು: ಆಹಾರ ಕಲಬೆರಕೆ ಆಗುತ್ತಿರುವ ಬಗ್ಗೆ ದೂರು ಬರುತ್ತಿದೆ. ಎಣ್ಣೆಯಲ್ಲಿ ಕಲಬೆರಕೆ ಬಗ್ಗೆ ಹೆಚ್ಚಿನ ದೂರು ಬರುತ್ತಿದೆ. ಈ ಬಗ್ಗೆ ಏನು ಕ್ರಮಕೈಗೊಳ್ಳಲಾಗಿದೆ ಎಂದು ಶಾಸಕ ಭರತ್ ಶೆಟ್ಟಿ ಪ್ರಶ್ನಿಸಿದರು.

ಸಭೆಯಲ್ಲಿ ಆಹಾರ ಸುರಕ್ಷತಾ ಅಧಿಕಾರಿ ಗೈರಿನ ಮಾಹಿತಿ ಅರಿತ ಅವರು, ಆಹಾರ ಸುರಕ್ಷತಾ ಅಧಿಕಾರಿ ಸಹಿತ ಅಧಿಕಾರಿಗಳು ಕಡ್ಡಾಯವಾಗಿ ಸಭೆಗೆ ಭಾಗವಹಿಸಬೇಕು ಎಂದು ಸೂಚಿಸಿದರು. ಆಹಾರ ಕಲಬೆರಕೆ ಆಗುತ್ತಿರುವ ಬಗ್ಗೆ ಅಧಿಕಾರಿಗಳು ಅಂಗಡಿಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕು ಎಂದು ಸೂಚಿಸಿದರು.

ಸಾಂಕ್ರಾಮಿಕ ರೋಗ ನಿಯಂತ್ರಿಸಿ: ಸಾಂಕ್ರಾಮಿಕ ರೋಗಗಳ ಬಗ್ಗೆ ಹಾಗೂ ಅದರ ನಿಯಂತ್ರಣಕ್ಕೆ ಯಾವ ಕ್ರಮ ವಹಿಸಲಾಗಿದೆ ಎಂದು ಆರೋಗ್ಯ ಇಲಾಖೆಯಿಂದ ಶಾಸಕರು ಮಾಹಿತಿ ಕೇಳಿದರು. 1 ಮಲೇರಿಯಾ, 1 ಡೆಂಘೀ ಪ್ರಕರಣ ಪತ್ತೆಯಾಗಿದೆ. ರೋಗ ತಡೆಗೆ ಮನೆ ಭೇಟಿ ನಡೆಸಿ, ಸಾಂಕ್ರಾಮಿಕ ರೋಗ ನಿಯಂತ್ರಣಕ್ಕೆ ಸಹಕಾರ ನೀಡದವರಿಗೆ ದಂಡ ವಿಧಿಸುವುದು, ನೋಟೀಸ್ ನೀಡಲಾಗುತ್ತಿದೆ ಎಂದರು. ಕೇವಲ ದಂಡ ವಿಧಿಸಿ ನಂತರ ಏನು ಮಾಡುತ್ತೀರಿ, ಅಲ್ಲಿ ರೋಗ ನಿಯಂತ್ರಣ ಕ್ರಮ ಅಳವಡಿಸಿಕೊಳ್ಳುವಂತೆ ಮಾಡಬೇಕು. ಈ ಬಗ್ಗೆ ಕ್ರಮ ವಹಿಸಬೇಕು. ಪೂರ್ಣ ಪ್ರಮಾಣದಲ್ಲಿ ಸಾಂಕ್ರಾಮಿಕ ರೋಗ ನಿಯಂತ್ರಿಸಲು ಕ್ರಮ ವಹಿಸಬೇಕು ಎಂದು ಶಾಸಕರು ಸೂಚಿಸಿದರು.

> ■ ಆಹಾರ ಕಲಬೆರಕೆ ಆಗುತ್ತಿರುವ ಬಗ್ಗೆ ದೂರು ಬರುತ್ತಿದೆ. ಎಣ್ಣೆಯಲ್ಲಿ ಕಲಬೆರಕೆ ಬಗ್ಗೆ ಹೆಚ್ಚಿನ ದೂರು ಬರುತ್ತಿದೆ. ಈ ಬಗ್ಗೆ ಏನು ಕ್ರಮಕೈಗೊಳ್ಳಲಾಗಿದೆ ಎಂದು ಶಾಸಕ ಭರತ್ ಶೆಟ್ಟಿ ಪ್ರಶ್ನಿಸಿದರು. ಸಭೆಯಲ್ಲಿ ಆಹಾರ ಸುರಕ್ಷತಾ ಅಧಿಕಾರಿ ಗೈರಿನ ಮಾಹಿತಿ ಅರಿತ ಅವರು, ಆಹಾರ ಸುರಕ್ಷತಾ ಅಧಿಕಾರಿ ಸಹಿತ ಅಧಿಕಾರಿಗಳು ಕಡ್ಡಾಯವಾಗಿ ಸಭೆಗೆ ಭಾಗವಹಿಸಬೇಕು ಎಂದು ಸೂಚಿಸಿದರು. ಆಹಾರ ಕಲಬೆರಕೆ ಆಗುತ್ತಿರುವ ಬಗ್ಗೆ ಅಧಿಕಾರಿಗಳು ಅಂಗಡಿಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕು ಎಂದು ಸೂಚಿಸಿದರು.

ವಿದ್ಯಾರ್ಥಿಗಳಿಗೆ ಒತ್ತಡ ಹಾಕಬೇಡಿ: ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ಮಂಗಳೂರು ದಕ್ಷಿಣ ವಲಯ ಶೇ.98.32 ಫಲಿತಾಂಶ ದಾಖಲಿಸಿದೆ. ಶೇ.100 ಫಲಿತಾಂಶ ದಾಖಲಿಸಬೇಕು ಎಂಬ ಗುರಿ ಇಟ್ಟುಕೊಂಡು ಈ ಸಾಧನೆ ಮಾಡಲಾಗಿದೆ. ಇಲಾಖೆಯ, ಹಿರಿಯ ಅಧಿಕಾರಿಗಳ ಮಾರ್ಗದರ್ಶನ, ಯೋಜನೆಗಳನ್ನು ಪಾಲಿಸಲಾಗಿದೆ ಎಂದು ಶಿಕ್ಷಣ ಇಲಾಖೆ ಅಧಿಕಾರಿಗಳು ತಿಳಿಸಿದರು. ಶಾಸಕ ಭರತ್ ಶೆಟ್ಟಿ ಮಾತನಾಡಿ, ಈ ಫಲಿತಾಂಶವನ್ನು ಉಳಿಸಿಕೊಳ್ಳಬೇಕು. ಅನುತ್ತೀರ್ಣರಾದ ಮಕ್ಕಳಿಗೆ ಮುಂದಿನ ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಕೆಲಸ ಮಾಡುವಂತೆ ನಿರ್ದೇಶನ ನೀಡಿದ ಅವರು ಯಾವುದೇ ಕಾರಣಕ್ಕೂ ವಿದ್ಯಾರ್ಥಿಗಳಿಗೆ ಹೆಚ್ಚಿನ ಒತ್ತಡ ಹಾಕಬೇಡಿ ಎಂದು ಸೂಚಿಸಿದರು.

ಉದ್ಯೋಗದಲ್ಲಿರುವ ಮಹಿಳೆಯವರಿಗೆ ನಗರದಲ್ಲಿ ಹಾಸ್ಟೆಲ್ ನಿರ್ಮಾಣಕ್ಕೆ ಸಂಬಂಧಿಸಿದಂತೆ ಪ್ರಸ್ತಾವನೆ ಸಲ್ಲಿಸುವಂತೆ ಶಾಸಕರು ಅಧಿಕಾರಿಗಳಿಗೆ ಸೂಚಿಸಿದರು. ವಿದ್ಯಾರ್ಥಿಗಳ ಹಾಸ್ಟೆಲ್ ಕೂಡ ನಗರದಲ್ಲೇ ನಿರ್ಮಿಸಿ ನಗರದಿಂದ ಹೊರಗಡೆ ನಿರ್ಮಿಸಿದಲ್ಲಿ ಹೋಗಿ, ಬರುವುದು ಕಷ್ಟವಾಗುತ್ತದೆ. ಜಾಗದ ಬೇಡಿಕೆ ಬಗ್ಗೆ ತಹಸೀಲ್ದಾರ್ ಅವರಿಗೆ ಮನವಿ ನೀಡಿ ಎಂದು ಶಾಸಕರು ಸೂಚಿಸಿದರು.

ಕಳೆದ ಬಾರಿ ಕಡಲಾಮೆಗಳ 24 ಗೂಡುಗಳು ಪತ್ತೆಯಾಗಿತ್ತು, ಸುಮಾರು 3000 ಮೊಟ್ಟೆಗಳಲ್ಲಿದ್ದು, 2500 ಮರಿಗಳನ್ನು ಸಮುದ್ರಕ್ಕೆ ಬಿಡಲಾಗಿತ್ತು. ಆದರೆ ಈ ವರ್ಷ ಕೇವಲ 7 ಗೂಡುಗಳು ಮಾತ್ರವೇ ಪತ್ತೆಯಾಗಿದ್ದು, 820 ಮೊಟ್ಟೆಗಳಿದ್ದು, 550 ಮರಿಗಳನ್ನು ಸಮುದ್ರಕ್ಕೆ ಬಿಡಲಾಗಿದೆ. ಶೇ.60 ರಷ್ಟು ಕಡಿಮೆಯಾಗಿದೆ ಎಂದು ಅರಣ್ಯ ಅಧಿಕಾರಿಗಳು ಪ್ರಸ್ತಾಪಿಸಿದರು. ತಹಸೀಲ್ದಾರ್ ರಮೇಶ್‌ಬಾಬು, ಮಂಗಳೂರು ತಾ.ಪಂ.ಆಡಳಿತಾಧಿಕಾರಿ ಶಕುಂತಳಾ ಶೆಣೈ, ತಾ.ಪಂ. ಕಾರ್ಯನಿರ್ವಹಣಾಧಿಕಾರಿ ಮಹೇಶ್ ಕುಮಾರ್ ಹೊಳ್ಳ, ತಾಲೂಕು ಯೋಜನಾಧಿಕಾರಿ ಸುಕನ್ಯಾ ರಾವ್ ಇದ್ದರು.

ಸುದ್ದಿ ಸಿಂಚನ

ಮೂಲ್ಕಿ ನ.ಪಂ.: ಬೀದಿ ನಾಯಿ ಹಿಡಿಯುವ ಕಾರ್ಯ 12ರಂದು

ಮೂಲ್ಕಿ: ಮೂಲ್ಕಿ ನಗರ ಪಂಚಾಯಿತಿ ವ್ಯಾಪ್ತಿಯಲ್ಲಿ ಬೀದಿ ನಾಯಿಗಳ ಸಂತಾನ ಶಕ್ತಿ ಹರಣ ಕಾರ್ಯಕ್ರಮ ಅಂಗವಾಗಿ ಅನಿಮಲ್ ಕೇರ್‌ಟ್ರಸ್ಟ್ ಮಂಗಳೂರು ಸಂಸ್ಥೆ ವತಿಯಿಂದ 12ರಂದು ಬೆಳಗ್ಗೆ 6ರಿಂದ ಬೀದಿ ನಾಯಿಗಳನ್ನು ಹಿಡಿಯುವ ಕಾರ್ಯವನ್ನು ಪ್ರಾರಂಭಿಸಲಾಗಿರುತ್ತದೆ. ಸಾರ್ವಜನಿಕರು ಅಂದು ತಮ್ಮ ಮನೆಯ ಸಾಕು ನಾಯಿಗಳನ್ನು ಮನೆಯ ಒಳಗೆ ಕಟ್ಟಿ ಹಾಕಿ ನಗರ ಪಂಚಾಯಿತಿಯೊಂದಿಗೆ ಸಹಕರಿಸಬೇಕಾಗಿ ಮೂಲ್ಕಿ ನಗರ ಪಂಚಾಯಿತಿ ಮುಖ್ಯಾಧಿಕಾರಿ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

8ರಂದು ದ.ಕ. ಜಿಲ್ಲೆಗೆ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್

ಮಂಗಳೂರು: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ 8ರಂದು ದಕ್ಷಿಣ ಕನ್ನಡ ಜಿಲ್ಲೆಗೆ ಆಗಮಿಸಲಿದ್ದಾರೆ. ಮೇ 8 ಬೆಳಗ್ಗೆ 8.15ಕ್ಕೆ ಮಂಗಳೂರು ವಿಮಾನ ನಿಲ್ದಾಣ ಆಗಮನ, 9.55ಕ್ಕೆ ಜಿಲ್ಲಾಧಿಕಾರಿ ಕಚೇರಿಯಲ್ಲಿ ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿ ಬಳಕೆ ಬಗ್ಗೆ ಸಂಬಂಧಪಟ್ಟ



ಅಧಿಕಾರಿಗಳೊಂದಿಗೆ ಚರ್ಚೆ, 11ಕ್ಕೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಳೆಗಾಲ ಪೂರ್ವ ಸಿದ್ಧತೆ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಪೂರ್ವಭಾವಿ ಸಭೆ, 12ಕ್ಕೆ ಮಂಗಳೂರು ಮಹಾನಗರ ಪಾಲಿಕೆ ಮತ್ತು ನಗರ ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳೊಂದಿಗೆ ಚರ್ಚೆ, ಮಧ್ಯಾಹ್ನ 2.30ಕ್ಕೆ ಸುಲ್ತಾನ್ ಬತ್ತೇರಿಯಲ್ಲಿರುವ ಮೇಲ್ಸೇತುವೆ ಕಾಮಗಾರಿ ವೀಕ್ಷಣೆ, 4ಕ್ಕೆ ಉಪ್ಪಿನಂಗಡಿ ಬಜತ್ತೂರು ಗ್ರಾಮದ ಪಾರ್ಶ್ವನಾಥ ಸ್ವಾಮಿ ತೀರ್ಥಂಕರರ ಪುನಃ ಪ್ರತಿಷ್ಠಾ ಮಹೋತ್ಸವ ಕಾರ್ಯಕ್ರಮ, ಸಂಜೆ 6ಕ್ಕೆ ಮೂಡಬಿದ್ರೆ ಶ್ರೀರಾಮ ಮಂದಿರ ಸಪರಿವಾರ ಶ್ರೀರಾಮ ದೇವರ ಬಿಂಬ ಪುನರ್‌ಪ್ರತಿಷ್ಠೆ ಹಾಗೂ ಅಷ್ಟಬಂಧ ಬ್ರಹ್ಮಕಲಶೋತ್ಸವ ಕಾರ್ಯಕ್ರಮ, ರಾತ್ರಿ 8.10ಕ್ಕೆ ಸಚಿವರು ಮಂಗಳೂರಿನಿಂದ ಬೆಂಗಳೂರಿಗೆ ತೆರಳಲಿದ್ದಾರೆ.

ಪ.ಬಂ., ಅಸ್ಸಾಂ ಫಲಿತಾಂಶ ಬಿಜೆಪಿಯ ದಿಕ್ಸೂಚಿ: ಕುತ್ಯಾರು

ಬಿಜೆಪಿ ಸಂಭ್ರಮಾಚರಣೆ | ಶ್ರಮವಹಿಸಿದರೆ ಎಲ್ಲ ಕಡೆ ಗಲವು ನಮ್ಮದೇ: ಉದಯ ಕುಮಾರ್ ಶೆಟ್ಟಿ

• **ಕನ್ನಡಪ್ರಭ ವಾರ್ತೆ** ಉಡುಪಿ

ಪಶ್ಚಿಮಬಂಗಾಲ, ಅಸ್ಸಾಂ, ಪುದುಚೇರಿ ಚುನಾವಣೆಗಳಲ್ಲಿ ಗೆದ್ದ ಪರಿಣಾಮ ಬಿಜೆಪಿ ಬಲ ಮತ್ತಷ್ಟು ಹೆಚ್ಚಾಗಿದೆ. ಈ ಕ್ರಾಂತಿಕಾರಿ ಗೆಲುವಿಗೆ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತೀನ್ ನಬೀನ್ ಹಾಗೂ ಎಲ್ಲಾ ಬಿಜೆಪಿ ಕಾರ್ಯಕರ್ತರ ಶ್ರಮ ಕಾರಣ ಎಂದು ಬಿಜೆಪಿ ಉಡುಪಿ ಜಿಲ್ಲಾಧ್ಯಕ್ಷ ಕುತ್ಯಾರು ನವೀನ್ ಶೆಟ್ಟಿ ತಿಳಿಸಿದರು.

ಪಂಚರಾಜ್ಯಗಳ ಚುನಾವಣೆಯಲ್ಲಿ ಬಿಜೆಪಿ ಮಾಡಿದ ಸಾಧನೆಯ ಹಿನ್ನೆಲೆಯಲ್ಲಿ ಬಿಜೆಪಿ ಉಡುಪಿ ಜಿಲ್ಲಾ ಕಚೇರಿ ಎದುರು ನಡೆದ ಸಂಭ್ರಮಾಚರಣೆಯಲ್ಲಿ ಅವರು ಮಾತನಾಡಿದರು.

ಇದು ಧರ್ಮದ ಗೆಲುವು. ನಾವು ರಾಷ್ಟ್ರದ ಹಿತ ಕಾಪಾಡುವ ಸಿದ್ಧಾಂತದಡಿ ಕೆಲಸ ಮಾಡುತ್ತಿದ್ದೇವೆ. ಹಾಗಾಗಿ ಈ ಗೆಲುವು ನಮ್ಮ ಬಲ ಹೆಚ್ಚಿಸಿದೆ. ಇದೇ ಕರ್ನಾಟಕದ ಚುನಾವಣೆಗೆ ದಿಕ್ಸೂಚಿಯಾಗಬೇಕು. ಹಾಗಾಗಿ ನಾವೆಲ್ಲ ಸಮಯ, ಸಮಭಾವದಿಂದ ಕೆಲಸ ಮಾಡೋಣ. ಕರ್ನಾಟಕದಲ್ಲಿ ಬಿಜೆಪಿ ಗೆಲುವಿಗೆ ಶ್ರಮಿಸೋಣ ಎಂದರು.

ಬಿಜೆಪಿ ಪ್ರಶಿಕ್ಷಣ ವರ್ಗದ ಮಂಗಳೂರು ವಿಭಾಗ ಪ್ರಮುಖ್ ಕೆ. ಉದಯ ಕುಮಾರ್ ಶೆಟ್ಟಿ ಮಾತನಾಡಿ, ಬಿಜೆಪಿ ನಮ್ಮ ಕುಟುಂಬ. ಶ್ರಮ ವಹಿಸಿದರೆ ಎಲ್ಲಾ ಕಡೆ ಗೆಲ್ಲಬಹುದು ಎಂಬುದಕ್ಕೆ ಪ.ಬಂಗಾಳದ ಫಲಿತಾಂಶವೇ ಸಾಕ್ಷಿ. ಇಂದು ಅಧರ್ಮ ಅಳಿದು ಧರ್ಮಕ್ಕೆ ಜಯ ಸಿಕ್ಕಿದೆ. ಅರಾಜಕತೆ ದೂರವಾಗಿದೆ ಎಂದರು.



ಪಂಚರಾಜ್ಯ ಚುನಾವಣೆ ಫಲಿತಾಂಶದ ಹಿನ್ನೆಲೆಯಲ್ಲಿ ಜಿಲ್ಲಾ ಬಿಜೆಪಿಯಿಂದ ಸಂಭ್ರಮಾಚರಣೆ ನಡೆಯಿತು

> ■ ಇದು ಧರ್ಮದ ಗೆಲುವು. ನಾವು ರಾಷ್ಟ್ರದ ಹಿತ ಕಾಪಾಡುವ ಸಿದ್ಧಾಂತದಡಿ ಕೆಲಸ ಮಾಡುತ್ತಿದ್ದೇವೆ. ಹಾಗಾಗಿ ಈ ಗೆಲುವು ನಮ್ಮ ಬಲ ಹೆಚ್ಚಿಸಿದೆ. ಇದೇ ಕರ್ನಾಟಕದ ಚುನಾವಣೆಗೆ ದಿಕ್ಸೂಚಿಯಾಗಬೇಕು.

ಉಡುಪಿ ಶಾಸಕ ಯಶ್ಪಾಲ್ ಎ. ಸುವರ್ಣ ಮಾತನಾಡಿ, ಬಾಂಗ್ಲಾ ನುಸುಳುಕೋರರಿಗೆ ಬಿಜೆಪಿ ಗೆಲುವಿನಿಂದ ತಕ್ಕ ಶಾಸ್ತಿಯಾದಂತಾಗಿದೆ. ಬಿಜೆಪಿ ಸಾಧನೆಯ ಮೂಲಕವೇ ಜನರ ವಿಶ್ವಾಸ ಗಳಿಸಿದೆ ಎಂದರು.

ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ದಿನಕರ ಶೆಟ್ಟಿ ಹೆರ್ಗ, ಶ್ರೀಕಾಂತ್ ನಾಯಕ್, ಮಾಜಿ ಜಿಲ್ಲಾಧ್ಯಕ್ಷ ತಿಂಗಳೆ ವಿಕ್ರಮಾರ್ಜುನ ಹೆಗ್ಡೆ, ಕಿರಣ್ ಕುಮಾರ್ ಬೈಲೂರು, ಪ್ರವೀಣ್ ಕುಮಾರ್ ಶೆಟ್ಟಿ ಕಪ್ಪೆಟ್ಟು, ಶ್ಯಾಮಲಾ ಕುಂದರ್, ನಯನಾ ಗಣೇಶ್, ನಳಿನಿ ಪ್ರದೀಪ್ ರಾವ್, ರಾಜೇಶ್ ಕಾವೇರಿ, ಶ್ರೀನಿಧಿ ಹೆಗ್ಡೆ, ಶಿವಕುಮಾರ್ ಅಂಬಲಪಾಡಿ, ಗಿರೀಶ್ ಎಮ್. ಅಂಚನ್, ಸತ್ಯಾನಂದ ನಾಯಕ್, ದಿವಾಕರ ಶೆಟ್ಟಿ ಕಲ್ಯಾ, ಮಧುಕರ ಮುದ್ರಾಡಿ, ಶಶಾಂಕ್ ಶಿವತ್ತಾಯ, ಪೃಥ್ವಿರಾಜ್ ಶೆಟ್ಟಿ ಬಿಲ್ಲಾಡಿ, ಸಂಧ್ಯಾ ರಮೇಶ್, ದಿಲ್ಲೇಶ್ ಶೆಟ್ಟಿ, ವಿಜಯ ಕೊಡವೂರು, ಪ್ರಭಾಕರ್ ಪೂಜಾರಿ, ಕಮಲಾಕ್ಷ ಹೆಬ್ಬಾರ್, ರುಡಾಲ್ಫ್ ಡಿಸೋಜಾ, ಆಸೀಫ್ ಕಟಪಾಡಿ, ದಿನೇಶ್ ಅಮೀನ್, ಜಗದೀಶ್ ಆಚಾರ್ಯ ಕಪ್ಪೆಟ್ಟು, ಜಿತೇಂದ್ರ ಶೆಟ್ಟಿ, ರಾಜೀವ ಕುಲಾಲ್, ವೀಣಾ ಎಸ್. ಶೆಟ್ಟಿ, ರಾಘವೇಂದ್ರ ಉಪ್ಪೂರು, ಹರಿಮಕ್ಕಿ ರತ್ನಾಕರ ಶೆಟ್ಟಿ, ಸಲೀಂ ಅಂಬಾಗಿಲು, ಶಿವರಾಮ್ ಕಾಡಿಮಾರ್ ಮತ್ತಿತರರಿದ್ದರು.

ಪಶ್ಚಿಮ ಬಂಗಾಳ ಸೇರಿ ವಿವಿಧೆಡೆ ಜಯಭೇರಿ: ಬಿಜೆಪಿ ವಿಜಯೋತ್ಸವ



ಪಶ್ಚಿಮ ಬಂಗಾಳ ಸೇರಿ ವಿವಿಧೆಡೆ ಬಿಜೆಪಿ ಜಯಭೇರಿ- ಮೂಡುಬಿದಿರೆ ಬಿಜೆಪಿ ವಿಜಯೋತ್ಸವ

• **ಕನ್ನಡಪ್ರಭವಾರ್ತೆ** ಮೂಡುಬಿದಿರೆ

ಪಶ್ಚಿಮ ಬಂಗಾಳ, ಅಸ್ಸಾಂ ಹಾಗೂ ಪುದುಚೇರಿ ರಾಜ್ಯಗಳಲ್ಲಿ ಬಿಜೆಪಿ ಭರ್ಜರಿ ಜಯಗಳಿಸಿದ ಹಿನ್ನೆಲೆಯಲ್ಲಿ ಬಿಜೆಪಿ ಕಾರ್ಯಕರ್ತರು ಖಾಸಗಿ ಬಸ್ ನಿಲ್ದಾಣದ ಬಳಿ ಪಟಾಕಿ ಸಿಡಿಸಿ ಸಂಭ್ರಮಿಸಿದರು.

ಬಿಜೆಪಿ ಹಿರಿಯ ಮುಖಂಡ ಕೆ.ಆರ್ ಪಂಡಿತ್ ಮಾತನಾಡಿ, ಪಶ್ಚಿಮ ಬಂಗಾಲದಲ್ಲಿ ಮಮತಾ ಬ್ಯಾನರ್ಜಿ ಆಡಳಿತದಿಂದ ಹಿಂದೂಗಳ ಬದುಕು ದುಸ್ತರವಾಗಿತ್ತು, ಅಲ್ಲಿನ ಜನತೆ ಈಗ ಸೂಕ್ತ ಪಾಠ ಕಲಿಸಿದ್ದಾರೆ. ಕರ್ನಾಟಕದಲ್ಲಿಯೂ ಹಿಂದೂಗಳನ್ನು ಕಡೆಗಣಿಸಿ ಅಲ್ಪಸಂಖ್ಯಾತರ ಓಲೈಕೆ ನಡೆಸುತ್ತಿರುವ ಕಾಂಗ್ರೆಸ್ ಸರ್ಕಾರಕ್ಕೆ

> ■ ಬಿಜೆಪಿ ಕಾರ್ಯಕರ್ತರು ಖಾಸಗಿ ಬಸ್ ನಿಲ್ದಾಣದ ಬಳಿ ಪಟಾಕಿ ಸಿಡಿಸಿ ಸಂಭ್ರಮಿಸಿದರು.

ಈ ಫಲಿತಾಂಶವು ಎಚ್ಚರಿಕೆಯ ಗಂಟೆಯಾಗಿದೆ ಎಂದು ತಿಳಿಸಿದರು.

ಮಂಡಲ ಅಧ್ಯಕ್ಷ ದಿನೇಶ್ ಪುತ್ರನ್, ಕಾರ್ಯದರ್ಶಿ ರಂಜಿತ್ ಪೂಜಾರಿ, ಯುವ ಮೋರ್ಚಾ ಅಧ್ಯಕ್ಷ ಕುಮಾರ್‌ಪ್ರಸಾದ್, ಪ್ರಮುಖರಾದ ಲಕ್ಷ್ಮಣ್ ಪೂಜಾರಿ, ಶಾಂತಿ ಪ್ರಸಾದ್ ಹೆಗ್ಡೆ, ನಾಗರಾಜ ಪೂಜಾರಿ, ಅಶ್ವತ್ಥ್ ಪಣಪಿಲ, ಭರತ್ ಶೆಟ್ಟಿ, ಸಚಿನ್ ಪಣಪಿಲ, ಕಾರ್ಯಕರ್ತರು ಪಾಲ್ಗೊಂಡಿದ್ದರು.

ವಿವೇಕಾನಂದ ಕಾನೂನು ಕಾಲೇಜ್: 8ರಿಂದ ರಾಷ್ಟ್ರಮಟ್ಟದ ಅಣಕು ನ್ಯಾಯಾಲಯ ಸ್ಪರ್ಧೆ

• **ಕನ್ನಡಪ್ರಭ ವಾರ್ತೆ** ಪುತ್ತೂರು

ಕಾನೂನು ಕ್ಷೇತ್ರದಲ್ಲಿ ಪ್ರಾಯೋಗಿಕ ಚಾಕಚಕ್ಯತೆಯನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವ ಉದ್ದೇಶದಿಂದ ಆರಂಭಗೊಂಡ ರಾಷ್ಟ್ರಮಟ್ಟದ 3ನೇ ಅಣಕು ನ್ಯಾಯಾಲಯ ಸ್ಪರ್ಧೆ ವಿವೇಕಾನಂದ ಕಾನೂನು ಕಾಲೇಜಿನಲ್ಲಿ ಮೇ 8, 9 ಮತ್ತು 10ರಂದು ನಡೆಯಲಿದೆ ಎಂದು ಕಾನೂನು ಕಾಲೇಜಿನ ಆಡಳಿತ ಸಮಿತಿ ಸಂಚಾಲಕ ವಿಜಯನಾರಾಯಣ ಕೆ.ಎಂ. ತಿಳಿಸಿದ್ದಾರೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈ ಅಣಕು ನ್ಯಾಯಾಲಯ ಸ್ಪರ್ಧೆಯಲ್ಲಿ ರಾಷ್ಟ್ರದ 20 ತಂಡಗಳು ಭಾಗವಹಿಸಲಿವೆ. ಪ್ರತಿಯೊಂದು ತಂಡದಲ್ಲಿ ಮೂರು ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ. ಸ್ಪರ್ಧೆ ಮೇ 9 ಮತ್ತು 10ರಂದು



ವಿವೇಕಾನಂದ ಕಾನೂನು ಕಾಲೇಜ್‌ನ ಆಡಳಿತ ಸಮಿತಿ ಸಂಚಾಲಕ ವಿಜಯ ನಾರಾಯಣ ಮಾತನಾಡಿದರು.

ವಿವಿಧ ಹಂತಗಳಲ್ಲಿ ನಡೆಯಲಿದೆ ಎಂದರು.

9ರಂದು ಸಂಜೆ 4 ಗಂಟೆಗೆ ಆಂಧ್ರಪ್ರದೇಶದ ರಾಜ್ಯಪಾಲ ನಿವೃತ್ತ ಸುಪ್ರೀಂ ಕೋರ್ಟ್ ನ್ಯಾಯಾಧೀಶ ಎಸ್. ಅಬ್ದುಲ್ ನಝೀರ್ ಕಾರ್ಯಕ್ರಮ ಉದ್ಘಾಟಿಸುವರು. ಸುಪ್ರಿಂ ಕೋರ್ಟ್‌ನ ನ್ಯಾಯಮೂರ್ತಿ ಎನ್. ಕೋಟೀಶ್ವರ್‌ಸಿಂಗ್, ರಾಜ್ಯ ಕಾನೂನು ವಿವಿಯ ಕುಲಪತಿ ಪ್ರೊ. ಸಿ. ಬಸವರಾಜು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿವೇಕಾನಂದ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಡಾ. ಕೆ.ಎಂ. ಕೃಷ್ಣ ಭಟ್ ವಹಿಸುವರು. ಸರ್ವೋಚ್ಚ ನ್ಯಾಯಾಲಯದ ಹಿರಿಯ ನ್ಯಾಯವಾದಿ ಶೇಖರ್‌ಜಿ. ದೇವಸ್ಯ ವಿಶೇಷ ಆಹ್ವಾನಿತರಾಗಿ ಭಾಗಿಯಾಗಲಿದ್ದಾರೆ.

10ರಂದು ಸಮಾರೋಪ:

ಮೇ 10ರಂದು ಸಂಜೆ 3 ಗಂಟೆಗೆ ಆಂಧ್ರಪ್ರದೇಶ ಹೈಕೋರ್ಟಿನ ಹಿರಿಯ ನ್ಯಾಯವಾದಿ, ಅಖಿಲ ಭಾರತೀಯ ಅಧಿವಕ್ತ ಪರಿಷತ್ ಅಧ್ಯಕ್ಷ ಶ್ರೀನಿವಾಸ್ ಮೂರ್ತಿ ಕೊಂಡಾ ಅಧ್ಯಕ್ಷತೆಯಲ್ಲಿ ಸಮಾರೋಪ ನಡೆಯಲಿದೆ. ಸಮಾರೋಪ ಭಾಷಣವನ್ನು ಹೈಕೋರ್ಟಿನ ನ್ಯಾಯಮೂರ್ತಿ ಇ.ಎಸ್. ಇಂದಿರೇಶ್ ಮಾಡಲಿದ್ದಾರೆ. ಹೈಕೋರ್ಟಿನ ನ್ಯಾಯಮೂರ್ತಿ ವಿ.ಶ್ರೀಶಾನಂದ ಮತ್ತು ತ್ಯಾಗರಾಜ ಎನ್. ಇನಾವಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಪುತ್ತೂರಿನ ವಕೀಲರ ಸಂಘದ ಅಧ್ಯಕ್ಷ ಜಿ. ಜಗನ್ನಾಥ್ ಭಾಗಿಯಾಗಲಿದ್ದಾರೆ. ಕಾರ್ಯಕ್ರಮದಲ್ಲಿ ಸಾರ್ವಜನಿಕರಿಗೂ ಮುಕ್ತ ಅವಕಾಶ ನೀಡಲಾಗಿದೆ. ಅಣಕು ನ್ಯಾಯಾಲಯ ಸ್ಪರ್ಧೆಯ ಪ್ರಥಮ ಸ್ಥಾನಿಗೆ 30 ಸಾವಿರ ರು. ಹಾಗೂ ಟ್ರೋಫಿ, ದ್ವಿತೀಯ ಸ್ಥಾನಿಗೆ 20 ಸಾವಿರ ರು. ಮತ್ತು ಟ್ರೋಫಿ ಹಾಗೂ ಪ್ರೋತ್ಸಾಹಕ ಬಹುಮಾನ ನೀಡಲಾಗುವುದು ಎಂದರು. ಕಾನೂನು ಅಧ್ಯಯನ ಕೇಂದ್ರದ ನಿರ್ದೇಶಕ ಡಾ. ಪಿ.ಕೆ. ರವೀಂದ್ರ, ಕಾಲೇಜಿನ ಪ್ರಾಂಶುಪಾಲರಾದ ಡಾ. ಅಕ್ಷತಾ ಕೆ.ಪಿ., ಸಹಾಯಕ ಪ್ರಾಧ್ಯಾಪಕಿ ಸುಭಾಷಿಣಿ ಜೆ., ಸ್ಪರ್ಧಾ ಸಮಿತಿ ಅಧ್ಯಕ್ಷ ಮನೋಹರ್‌ಕೆ.ವಿ., ವಕೀಲ ಸುರೇಶ್ ರೈ, ಲಕ್ಷ್ಮೀಕಾಂತ್ ಅನಿಕೂಟೇಲು ಇದ್ದರು.

ಗುರುಭ್ಯೋ ನಮಃ: ಬಪ್ಪಳಿಗೆ ಅಂಬಿಕಾ ಸಮೂಹ ವಿದ್ಯಾಸಂಸ್ಥೆಗಳ ಆವರಣದಲ್ಲಿ ಕಾರ್ಯಕ್ರಮ | ಪೋಳ್ಯದಿಂದ ವಾಹನ ಜಾಥಾ

ಪುತ್ತೂರು: ನಾಳೆ ಶೃಂಗೇರಿ ವಿಧುಶೇಖರ ಶ್ರೀಗಳಿಗೆ ಗುರುವಂದನೆ

• **ಕನ್ನಡಪ್ರಭವಾರ್ತೆ** ಪುತ್ತೂರು

ಪುತ್ತೂರಿನ ಬಪ್ಪಳಿಗೆ ಅಂಬಿಕಾ ಸಮೂಹ ವಿದ್ಯಾಸಂಸ್ಥೆಗಳ 7ರಂದು ಆವರಣದಲ್ಲಿ ಹಮ್ಮಿಕೊಂಡಿರುವ ಜಗದ್ಗುರು ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರ ಗುರುವಂದನಾ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಮೇ 6ರಂದು ಸಂಜೆ ಕಬಕದ ಪೋಳ್ಯದಿಂದ ವಾಹನ ಜಾಥಾದ ಮೂಲಕ ಶ್ರೀಗಳನ್ನು ಬರಮಾಡಿಕೊಳ್ಳಲಾಗುವುದು. ಬಪ್ಪಳಿಗೆ ಜಂಕ್ಷನ್'ನಿಂದ ಪೂರ್ಣಕುಂಭ ಸ್ವಾಗತದೊಂದಿಗೆ ಅಂಬಿಕಾ ವಿದ್ಯಾಸಂಸ್ಥೆಯ ಪ್ರಾಂಗಣಕ್ಕೆ ಮೆರವಣಿಗೆಯಲ್ಲಿ ಕರೆತರಲಾಗುವುದು ಎಂದು ಅಭಿವಂದನಾ ಸಮಿತಿ ಅಧ್ಯಕ್ಷ ಚಿದಾನಂದ ಬೈಲಾಡಿ ತಿಳಿಸಿದ್ದಾರೆ.

ಅವರು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ ಅದ್ವೈತ ತತ್ವದ ಮೂಲಕ ಧರ್ಮ ಜಾಗೃತಿಯನ್ನು ಉಂಟು ಮಾಡಿ ಹಿಂದೂ ಧರ್ಮವನ್ನು ಪುನರುತ್ಥಾನಗೊಳಿಸಿದ ಮತ್ತು ಶ್ರೀ ಮದ್ಭಗವದ್ಗೀತೆ, ಉಪನಿಷತ್ತುಗಳು, ಬ್ರಹ್ಮಸೂತ್ರಗಳಿಗೆ ಭಾಷ್ಯ ಬರೆದ ಧಾರ್ಮಿಕ ಕ್ಷೇತ್ರದ ದಿವ್ಯ ಚೇತನ ಶ್ರೀಶಂಕರಾಚಾರ್ಯರು ಸ್ಥಾಪಿಸಿದ ಪೀಠಾಧ್ಯಕ್ಷ ಜಗದ್ಗುರು ಶ್ರೀ ವಿಧುಶೇಖರಭಾರತೀ ಸನ್ನಿಧಾನಂಗಳವರ ಗುರುವಂದನೆ ಹಾಗೂ ಪಾದಪೂಜೆ ಮೇ 7ರಂದು ನಡೆಯಲಿದೆ. ಈ ಹಿನ್ನೆಲೆಯಲ್ಲಿ ಅವರಿಗೆ ಮೇ 6ರಂದು ಭವ್ಯ ಸ್ವಾಗತಿ ನೀಡಲು ಯೋಜನೆ ರೂಪಿಸಲಾಗಿದೆ ಎಂದರು.



ಅಭಿವಂದನಾ ಸಮಿತಿ ಅಧ್ಯಕ್ಷ ಚಿದಾನಂದ ಬೈಲಾಡಿ ಮಂಗಳವಾರ ಪುತ್ತೂರಿನಲ್ಲಿ ಸುದ್ದಿಗೋಷ್ಠಿಯಲ್ಲಿ ಸಮಾರಂಭದ ಮಾಹಿತಿ ನೀಡುತ್ತಿರುವುದು.

ಮೇ 7ರಂದು ಬೆಳಗ್ಗೆ ಗುರುಗಳ ಉಪಸ್ಥಿತಿಯಲ್ಲಿ ಉಳ್ಳಾಲ್ತಿ ಮೂಲಸ್ಥಾನವಾದ ಕರ್ಕುಂಜದ ತೊಟ್ಟಿಲಕಯದಲ್ಲಿ ಚಂಡಿಕಾಯಾಗ ನಡೆಯಲಿದೆ. ನಂತರ ಬೆಳಿಗ್ಗೆ 9ರಿಂದ ಅಂಬಿಕಾ ವಿದ್ಯಾಸಂಸ್ಥೆಯ ಆವರಣಕ್ಕೆ ಆಗಮಿಸಿ, ಹಿಂದೂ ಬಾಂಧವರ ವತಿಯಿಂದ ಗುರುವಂದನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ವಿದ್ಯಾವಾಚಸ್ಪತಿ ವಿದ್ವಾನ್ ಕೆರೆಕ್ಕೈ ಉಮಾಕಾಂತ ಭಟ್ಟ ಅವರು ಅಭಿವಂದನಾ ನುಡಿಯನ್ನು ನಡೆಸಿಕೊಡಲಿದ್ದಾರೆ. ನಂತರ ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ರಜತ ಮಹೋತ್ಸವ ಪ್ರಯುಕ್ತ ವಿವಿಧ ಕಾರ್ಯಕ್ರಮಗಳೊಂದಿಗೆ ಸಮಾರೋಪ ಸಮಾರಂಭ ಹಾಗೂ ಪುತ್ತೂರು ತಾಲೂಕು ಧರ್ಮಾಭ್ಯುದಯ ಧರ್ಮ ಶಿಕ್ಷಣ ತರಗತಿಗಳ ಪ್ರಥಮ ವಾರ್ಷಿಕೋತ್ಸವದ ಅಂಗವಾಗಿ ಶಿಷ್ಯರಿಂದ ಸಮರ್ಪಣಮ್ ಕಾರ್ಯಕ್ರಮ ನಡೆಯಲಿದೆ ಎಂದು ವಿವರಿಸಿದರು.

ವಿಶೇಷವಾಗಿ ಚಂದ್ರಮೌಳೀಶ್ವರ ದೇವರ ಸಹಿತ ಶ್ರೀ ಗುರುಗಳು ಪುತ್ತೂರಿಗೆ ಆಗಮಿಸುತ್ತಿರುವ ಹಿನ್ನಲೆಯಲ್ಲಿ ಹಿಂದೂ ಬಾಂಧವರು ತಮ್ಮ ತರವಾಡು ಮತ್ತು ಇನ್ನಿತರ ಮನೆಗಳಲ್ಲಿ ಪಶ್ನಾ ಚಿಂತನೆಯಲ್ಲಿ ಶೃಂಗೇರಿಗೆ ಹೋಗಿ ಪಾದ ಪೂಜೆಯನ್ನು ಮಾಡಿಸಿ ಗುರುಗಳ ಅನುಗ್ರಹವನ್ನು ಪಡೆದುಕೊಳ್ಳಬೇಕಾಗಿ ಕಂಡು ಬಂದಲ್ಲಿ, ಶೃಂಗೇರಿ ಶ್ರೀಗಳೇ ಪುತ್ತೂರಿಗೆ ಆಗಮಿಸಿ ಪಾದಪೂಜೆ ಸ್ವೀಕರಿಸುವ ಹಿನ್ನಲೆಯಲ್ಲಿ, ಹಿಂದೂ ಬಾಂಧವರು ಇದರ ಸದುಪಯೋಗವನ್ನು ಪಡಕೊಳ್ಳುವಂತೆ ಅವರು ವಿನಂತಿಸಿಕೊಂಡಿದ್ದಾರೆ.

ಶೃಂಗೇರಿಯಲ್ಲಿ ನೆರವೇರುವ ರೀತಿಯಲ್ಲಿಯೇ ಪಾದಪೂಜೆ ಆಗುವ ಕಾರಣ, ಆಸಕ್ತರು ಮೇ 7ರ ಬೆಳಿಗ್ಗೆ 9ಕ್ಕೆ ಆಗಮಿಸಿ ಪಾದುಕಾ ಪೂಜಾ ರಶೀದಿಯನ್ನು ಪಡಕೊಂಡು ಪಾದಪೂಜೆಯಲ್ಲಿ ಭಾಗವಹಿಸಬಹುದು. ಸಭಾ ಕಾರ್ಯಕ್ರಮದ ನಂತರ ಎಲ್ಲಾ ಭಕ್ತಾಧಿಗಳಿಗೆ ಮಂತ್ರಾಕ್ಷತೆ ಪ್ರಸಾದವನ್ನು ಗುರುಗಳು ವಿತರಿಸಲಿದ್ದಾರೆ

> ■ ಶೃಂಗೇರಿಯಲ್ಲಿ ನೆರವೇರುವ ರೀತಿಯಲ್ಲಿಯೇ ಪಾದಪೂಜೆ ಆಗುವ ಕಾರಣ, ಆಸಕ್ತರು ಮೇ 7ರ ಬೆಳಿಗ್ಗೆ 9ಕ್ಕೆ ಆಗಮಿಸಿ ಪಾದುಕಾ ಪೂಜಾ ರಶೀದಿಯನ್ನು ಪಡಕೊಂಡು ಪಾದಪೂಜೆಯಲ್ಲಿ ಭಾಗವಹಿಸಬಹುದು. ಸಭಾ ಕಾರ್ಯಕ್ರಮದ ನಂತರ ಎಲ್ಲಾ ಭಕ್ತಾಧಿಗಳಿಗೆ ಮಂತ್ರಾಕ್ಷತೆ ಪ್ರಸಾದವನ್ನು ಗುರುಗಳು ವಿತರಿಸಲಿದ್ದಾರೆ.

ಎಂದರು.

ಸುದ್ದಿಗೋಷ್ಠಿಯಲ್ಲಿ ಸಮಿತಿ ಗೌರವಾಧ್ಯಕ್ಷ ಮುಗೆರೋಡಿ ಬಾಲಕೃಷ್ಣ ರೈ, ಅಂಬಿಕಾ ಸಮೂಹ ಸಂಸ್ಥೆಗಳ ಸಂಚಾಲಕ ಸುಬ್ರಹ್ಮಣ್ಯ ನಟ್ಟೋಜ, ಧರ್ಮಾಭ್ಯುದಯ ತಾಲೂಕು ಸಮಿತಿ ಅಧ್ಯಕ್ಷ ದಂಬೆಕಾನ ಸದಾಶಿವ ರೈ, ಸಮಿತಿ ಕಾರ್ಯಾಧ್ಯಕ್ಷ ಶಿವರಾಂ ಆಳ್ವ, ಪ್ರಧಾನ ಕಾರ್ಯದರ್ಶಿ ಆರ್.ಸಿ. ನಾರಾಯಣ್ ರೆಂಜ ಮೊದಲಾದವರು ಉಪಸ್ಥಿತರಿದ್ದರು.

ಕಟ್ಟಡ ಕಾಮಗಾರಿಗೆ ಯಶ್‌ಪಾಲ್ ಶಿಲಾನ್ಯಾಸ



ಅಂಗನವಾಡಿ ಕಟ್ಟಡ ಕಾಮಗಾರಿಗೆ ಶಿಲಾನ್ಯಾಸ ನೆರವೇರಿಸಿದ ಯಶ್‌ಪಾಲ್.

• **ಕನ್ನಡಪ್ರಭ ವಾರ್ತೆ** ಉಡುಪಿ

ನಗರಸಭಾ ವ್ಯಾಪ್ತಿಯ ಇಂದ್ರಾಳಿ ವಾರ್ಡಿನ ಮಂಚಿ ಕುಮೇರಿ ಹಾಗೂ ಬನ್ನಂಜೆ ವಾರ್ಡಿನ ಮೀನು ಮಾರುಕಟ್ಟೆ ಬಳಿಯ 2 ನೂತನ ಅಂಗನವಾಡಿ ಕೇಂದ್ರದ ಕಾಮಗಾರಿಗೆ ಉಡುಪಿ ಶಾಸಕ ಯಶ್‌ಪಾಲ್ ಸುವರ್ಣ ಶಿಲಾನ್ಯಾಸ ನೆರವೇರಿಸಿದರು.

ನಂತರ ಮಾತನಾಡಿದ ಅವರು, ಶೈಕ್ಷಣಿಕ ಜೀವನಕ್ಕೆ ಅಡಿಪಾಯವಾಗಿರುವ ಅಂಗನವಾಡಿ ಕೇಂದ್ರಗಳು ಪುಟಾಣಿ ಮಕ್ಕಳಿಗೆ ಶಿಕ್ಷಣದ ಜೊತೆಗೆ ಪೌಷ್ಟಿಕ ಆಹಾರದ ವ್ಯವಸ್ಥೆ ಕಲ್ಪಿಸುವ ಮೂಲಕ ಮಾನಸಿಕ ಹಾಗೂ ದೈಹಿಕ ಬೆಳವಣಿಗೆಗೆ ವಿಶೇಷ ಕೊಡುಗೆ ನೀಡುತ್ತಿದೆ. ಹಲವು ವರ್ಷಗಳ ಬೇಡಿಕೆಯಾಗಿದ್ದ ಆದಿ ಉಡುಪಿ ಹಾಗೂ ಮಂಚಿ ಕುಮೇರಿ ಅಂಗನವಾಡಿ ಕೇಂದ್ರದ ನಿರ್ಮಾಣಕ್ಕೆ ತಲಾ 20 ಲಕ್ಷ ರು. ಅನುದಾನ ಬಿಡುಗಡೆಯಾಗಿದ್ದು ಶೀಘ್ರದಲ್ಲೇ ಕಾಮಗಾರಿ ಪೂರ್ಣಗೊಂಡು ಸ್ಥಳೀಯ ಪುಟಾಣಿಗಳ ಶಿಕ್ಷಣಕ್ಕೆ ಲೋಕಾರ್ಪಣೆಗೊಳ್ಳಲಿದೆ ಎಂದರು.

ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದಿನಕರ ಹೇರೂರು, ಮಾಜಿ ನಗರಸಭಾ ಸದಸ್ಯರಾದ ಅಶೋಕ್ ನಾಯ್ಕ್, ಕಲ್ಪನಾ ಸುಧಾಮ, ಹರೀಶ್ ರಾಮ್, ಸವಿತಾ ಹರೀಶ್ ರಾಮ್, ರಮೇಶ್, ಉಡುಪಿ ನಗರ ಬಿಜೆಪಿ ಅಧ್ಯಕ್ಷ ದಿನೇಶ್ ಅಮೀನ್, ಪ್ರಧಾನ ಕಾರ್ಯದರ್ಶಿ ಜಗದೀಶ್ ಆಚಾರ್ಯ, ಉಪಸ್ಥಿತರಿದ್ದರು.

ಸುದ್ದಿ ಸಿಂಚನ




ಮೂಲ್ಕಿಯ ಬಪ್ಪನಾಡು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಗಣಪತಿಯ ಸನ್ನಿಧಾನದಲ್ಲಿ ಅಂಗಾರಕ ಸಂಕಷ್ಟಹರ ಚತುರ್ಥಿಯ ಪ್ರಯುಕ್ತ ಶ್ರೀ ಗಣಪತಿ ದೇವರಿಗೆ ವಿಶೇಷ ಹೂವಿನ ಅಲಂಕಾರ ನಡೆಯಿತು.

ವಿಶ್ವ ರೆಡ್‌ಕ್ರಾಸ್ ದಿನಾಚರಣೆ 8ರಂದು

ಮಂಗಳೂರು: ಭಾರತೀಯ ರೆಡ್‌ಕ್ರಾಸ್ ಸೊಸೈಟಿ ದ.ಕ.ಜಿಲ್ಲಾ ಘಟಕದ ವತಿಯಿಂದ ಯೂತ್ ರೆಡ್ ಕ್ರಾಸ್ ಮಂಗಳೂರು ವಿ.ವಿ. ಸಹಯೋಗದಲ್ಲಿ ನಗರದ ರೆಡ್‌ಕ್ರಾಸ್ ಶತಮಾನೋತ್ಸವ ಭವನದ ಪ್ರೇರಣಾ ಸಭಾಂಗಣದಲ್ಲಿ ಮೇ 8ರಂದು ಬೆಳಗ್ಗೆ 10ಕ್ಕೆ ವಿಶ್ವ ರೆಡ್‌ಕ್ರಾಸ್ ದಿನಾಚರಣೆ ನಡೆಯಲಿದೆ. ಇದೇ ಸಂದರ್ಭ ಯೂತ್ ರೆಡ್‌ಕ್ರಾಸ್ ವಿಚಾರ ಸಂಕಿರಣ ಏರ್ಪಡಿಸಲಾಗಿದೆ. ರೆಡ್‌ಕ್ರಾಸ್ ದ.ಕ. ಜಿಲ್ಲಾ ಘಟಕದ ಚೇರ್ಮನ್ ಸಿಎ ಶಾಂತಾರಾಮ ಶೆಟ್ಟಿ ಅಧ್ಯಕ್ಷತೆ ವಹಿಸಲಿದ್ದಾರೆ. ಶಾಸಕ ಡಿ. ವೇದವ್ಯಾಸ ಕಾಮತ್, ಸುರತ್ಕಲ್ ಎನ್‌ಐಟಿಕೆಯ ಸಹ ಪ್ರಾಧ್ಯಾಪಕಿ ಡಾ.ರಶ್ಮಿ ಸುಧೀರ್‌ಉಚ್ಚಿಲ್, ಡಿ ಅಡಿಕ್ಷನ್ ಸಮಾಲೋಚಕಿ ಡಾ.ಕುಸುಮ್ ತಂತ್ರಿ ಡೆಸಾ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಯೂತ್ ರೆಡ್‌ಕ್ರಾಸ್ ಉಪ ಸಮಿತಿ ನಿರ್ದೇಶಕಿ ಡಾ.ಸುಮನ ಬಿ. ತಿಳಿಸಿದ್ದಾರೆ.

ನಾಳೆ ಚಂಡಿಕಾ ಹೋಮ: ಶೃಂಗೇರಿ ಶ್ರೀಗಳಿಂದ ಪೂರ್ಣಾಹುತಿ

ಪುತ್ತೂರು: ಬಲ್ನಾಡು ಉಳ್ಳಾಲ್ತಿಯ ಮೂಲಸ್ಥಾನವಾದ ತೊಟ್ಟಿಲಕಯದ ಶ್ರೀ ಉಳ್ಳಾಲ್ತಿ



ಅಮ್ಮನವರ ಸನ್ನಿಧಿಯಲ್ಲಿ 7ರಂದು ಬೆಳಗ್ಗೆ ಶ್ರೀ ಚಂಡಿಕಾ ಹೋಮ ಜರಗಲಿದೆ. ಶೃಂಗೇರಿ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರಿಂದ ಆ ದಿನ ಬೆಳಗ್ಗೆ 8 ಗಂಟೆಗೆ ಚರಿತ್ರಾರ್ಹ ಪೂರ್ಣಾಹುತಿ ಸಂಪನ್ನಗೊಳ್ಳಲಿದೆ.

ಆಳ್ವಾಸ್ ಸಂಸ್ಥೆ ಮಿನಿ ಇಂಡಿಯಾ ಇದ್ದಂತೆ: ಡಾ. ಆಳ್ವ

ಎಸ್‌ಎಸ್‌ಎಲ್‌ಸಿ, ಪಿಯುಸಿಯ 103 ಸಾಧಕ ವಿದ್ಯಾರ್ಥಿಗಳಿಗೆ ಆಳ್ವಾಸ್ ಸಂಸ್ಥೆಯಿಂದ ಗೌರವ

• **ಕನ್ನಡಪ್ರಭವಾರ್ತೆ** ಮೂಡುಬಿದಿರೆ

ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ರಾಜ್ಯದ ಮೊದಲ ಹತ್ತು ರ್‍ಯಾಂಕ್‌ಗಳ ಒಳಗೆ ಸ್ಥಾನ ಪಡೆದ ಆಳ್ವಾಸ್ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಎಸ್‌ಎಸ್‌ಎಲ್‌ಸಿಯಲ್ಲಿ ಕಡಿಮೆ ಅಂಕ ಗಳಿಸಿ ಪಿಯುಸಿಯಲ್ಲಿ ಶೇ. 95ಕ್ಕಿಂತ ಅಧಿಕ ಅಂಕ ಪಡೆದ 103 ವಿದ್ಯಾರ್ಥಿಗಳನ್ನು ಸಂಸ್ಥೆಯ ವತಿಯಿಂದ ಭಾನುವಾರ ನುಡಿಸಿರಿ ಸಭಾಂಗಣದಲ್ಲಿ ಗೌರವಿಸಲಾಯಿತು.


ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ. ಮೋಹನ್ ಆಳ್ವ, ಸಾಧನೆ ಮಾಡಿದ ನೀವು ಸಂಸ್ಥೆಯ ರಾಯಭಾರಿಗಳಾಗಿದ್ದೀರಿ ಎಂದು ತಿಳಿಸಿದರು.

ಇಲ್ಲಿ ಕಲಿತ ಶಿಸ್ತು, ಉತ್ತಮ ಸ್ವಭಾವ, ಹೋರಾಟದ ಮನೋಭಾವ ಹಾಗೂ ಸಾಮರಸ್ಯದ ಗುಣಗಳು ಭವಿಷ್ಯದ ದಾರಿದೀಪವಾಗಲಿ ಎಂದು ಆಶಿಸಿದರು.

ಆಳ್ವಾಸ್ ಸಂಸ್ಥೆಯು ಮಿನಿ ಇಂಡಿಯಾ ಇದ್ದಂತೆ ಎಂದು ಬಣ್ಣಿಸಿದ ಅವರು, ವಿವಿಧ ಭಾಗಗಳಿಂದ ಬಂದ ವಿದ್ಯಾರ್ಥಿಗಳು ಇಲ್ಲಿ ಒಂದೇ ಕುಟುಂಬದಂತೆ ಬದುಕುತ್ತಾರೆ. ಈ ವೈವಿಧ್ಯತೆ ಮತ್ತು ಒಗ್ಗಟ್ಟು ನಿಮ್ಮನ್ನು ಉತ್ತಮ ನಾಗರಿಕರನ್ನಾಗಿ ರೂಪಿಸುತ್ತದೆ. ಸಮಾಜಕ್ಕೆ ಈ ಒಗ್ಗಟ್ಟಿನ ಸಂದೇಶ ಹಂಚುವ ಜವಾಬ್ದಾರಿ ನಿಮ್ಮ ಮೇಲಿದೆ ಎಂದರು.

ವಾಣಿಜ್ಯ ವಿಭಾಗದಲ್ಲಿ 600ಕ್ಕೆ 600 ಅಂಕ ಪಡೆದ ದಿಶಾಳಿಗೆ 3 ಲಕ್ಷ ರೂಪಾಯಿ ನಗದು ಹಾಗೂ ವಿಜ್ಞಾನ ವಿಭಾಗದಲ್ಲಿ ರಾಜ್ಯಕ್ಕೆ ದ್ವಿತೀಯ ಸ್ಥಾನ ಪಡೆದ ರಕ್ಷಿತಾ ಮಂಜುನಾಥ್‌ಗೆ 2 ಲಕ್ಷ ರೂಪಾಯಿ ನಗದು ನೀಡಿ ಸನ್ಮಾನಿಸಲಾಯಿತು.

ಆಳ್ವಾಸ್ ಪದವಿಪೂರ್ವ ಕಾಲೇಜಿನ ಪ್ರಾಚಾರ್ಯ ಪ್ರೊ. ಮೊಹಮ್ಮದ್ ಸದಾಕತ್, ಉಪಪ್ರಾಂಶುಪಾಲೆ ಝೂನ್ಸಿ ಪಿ. ಎನ್. ಹಾಗೂ ವಿವಿಧ ವಿಭಾಗಗಳ ಮುಖ್ಯಸ್ಥರು ಉಪಸ್ಥಿತರಿದ್ದರು. ವೇಣುಗೋಪಾಲ ಶೆಟ್ಟಿ ನಿರ್ವಹಿಸಿದರು.



ಎಸ್‌ಎಸ್‌ಎಲ್‌ಸಿ, ಪಿಯುಸಿಯ 103 ಸಾಧಕ ವಿದ್ಯಾರ್ಥಿಗಳನ್ನು ಗೌರವಿಸುತ್ತಿರುವ ಡಾ.ಮೋಹನ್ ಆಳ್ವ.

■ ದಿಶಾಳಿಗೆ 3 ಲಕ್ಷ ರೂಪಾಯಿ ನಗದು ಹಾಗೂ ವಿಜ್ಞಾನ ವಿಭಾಗದಲ್ಲಿ ರಾಜ್ಯಕ್ಕೆ ದ್ವಿತೀಯ ಸ್ಥಾನ ಪಡೆದ ರಕ್ಷಿತಾ ಮಂಜುನಾಥ್‌ಗೆ 2 ಲಕ್ಷ ರೂಪಾಯಿ ನಗದು ನೀಡಿ ಸನ್ಮಾನಿಸಲಾಯಿತು.

ಬಿಎಸ್‌ವೈ ಅಭಿಮಾನೋತ್ಸವ: ಪುತ್ತೂರಿನಿಂದ ಸಾವಿರ ಮಂದಿ ನೋಂದಣಿ: ಮಠಂದೂರು

ಕಾರ್ಯಕ್ರಮಕ್ಕೆ ತೆರಳುವವರಿಗೆ ಪುತ್ತೂರು ವಿಧಾನಸಭಾ ಕ್ಷೇತ್ರದಿಂದ ಬಸ್ ವ್ಯವಸ್ಥೆ

• **ಕನ್ನಡಪ್ರಭವಾರ್ತೆ** ಪುತ್ತೂರು

ಮೇ. 9ರಂದು ಚಿತ್ರದುರ್ಗದಲ್ಲಿ ಹಮ್ಮಿಕೊಂಡಿರುವ ಬಿ.ಎಸ್.ವೈ. ಅಭಿಮಾನೋತ್ಸವಕ್ಕೆ ಪುತ್ತೂರಿನಿಂದ ಒಂದು ಸಾವಿರಕ್ಕೂ ಹೆಚ್ಚು ಮಂದಿ ತೆರಳಲಿದ್ದು, ಅವರನ್ನು ಕರೆದೊಯ್ಯಲು ಪುತ್ತೂರಿನಿಂದ ಬಸ್ಸುಗಳ ವ್ಯವಸ್ಥೆ ಮಾಡಲಾಗಿದೆ ಎಂದು ಪುತ್ತೂರಿನ ಮಾಜಿ ಶಾಸಕ ಸಂಜೀವ ಮಠಂದೂರು ತಿಳಿಸಿದ್ದಾರೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮದಲ್ಲಿ ರಾಜ್ಯದಾದ್ಯಂತ 10 ಲಕ್ಷದಷ್ಟು ಕಾರ್ಯಕರ್ತರು ಮತ್ತು ಅಭಿಮಾನಿಗಳು ಸೇರಲಿದ್ದಾರೆ. ಬಿ.ಎಸ್. ಯಡಿಯೂರಪ್ಪ ಅವರು ಪುತ್ತೂರಿಗೂ ಹಲವು ಕೊಡುಗೆಗಳನ್ನು ನೀಡಿದ್ದು, ಪುತ್ತೂರಿನಿಂದ ಒಂದು ಸಾವಿರದಷ್ಟು ಮಂದಿ ಹೆಸರು ನೀಡಿದ್ದಾರೆ. ಇನ್ನು ಹೆಸರು ನೀಡಿದರೆ ಕರೆದೊಯ್ಯುವ ವ್ಯವಸ್ಥೆ ಮಾಡಲಾಗುವುದು ಎಂದರು.

8ರಂದು ರಾತ್ರಿ 9.30ಕ್ಕೆ ಪುತ್ತೂರಿನಿಂದ ಬಸ್ ಹೊರಡಲಿದೆ. ಮೇ 9ರಂದು ಬಿ.ಎಸ್.ವೈ. ಅಭಿಮಾನೋತ್ಸವ ಕಾರ್ಯಕ್ರಮ ನಡೆಯಲಿದ್ದು, ಆಗಮಿಸುವ ಇಚ್ಛೆಯುಳ್ಳವರನ್ನು ಕರೆದೊಯ್ಯಲಾಗುವುದು. ಇದಲ್ಲದೇ ಅನೇಕ ಮಂದಿ ತಮ್ಮ ಖಾಸಗಿ ವಾಹನದಲ್ಲಿ ಆಗಮಿಸುವ ಇಚ್ಛೆ ವ್ಯಕ್ತಪಡಿಸಿದ್ದಾರೆ ಎಂದರು.



ಮಾಧ್ಯಮದೊಂದಿಗೆ ಮಾಜಿ ಶಾಸಕ ಸಂಜೀವ ಮಠಂದೂರು ಮಾತನಾಡಿದರು.

ಮೇ 9ರಂದು ಅಭಿಮಾನೋತ್ಸವ ಕಾರ್ಯಕ್ರಮ ನಡೆಯಲಿದ್ದು, ಆಗಮಿಸುವ ಇಚ್ಛೆಯುಳ್ಳವರನ್ನು ಬಸ್‌ನಲ್ಲಿ ಕರೆದೊಯ್ಯಲಾಗುವುದು.

ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ಪುತ್ತೂರು ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣ ಮಂಜೂರಾಗಿತ್ತು. ಪುತ್ತೂರು ಆಡಳಿತ ಸೌಧ, ಮೊರಾರ್ಜಿ ದೇಸಾಯಿ ವಸತಿಯುತ ಶಾಲೆ, ಅಗ್ನಿಶಾಮಕ ಕಟ್ಟಡ, ಬೆಳಿಯೂರು ಅಣೆಕಟ್ಟು, ಜಲಸಿರಿ ಯೋಜನೆಯಡಿ 115 ಕೋಟಿ ರೂ. ಮಂಜೂರು, ಸೇರಿದಂತೆ ಹಲವು ಯೋಜನೆಗಳನ್ನು ಪುತ್ತೂರಿಗೆ ನೀಡಿದ್ದಾರೆ ಎಂದರು.

ಗ್ರಾಮಾಂತರ ಮಂಡಲ ಅಧ್ಯಕ್ಷ ದಯಾನಂದ ಉಜಿರೆಮಾರು, ನಿಕಟಪೂರ್ವ ಗ್ರಾಮಾಂತರ ಮಂಡಲ ಅಧ್ಯಕ್ಷ ಸಾಜ ರಾಧಾಕೃಷ್ಣ ಆಳ್ವ, ಬಿಜೆಪಿ ಜಿಲ್ಲಾ ಕಾರ್ಯದರ್ಶಿ ವಿದ್ಯಾಗೌರಿ, ಫಲಾನುಭವಿ ಪ್ರಕೋಷ್ಠದ ಜಿಲ್ಲಾ ಸಂಚಾಲಕ ನಿತೀಶ್ ಶಾಂತಿವನ, ನಗರ ಮಂಡಲ ಉಪಾಧ್ಯಕ್ಷೆ ವಸಂತಲಕ್ಷ್ಮೀ, ಬಿ.ಎಲ್.ಎ. 1 ಸಂಚಾಲಕ ಹರೀಶ್ ಬಿಜತ್ರೆ, ಗ್ರಾಮಾಂತರ ಮಂಡಲ ಉಪಾಧ್ಯಕ್ಷ ಹರಿಪ್ರಸಾದ್ ಯಾದವ್ ಉಪಸ್ಥಿತರಿದ್ದರು.

ರಾಷ್ಟ್ರೀಯ ನೃತ್ಯೋತ್ಸವದಲ್ಲಿ ‘ನವವಿಧ ಭಕ್ತಿ’ ನೃತ್ಯ ರೂಪಕ

ಬೇಕಲ್ ಗೋಕುಲಂ ಗೋಶಾಲೆಯಲ್ಲಿ ನೃತ್ಯೋತ್ಸವ



ಪ್ರಿಯಾ ಮುರ್ಲೆ ತಂಡದವರಿಂದ ‘ನವವಿಧ ಭಕ್ತಿ’ ನೃತ್ಯ ರೂಪಕ ಪ್ರದರ್ಶನಗೊಂಡಿತು.

• **ಕನ್ನಡಪ್ರಭ ವಾರ್ತೆ** ಮಂಗಳೂರು

ಬೇಕಲ್ ಗೋಕುಲಂ ಗೋಶಾಲೆಯಲ್ಲಿ ಪರಂಪರಾ ವಿದ್ಯಾಪೀಠದ ಆಶ್ರಯದಲ್ಲಿ ಆಯೋಜಿಸಲಾಗಿರುವ ರಾಷ್ಟ್ರೀಯ ನೃತ್ಯೋತ್ಸವದಲ್ಲಿ ಚೆನ್ನೈನ ಖ್ಯಾತ ನೃತ್ಯಗಾರ್ತಿ ಪ್ರಿಯಾ ಮುರ್ಲೆ ಮತ್ತು ತಂಡದವರು ಪ್ರಸ್ತುತಪಡಿಸಿದ ‘ನವವಿಧ ಭಕ್ತಿ’ ನೃತ್ಯ ರೂಪಕ ಪ್ರದರ್ಶನಗೊಂಡಿತು.

ಈ ನೃತ್ಯೋತ್ಸವದಲ್ಲಿ ಮಲಯಾಳಂ ಹಾಗೂ ತಮಿಳು ಚಿತ್ರರಂಗದ ಖ್ಯಾತ ನಟಿ ಸಿಂಧು ಶ್ಯಾಮ್ ಅವರು ಭರತನಾಟ್ಯ ಪ್ರಸ್ತುತಪಡಿಸಿದರು. ಉದುಮ ವಿಧಾನಸಭಾ ಕ್ಷೇತ್ರದ ಶಾಸಕ ನೀಲಕಂಠನ್ ಮತ್ತು ಕಾಸರಗೋಡು ಸಂಸದ ರಾಜ್ ಮೋಹನ್ ಉಣ್ಣಿತ್ತಾನ್ ಅವರು ಗೋಶಾಲೆಗೆ ಭೇಟಿ ನೀಡಿ ಕಾರ್ಯಕ್ರಮ ವೀಕ್ಷಿಸಿದರು.

ಗೋಶಾಲೆಯ ಸಂಸ್ಥಾಪಕ ವಿಷ್ಣು ಹೆಬ್ಬಾರ್ ಶಾಸಕರು ಮತ್ತು ಸಂಸದರನ್ನು ಗೌರವಿಸಿದರು.

ಎಕ್ಸೆಲ್ ಲಾಂಗ್ ಟರ್ಮ್ ನೀಟ್ ಕೋಚಿಂಗ್ 11ರಿಂದ ಪ್ರಾರಂಭ

97 ಶೇಕಡಾಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸಂಪೂರ್ಣ ಉಚಿತ ಕೋಚಿಂಗ್ | ವಾರಾಂತ್ಯ ಮೋಕ್ ಟೆಸ್

• **ಕನ್ನಡಪ್ರಭವಾರ್ತೆ** ಬೆಳ್ತಂಗಡಿ

ವೈದ್ಯರಾಗಬೇಕೆಂದು ನೀಟ್ ಪರೀಕ್ಷೆ ಬರೆದು, ನಿರೀಕ್ಷಿತ ಅಂಕಗಳು ಬಾರದಿದ್ದಲ್ಲಿ ವಿದ್ಯಾರ್ಥಿಗಳು ನಿರಾಶರಾಗಬೇಕಿಲ್ಲ. ಗುರುವಾಯನಕೆರೆಯ ಎಕ್ಸೆಲ್ ಲಾಂಗ್ ಟರ್ಮ್ ನೀಟ್ ಕೋಚಿಂಗ್ ಅಕಾಡೆಮಿ ಅಂಥ ವಿದ್ಯಾರ್ಥಿಗಳಿಗಾಗಿಯೇ ಒಂದು ವರ್ಷದ ಶಿಸ್ತು ಬದ್ಧ ಲಾಂಗ್ ಟರ್ಮ್ ನೀಟ್ ಕೋಚಿಂಗ್ ನೀಡುತ್ತಿದೆ. ರ್‍ಯಾಂಕ್ ಖಚಿತ ಎನ್ನುವ ಭರವಸೆಯೊಂದಿಗೆ ಎಕ್ಸೆಲ್ ಲಾಂಗ್ ಟರ್ಮ್ ನೀಟ್ ಕೋಚಿಂಗ್ ಅಕಾಡೆಮಿ ದಾಖಲಾತಿ ಮಾಡಿಕೊಳ್ಳುತ್ತಿದೆ.

ದ್ವಿತೀಯ ಪಿಯುಸಿಯಲ್ಲಿ ಫಿಸಿಕ್ಸ್, ಕೆಮಿಸ್ಟ್ರಿ ಹಾಗೂ ಬಯಲಜಿಯಲ್ಲಿ 97 ಶೇಕಡಾಕ್ಕಿಂತ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಸಂಪೂರ್ಣ ಉಚಿತ ಕೋಚಿಂಗ್ ನೀಡಲಾಗುತ್ತದೆ. 95 ಶೇಕಡಾಕ್ಕಿಂತ ಅಧಿಕ ಅಂಕ ಗಳಿಸಿದವರಿಗೆ ಶುಲ್ಕದಲ್ಲಿ 20 ಶೇಕಡಾ ರಿಯಾಯಿತಿಯಿದೆ. 90 ಶೇಕಡಾಕ್ಕಿಂತ ಅಧಿಕ ಅಂಕ ಗಳಿಸಿದವರಿಗೆ 10 ಶೇಕಡಾ ಶುಲ್ಕ ರಿಯಾಯಿತಿಯಿದೆ. ಪ್ರತಿ 20 ವಿದ್ಯಾರ್ಥಿಗಳಿಗೆ ಒಬ್ಬರು ಮೆಂಟರ್, ಡೈಲಿ ಡೌಟ್ ಕ್ಲಿಯರ್‌ಸೆಶನ್ಸ್, ವಾರಾಂತ್ಯ ಮೋಕ್ ಟೆಸ್ಟ್ , ಪ್ರಥಮ ಹಾಗೂ ದ್ವಿತೀಯ ವರ್ಷದ ಪೂರ್ಣ ಪಾಠಗಳ ಪುನರಾವರ್ತನೆ, ಸ್ಮರಣಾ ಶಕ್ತಿ ಹೆಚ್ಚಿಸಲು ಮಾರ್ಗದರ್ಶನ ಸೇರಿ ಹಲವು ವೈಶಿಷ್ಟ್ಯಗಳು ಎಕ್ಸೆಲ್ ಲ್ಯಾಂಗ್ ಟರ್ಮ್ ನೀಟ್ ಕೋಚಿಂಗ್ ನಲ್ಲಿದೆ. ಸರ್ವ ಸೌಲಭ್ಯಗಳಿರುವ, ಸುಸಜ್ಜಿತ ಹಾಸ್ಟೆಲ್ ಗಳು ಬಾಲಕ- ಬಾಲಕಿಯರಿಗೆ ಪ್ರತ್ಯೇಕವಿದೆ. ಸ್ಥಳೀಯ ವಿದ್ಯಾರ್ಥಿಗಳಿಗೆ ಕಾಲೇಜು ಬಸ್ ವ್ಯವಸ್ಥೆ ಕಲ್ಪಿಸಲಾಗಿದೆ. ಸೀಮಿತ ವಿದ್ಯಾರ್ಥಿಗಳಿಗಷ್ಟೇ ಪ್ರವೇಶ. ಮೇ ತಿಂಗಳ 11 ರಿಂದ ನೂತನ ಲಾಂಗ್ ಟರ್ಮ್ ಬ್ಯಾಚ್‌ಗಳು ಪ್ರಾರಂಭಗೊಳ್ಳಲಿವೆ. ಆಸಕ್ತರು ಸಂಪರ್ಕಿಸಲು ವಿನಂತಿಸಲಾಗಿದೆ. ಹೆಚ್ಚಿನ ಮಾಹಿತಿಗೆ 8867242769/9880899769 ಜಂಗಮವಾಣಿಗೆ ಕರೆ ಮಾಡ ಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಬೆಳ್ತಂಗಡಿ: ನಾಗರ ಹಾವಿನ 16 ಮೊಟ್ಟೆಗಳಿಗೆ ಕೃತಕ ಕಾವು: ಮರಿಗಳ ರಕ್ಷಣೆ

ಗುಂಡಿಕಂಡ: ಮನೆಯ ಗೋಡೆಯ ಒಳಗಿದ್ದ ಹಾವು ಹಿಡಿದಾ ಪತ್ತೆಯಾದ ಮೊಟ್ಟೆ

• **ಕನ್ನಡಪ್ರಭವಾರ್ತೆ** ಬೆಳ್ತಂಗಡಿ

ಮನೆಯ ಗೋಡೆಯೊಂದರಲ್ಲಿ ಸಿಕ್ಕಿದ ನಾಗರ ಹಾವಿನ ಮೊಟ್ಟೆಗಳಿಗೆ ಕೃತಕ ಕಾವು ನೀಡಿ ರಕ್ಷಿಸಿ 16 ಮರಿಗಳನ್ನು ಸುರಕ್ಷಿತವಾಗಿ ಅರಣ್ಯಕ್ಕೆ ಬಿಡಲಾಗಿದೆ.

ನೆರಿಯ ಗ್ರಾಮದ ಗುಂಡಿಕಂಡ ಬೊಮ್ಮಣ್ಣ ಗೌಡ ಎಂಬವರ ಮನೆಯ ಗೋಡೆಯ ಒಳಗಡೆ ಕಳೆದ ಕೆಲವು ದಿನಗಳ ಹಿಂದೆ ನಾಗರಹಾವು ಕಂಡುಬಂದಿತ್ತು. ಇದನ್ನು ರಕ್ಷಿಸಿ ಅರಣ್ಯಕ್ಕೆ ಬಿಡಲು ಸಮಾಜ ಸೇವಕ, ಉರಗ ಮಿತ್ರ ಕಕ್ಕಿಂಜೆಯ ಸ್ನೇಕ್ ಅನಿಲ್ ಅವರಿಗೆ ಮಾಹಿತಿ ನೀಡಲಾಗಿತ್ತು.

ಗೋಡೆಯ ಒಳಗಡೆ ಇದ್ದ ನಾಗರಹಾವನ್ನು ಹಿಡಿದಾಗ ಸುಮಾರು 16 ಮೊಟ್ಟೆಗಳು ಪತ್ತೆಯಾಗಿದ್ದವು. ಈ ಮೊಟ್ಟೆಗಳಿಗೆ ಇರುವೆಗಳು ಮುತ್ತಿಕೊಂಡಿದ್ದು ಅವುಗಳ ಸ್ಥಿತಿ ಅಪಾಯಕಾರಿಯಾಗಿತ್ತು. ಇದನ್ನು ಗಮನಿಸಿ ಅವುಗಳನ್ನು ಗೋಡೆಯಿಂದ ಹೊರ ತೆಗೆದು ಅಗತ್ಯ ಇರೈಕೆ ನೀಡಿ ಕೃತಕ ಕಾವು ನೀಡುವ ಕೆಲಸವನ್ನು ಮಾಡಿದರು. ಇದೀಗ 16 ಮರಿಗಳು ಮೊಟ್ಟೆಯಿಂದ ಹೊರಬಂದಿವೆ. ಆರೋಗ್ಯವಾಗಿದ್ದ ಈ ನಾಗರಹಾವಿನ ಮರಿಗಳನ್ನು ಅರಣ್ಯ ಇಲಾಖೆಯ ಸಹಕಾರದಲ್ಲಿ ಚಾರ್ಮಾಡಿ ಘಾಟಿ ವಿಭಾಗದ ಸುರಕ್ಷಿತ ಅರಣ್ಯ ಪ್ರದೇಶಕ್ಕೆ ಬಿಡಲಾಗಿದೆ.



ಸ್ನೇಕ್ ಅನಿಲ್



ನಾಗರ ಹಾವಿನ ಮರಿಗಳನ್ನು ಅರಣ್ಯಕ್ಕೆ ಬಿಡಲಾಯಿತು.

ಉದ್ಘಾಟನೆ ಪೌಷ್ಟಿಕ ಆಹಾರ ಮಾಹಿತಿ ಶಿಬಿರ ಚಾಲನೆ

ಮಕ್ಕಳ ಬೆಳವಣಿಗೆಗೆ ಶಿಬಿರಗಳು ಪೂರಕ: ಪಿಜಿಆರ್ ಸಿಂಧ್ಯಾ

• **ಕನ್ನಡಪ್ರಭವಾರ್ತೆ** ಬೆಳ್ತಂಗಡಿ

ಮಕ್ಕಳು ಉತ್ತಮ ವಿಚಾರಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಪೋಷಕರಿಗೆ ಕೃತಜ್ಞರಾಗಿರಬೇಕು. ಮಕ್ಕಳು ಮೊಬೈಲ್ ಗೀಳಿನಿಂದ ಹೊರಬರಲು ಶಿಬಿರಗಳು ಪೂರಕ. ಶಿಬಿರಗಳು ಮಕ್ಕಳ ಬೌದ್ಧಿಕ ಬೆಳವಣಿಗೆಗೆ ಕಾರಣವಾಗುತ್ತದೆ ಎಂದು ಭಾರತ ಸ್ಕೌಟ್ಸ್ ಅಂಡ್ ಗೈಡ್ ನ ಮುಖ್ಯ ಆಯುಕ್ತ ಪಿಜಿಆರ್ ಸಿಂಧ್ಯಾ ಹೇಳಿದರು.

ಸೋಮವಾರ ಉಜಿರೆಯ ಎಸ್ ಡಿಎಂಸಿ ಎನ್ ವೈಎಸ್ ರತ್ನಮ್ಮ ಸಭಾಭವನದಲ್ಲಿ ಜರಗಿದ ರಾಜ್ಯ ಮಟ್ಟದ ಪ್ರಕೃತಿ ಚಿಕಿತ್ಸೆ, ಯೋಗ ಹಾಗೂ ಪೌಷ್ಟಿಕ ಆಹಾರ ಮಾಹಿತಿ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು.

ಎಸ್ ಡಿ ಎಂ ಸಿಎನ್ ವೈ ಕಾಲೇಜಿನ ಪ್ರಿನ್ಸಿಪಾಲ್ ಡಾ.ಪ್ರಶಾಂತ್ ಶೆಟ್ಟಿ ಅಧ್ಯಕ್ಷತೆ ವಹಿಸಿ ಮಾತನಾಡಿ ಶಿಬಿರದ ರೂಪುರೇಷೆಗಳ ಕುರಿತು ಮಾಹಿತಿ ನೀಡಿದರು.

ರಾಜ್ಯ ಸಂಘಟನಾ ಆಯುಕ್ತ ಎಂ. ಪ್ರಭಾಕರ್ ಭಟ್, ಜಿಲ್ಲಾ ಗೈಡ್ ಆಯುಕ್ತೆ ವಿಮಲಾ ರಂಗಯ್ಯ, ಬೆಳ್ತಂಗಡಿ ಸ್ಥಳೀಯ ಸಂಸ್ಥೆಯ ಉಪಾಧ್ಯಕ್ಷ ವಿಠ್ಠಲ ಶೆಟ್ಟಿ, ಜಿಲ್ಲಾ ಸಹಾಯಕ ಆಯುಕ್ತ ಬಿ.ಸೋಮಶೇಖರ್‌ಶೆಟ್ಟಿ, ಶಿಬಿರ ನಿರ್ದೇಶಕ ಡಾ.ರವಿ ಎಂ.ಎನ್., ಬೆಳ್ತಂಗಡಿ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಪ್ರಮೀಳಾ, ರಾಜ್ಯ ಸಹಾಯಕ ಸಂಘಟನಾ ಆಯುಕ್ತ ಭರತ್ ರಾಜ್ ಕೆ ಉಪಸ್ಥಿತರಿದ್ದರು. ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ರಾಜ್ಯ ಸಂಸ್ಥೆ, ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆ, ಬೆಳ್ತಂಗಡಿ ಸ್ಥಳೀಯ ಸಂಸ್ಥೆ ಹಾಗೂ ಎಸ್ ಡಿ ಯಎಂ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವಿಜ್ಞಾನಗಳ ಮಹಾವಿದ್ಯಾಲಯ ಉಜಿರೆ ಇವರ ಸಹಭಾಗಿತ್ವದಲ್ಲಿ ಕಾರ್ಯಕ್ರಮ ಮೇ 8ರವರೆಗೆ ಜರಗಲಿದೆ.



ಉಜಿರೆಯಲ್ಲಿ ರಾಜ್ಯ ಮಟ್ಟದ ಪ್ರಕೃತಿ ಚಿಕಿತ್ಸೆ, ಯೋಗ ಹಾಗೂ ಪೌಷ್ಟಿಕ ಆಹಾರ ಮಾಹಿತಿ ಶಿಬಿರ

■ ಮಕ್ಕಳು ಉತ್ತಮ ವಿಚಾರಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಪೋಷಕರಿಗೆ ಕೃತಜ್ಞರಾಗಿರಬೇಕು. ಮಕ್ಕಳು ಮೊಬೈಲ್ ಗೀಳಿನಿಂದ ಹೊರಬರಲು ಶಿಬಿರಗಳು ಪೂರಕ. ಶಿಬಿರಗಳು ಮಕ್ಕಳ ಬೌದ್ಧಿಕ ಬೆಳವಣಿಗೆಗೆ ಕಾರಣವಾಗುತ್ತದೆ ಎಂದು ಭಾರತ ಸ್ಕೌಟ್ಸ್ ಅಂಡ್ ಗೈಡ್ ನ ಮುಖ್ಯ ಆಯುಕ್ತ ಪಿಜಿಆರ್ ಸಿಂಧ್ಯಾ ಹೇಳಿದರು. ಸೋಮವಾರ ಉಜಿರೆಯ ಎಸ್ ಡಿಎಂಸಿ ಎನ್ ವೈಎಸ್ ರತ್ನಮ್ಮ ಸಭಾಭವನದಲ್ಲಿ ಜರಗಿದ ರಾಜ್ಯ ಮಟ್ಟದ ಪ್ರಕೃತಿ ಚಿಕಿತ್ಸೆ, ಯೋಗ, ಪೌಷ್ಟಿಕ ಆಹಾರ ಶಿಬಿರ ಉದ್ಘಾಟಿಸಿ ಮಾತನಾಡಿದರು.


ರಾಜ್ಯದಲ್ಲಿ ತಾಪಮಾನ
ಡಿಗ್ರಿ ಸೆಲ್ಸಿಯಸ್‌ಗಳಲ್ಲಿ

	ಬೀದರ್	ಕಲಬುರಗಿ	ರಾಯಚೂರು	ವಿಜಯಪುರ	ಗದಗ
ಗರಿಷ್ಠ	43.0	41.1	40.0	39.5	38.0
ಕನಿಷ್ಠ	21.6	27.0	25.4	22.6	21.8

ಕನ್ನಡಪ್ರಭ
ಬುಧವಾರ 6.05.2026

ಆಳ್ವಾಸ್‌ನಲ್ಲಿ ಈ ವರ್ಷದಿಂದಲೇ ಎಂಬಿಬಿಎಸ್: ಡಾ.ಮೋಹನ ಆಳ್ವ

ಮೂಡುಬಿದಿರೆ: ಮುಂದಿನ ಶೈಕ್ಷಣಿಕ ವಿಸ್ತರಣೆಯ ಭಾಗವಾಗಿ ಮೂಡುಬಿದಿರೆ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನವು ಈ ಶೈಕ್ಷಣಿಕ ವರ್ಷದಿಂದಲೇ ವೈದ್ಯಕೀಯ ಶಿಕ್ಷಣ (ಎಂಬಿಬಿಎಸ್) ಕೋರ್ಸ್ ಪ್ರಾರಂಭಿಸಲಿದೆ ಎಂದು ಸಂಸ್ಥೆಯ ಅಧ್ಯಕ್ಷ ಡಾ.




ಎಂ.ಮೋಹನ ಆಳ್ವ ತಿಳಿಸಿದರು. ಮಂಗಳವಾರ ಸುದ್ದಿಗಾರರ ಜೊತೆ ಮಾತನಾಡಿ, ಸಂಸ್ಥೆಯ ಶೈಕ್ಷಣಿಕ ಬೆಳವಣಿಗೆ ಕುರಿತು ಸಂಪೂರ್ಣ ಮಾಹಿತಿ ಹಂಚಿಕೊಂಡರು. ವೈದ್ಯಕೀಯ ಕ್ಷೇತ್ರದ ಮಹತ್ವವನ್ನು ತಮ್ಮ ಸ್ವಂತ ಅನುಭವದ ಮೂಲಕ ಆಳ್ವ ಅವರು ವಿವರಿಸಿದರು. ವೈದ್ಯಕೀಯ ಕ್ಷೇತ್ರದಲ್ಲಿ ಮಾನವೀಯ ಸ್ಪರ್ಶ ಅತ್ಯಂತ ಮುಖ್ಯ ಎಂದು ಅಭಿಪ್ರಾಯಪಟ್ಟ ಡಾ. ಮೋಹನ ಆಳ್ವ ಅವರು, ಹೊಸ ಕೋರ್ಸ್‌ನ ಆರಂಭದ ಬಗ್ಗೆ ಅಧಿಕೃತವಾಗಿ ಘೋಷಣೆ ಮಾಡಿದರು.

ವಿಡಿಯೋ ಕಾಲ್‌ನಲ್ಲಿ ಮಗುವನ್ನು ತೋರಿಸದ್ದಕ್ಕೆ ಅತ್ತೆಗೆ ಚಾಕು ಹಾಕಿದ!

ಬೆಳಗಾವಿ: ವಿಡಿಯೋ ಕಾಲ್ ಮಾಡಿ ಮಗು ತೋರಿಸಲಿಲ್ಲ ಎಂದು ಹೆಂಡತಿ ಮನೆಗೆ ಬಂದು ಅತ್ತೆಗೆ ಅಳಿಯ ಚಾಕು ಇರಿದ ಘಟನೆ ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಆಲದಕಟ್ಟಿ ಗ್ರಾಮದಲ್ಲಿ ನಡೆದಿದೆ. ಘಟನೆಗೆ ಸಂಬಂಧಿಸಿದಂತೆ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ. ಮಹಾದೇವಿ ಕರಿಗಾರ (45) ಗಂಭೀರವಾಗಿ ಗಾಯಗೊಂಡ ಮಹಿಳೆ. ಅರವಿಂದ ಗವಳಿ (26) ಬಂಧಿತ ಆರೋಪಿ. ಅರವಿಂದ ದಂಪತಿಗೆ ಇತ್ತೀಚೆಗೆ ಹೆಣ್ಣು ಮಗುವಾಗಿತ್ತು. ಪತ್ನಿ ತವರು ಮನೆಯಲ್ಲಿ ಇದ್ದಳು. ಈ ವೇಳೆ ಪತ್ನಿಗೆ ಪದೇಪದೇ ವಿಡಿಯೋ ಕಾಲ್ ಮಾಡಿ ಮಗುವನ್ನು ತೋರಿಸುವಂತೆ ಅರವಿಂದ ಒತ್ತಾಯಿಸುತ್ತಿದ್ದ. ಈ ವಿಚಾರವಾಗಿ ಜಗಳ ನಡೆದಿದೆ ಎನ್ನಲಾಗಿದೆ. ಇದರಿಂದ ಕೋಪಗೊಂಡ ಅರವಿಂದ, ಪತ್ನಿ ಇದ್ದ ಮನೆಗೆ ಬಂದು ಅತ್ತೆಗೆ ಚಾಕುವಿನಿಂದ ಇರಿದಿದ್ದಾನೆ. ಮಹಾದೇವಿಗೆ ಬೆಳಗಾವಿಯ ಬಿಮ್ಸ್‌ನ ಐಸಿಯುನಲ್ಲಿ ಚಿಕಿತ್ಸೆ ಮುಂದುವರಿದಿದೆ.

ಕೆಎಸ್ಸಾರ್ಟಿಸಿ ಪಲ್ಲಕ್ಕಿ ಬಸ್‌ಗೆ ಬೆಂಕಿ: 13 ಮಂದಿ ಪ್ರಯಾಣಿಕರು ಪಾರು



ರಾಣೆಬೆನ್ನೂರು(ಹಾವೇರಿ): ಬೆಂಗಳೂರಿನಿಂದ ಗದಗ ಕಡೆಗೆ ತೆರಳುತ್ತಿದ್ದ ಕೆಎಸ್‌ಆರ್‌ಟಿಸಿ ಪಲ್ಲಕ್ಕಿ ಬಸ್‌ಗೆ ಬೆಂಕಿ ತಗುಲಿ ಸಂಪೂರ್ಣ ಸುಟ್ಟು ಭಸ್ಮವಾದ ಘಟನೆ ಮಂಗಳವಾರ ರಾಣೆಬೆನ್ನೂರು ತಾಲೂಕಿನ ದೇವರಗುಡ್ಡ ಬಳಿ ಹೊನ್ನಾಳಿ-ಗದಗ ರಸ್ತೆಯಲ್ಲಿ ಸಂಭವಿಸಿದೆ. ಚಾಲಕನ ಸಮಯ ಪ್ರಜ್ಞೆಯಿಂದ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ ಎಲ್ಲಾ 13 ಪ್ರಯಾಣಿಕರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಬಸ್‌ನ ಚಕ್ರದಹತ್ತಿರಬೆಂಕಿಕಾಣಿಸಿಕೊಳ್ಳುತ್ತಿದ್ದಂತೆಯೇ ಚಾಲಕ ಎಲ್ಲಾ ಪ್ರಯಾಣಿಕರನ್ನು ಜಾಗೃತಗೊಳಿಸಿ ಬಸ್‌ನಿಂದ ಕೆಳಕ್ಕಿಳಿಸಿದರು.

ಶಾಸಕ ಪೊನ್ನಣ್ಣ ಪುತ್ರಿಯರ ವಿರುದ್ಧ ಅವಹೇಳನಕಾರಿ ಸಂದೇಶ: ದೂರು

ಬೆಂಗಳೂರು: ವಾಟ್ಸ್‌ಆ್ಯಪ್ ಗ್ರೂಪ್‌ವೊಂದರಲ್ಲಿ ಸಿಎಂರ ಕಾನೂನು ಸಲಹೆಗಾರ, ಶಾಸಕ ಪೊನ್ನಣ್ಣ ಅವರ ಪುತ್ರಿಯರ ವಿರುದ್ಧ ಅವಹೇಳನಕಾರಿ ಮತ್ತು ಪ್ರಚೋದನಾಕಾರಿ ಸಂದೇಶ ಹಾಕಿದ್ದ ವ್ಯಕ್ತಿ ವಿರುದ್ಧ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್‌ದಾಖಲಾಗಿದೆ. ಕೆಪಿಸಿಸಿ ಪದಾಧಿಕಾರಿ ಬಿ.ಎನ್. ಆನಂದ್ ಎಂಬುವವರು ನೀಡಿದ ದೂರಿನನ್ವಯ ದೊರೆ ಎಂಬಾತನ ವಿರುದ್ಧ ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕೊಡಗಿನ ಸಮಸ್ಯೆಗಳು ಎಂಬ ವಾಟ್ಸ್‌ಆ್ಯಪ್ ಗ್ರೂಪಿನಲ್ಲಿ ಏ.29 ರಂದು ಕನ್ನಿಗುಂಡ ಹಮ್ಮಿ ಎಂಬುವರು ಕೆಲ ಸಮಸ್ಯೆಗಳನ್ನು ಗ್ರೂಪ್‌ನಲ್ಲಿ ಹಾಕಿದ್ದರು. ಇದಕ್ಕೆ ಗ್ರೂಪ್‌ನಲ್ಲಿಯೇ ಪ್ರತಿಕ್ರಿಯಿಸಿದ ದೊರೆ ಎಂಬ ವ್ಯಕ್ತಿಯು 'ಪೊನ್ನಣ್ಣ ಅವರಿಗೆ ಇಬ್ಬರು ಹೆಣ್ಣು ಮಕ್ಕಳಿದ್ದು, ಕಾದು ನೋಡಿ ಕರ್ಮ ರಿಟರ್ನ್ ಆಗಲಿದೆ' ಎಂದು ಅವಹೇಳನಕಾರಿ ಹಾಗೂ ಪ್ರಚೋದನಕಾರಿ ಸಂದೇಶವನ್ನು ಹಾಕಿದ್ದರು.

ಸುದ್ದಿ ಸಿಂಚನ

ಮಕ್ಕಳ ಮೇಲೆ ದೌರ್ಜನ್ಯ ಆರೋಪ: ವಚನ ಶ್ರೀಗೆ ನಿರೀಕ್ಷಣಾ ಜಾಮೀನು

ಹರಿಹರ: ಇಲ್ಲಿನ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ಪೀಠಾಧಿಪತಿ ಶ್ರೀ ವಚನಾನಂದ ಸ್ವಾಮೀಜಿ



ಅವರಿಗೆ ಮಕ್ಕಳ ದುರ್ಬಳಕೆ ಹಾಗೂ ದೌರ್ಜನ್ಯದ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಜಿಲ್ಲಾ ನ್ಯಾಯಾಲಯವು ನಿರೀಕ್ಷಣಾ ಜಾಮೀನು ಮಂಜೂರು ಮಾಡಿದೆ. ಮಠದ ಆಂತರಿಕ ವಿವಾದಗಳ ನಡುವೆಯೇ ಕೇಳಿಬಂದಿದ್ದ ಈ ಗಂಭೀರ ಆರೋಪದ ಹಿನ್ನೆಲೆಯಲ್ಲಿ ಶ್ರೀಗಳ ಪರವಾಗಿ ಏ.21ರಂದು ಜಿಲ್ಲಾ ನ್ಯಾಯಾಲಯದಲ್ಲಿ ನಿರೀಕ್ಷಣಾ ಜಾಮೀನಿಗಾಗಿ ಅರ್ಜಿ ಸಲ್ಲಿಕೆ ಆಗಿತ್ತು. ಅರ್ಜಿ ವಿಚಾರಣೆ ನಡೆಸಿದ ಕೋರ್ಟ್, ಸರ್ಕಾರಿ ಅಭಿಯೋಜಕರ ಆಕ್ಷೇಪಣೆ ಹಾಗೂ ಪ್ರತಿವಾದಗಳನ್ನು ಆಲಿಸಿದ ನಂತರ ಶ್ರೀಗಳಿಗೆ ನಿರೀಕ್ಷಣಾ ಜಾಮೀನು ನೀಡಿ ಆದೇಶ ಹೊರಡಿಸಿದ್ದು, ಶ್ರೀಗಳಿಗೆ ತಾತ್ಕಾಲಿಕ ಸಮಾಧಾನ ಸಿಕ್ಕಂತಾಗಿದೆ.

ಕರ್ತವ್ಯದ ವೇಳೆ ಗುಂಡು ಹಾರಿಸಿಕೊಂಡು ಕೊಡಗಿನ ಯೋಧ ಆತ್ಮಹತ್ಯೆ

ಸೋಮವಾರಪೇಟೆ(ಕೊಡಗು): ಜಮ್ಮು ಕಾಶ್ಮೀರದಲ್ಲಿ ಕೊಡಗು ಮೂಲದ ಸಿಆರ್‌ಪಿಎಫ್ ಯೋಧರೊಬ್ಬರು



ಕರ್ತವ್ಯದ ವೇಳೆ ಗುಂಡು ಹಾರಿಸಿಕೊಂಡು ಆತ್ಮಹತ್ಯೆಗೆ ಶರಣಾಗಿರುವ ಘಟನೆ ಸೋಮವಾರ ನಡೆದಿದೆ. ಸೋಮವಾರಪೇಟೆ ತಾಲೂಕಿನ ಯಡವಾರೆ ಗ್ರಾಮದ ಕೆ.ಜೆ. ನವೀನ್ ಕುಮಾರ್‌ಮೃತ ಯೋಧ. ಆತ್ಮಹತ್ಯೆಗೆ ಕಾರಣ ತಿಳಿದುಬಂದಿಲ್ಲ.

ವಾಡಿ-ಗುಂತಕಲ್ 3, 4ನೇ ರೈಲು ಮಾರ್ಗಕ್ಕೆ ಕೇಂದ್ರ ಓಕೆ

ನವದೆಹಲಿ: ಕರ್ನಾಟಕದ ಕಲಬುರಗಿ ಜಿಲ್ಲೆಯ ವಾಡಿ ಹಾಗೂ ಆಂಧ್ರಪ್ರದೇಶದ ಗುಂತಕಲ್ ನಡುವೆ 3ನೇ ಹಾಗೂ 4ನೇ ರೈಲು ಮಾರ್ಗ ಹಾಕಲು ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಂಪುಟ ಸಭೆ ಅನುಮೋದನೆ ನೀಡಿದೆ. ಇದಲ್ಲದೆ ನಾಗ್ಡಾ - ಮಥುರಾ ಹಾಗೂ ಬುರ್ವಾಲ್-ಸೀತಾಪುರ್‌ನಡುವೆಯೂ 3 ಹಾಗೂ 4ನೇ ರೈಲು ಮಾರ್ಗ ಹಾಕಲಾಗುತ್ತದೆ. ಇದು 23,437 ಕೋಟಿ ರು. ವೆಚ್ಚದ ಯೋಜನೆ ಆಗಿದ್ದು, ಮಧ್ಯಪ್ರದೇಶ, ರಾಜಸ್ಥಾನ, ಉತ್ತರ ಪ್ರದೇಶ, ಕರ್ನಾಟಕ, ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳಾದ್ಯಂತ 19 ಜಿಲ್ಲೆಗಳಿಗೆ ಲಾಭ ತರಲಿದೆ. ಭಾರತೀಯ ರೈಲ್ವೆಯ ಅಸ್ತಿತ್ವದಲ್ಲಿರುವ ಜಾಲ ಸುಮಾರು 901 ಕಿ.ಮೀ.ಗಳಷ್ಟು ಹೆಚ್ಚಲಿದೆ. 83 ಲಕ್ಷ ಜನಸಂಖ್ಯೆಹೊಂದಿರುವ ಸುಮಾರು 4,161 ಹಳ್ಳಿಗಳಿಗೆ ಸಂಪರ್ಕವನ್ನು ಹೆಚ್ಚಿಸುತ್ತದೆ.

2 ಗಡಿ ಜಿಲ್ಲೆಗಳಲ್ಲಿ ಮಳೆ: ರೈತರಲ್ಲಿ ಮಂದಹಾಸ

ಮಡಿಕೇರಿ/ಚಾಮರಾಜನಗರ: ಬಿಸಿಲಿನಿಂದ ಬಳಲಿದ್ದ ಜನತೆಗೆ ರಾಜ್ಯದ ಗಡಿ ಜಿಲ್ಲೆಗಳಾದ ಕೊಡಗು ಮತ್ತು ಚಾಮರಾಜನಗರದ ಹಲವೆಡೆ ಮಳೆಯ ಸಿಂಚನವಾಗಿದ್ದು ಕೃಷಿ ಚಟುವಟಿಕೆಗಳು ಗರಿಗೆದರಿವೆ. ಇದರಿಂದ ರೈತರಲ್ಲಿ ಸಂತಸ ಮೂಡಿಸಿದೆ. ಕೊಡಗು ಜಿಲ್ಲೆಯ ವಿವಿಧ ಕಡೆಗಳಲ್ಲಿ ಮಂಗಳವಾರ ಮಳೆಯಾಗಿದೆ. ಮಡಿಕೇರಿಯಲ್ಲಿ ರಾತ್ರಿ ಕೆಲ ಕಾಲ ಭರ್ಜರಿ, ಉಳಿದಂತೆ ಸಿದ್ದಾಪುರ, ಸುಂಟಿಕೊಪ್ಪ ಸೇರಿದಂತೆ ಹಲವು ಕಡೆಗಳಲ್ಲಿ ಬಿಸಿಲಿನಿಂದ ಕಂಗೆಟ್ಟಿದ್ದ ಜನತೆಗೆ ಮಳೆ ತಂಪು ನೀಡಿದೆ. ಇನ್ನು ಚಾಮರಾಜನಗರ ತಾಲೂಕಿನಲ್ಲಿ ಗಾಳಿ ಸಹಿತ ಮಳೆಯಾಗಿದೆ.

ಶೃಂಗೇರಿ ಮರುಎಣಿಕೇಲಿ ಓಟ್ ಡಕಾಯಿತಿ: ಸಿಎಂ

ಸಿಬ್ಬಂದಿ ನೆರವಿನಿಂದ ಅಂಚೆ ಮತ ಚೇಟಿ ತಿದ್ದಿದ್ದಾರೆ | ಕಾಂಗ್ರೆಸ್‌ನ ರಾಜೇಗೌಡರ 255 ಮತ ಅನೂರ್ಜಿತಗೊಳಿಸಲಾಗಿದೆ: ಸಿದ್ದು ಆರೋಪ

2023ರಲ್ಲಿ ಮತ ಎಣಿಕೆ ನಡೆದಾಗ ಈ ಮತಗಳು ಸರಿಯಾಗೇ ಇದ್ದವು | ಅವು ಈಗ ಹೇಗೆ ಅನೂರ್ಜಿತ ಆಗಲು ಸಾಧ್ಯ: ಸಿದ್ದರಾಮಯ್ಯ ಪ್ರಶ್ನೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

'ಶೃಂಗೇರಿ ಕ್ಷೇತ್ರದ ಅಂಚೆ ಮತ ಮರು ಎಣಿಕೆಯಲ್ಲಿ ದೇಶದಲ್ಲೇ ಗಂಭೀರ ಎನ್ನಬಹುದಾದ ಕ್ರಿಮಿನಲ್ ಷಡ್ಯಂತ್ರ ನಡೆದಿದೆ. ಇದು ವೋಟ್ ಚೋರಿ ಅಲ್ಲ ವೋಟ್ ಡಕಾಯಿತಿ. ಬಿಜೆಪಿಯವರು ಸಿಬ್ಬಂದಿ ಸಹಾಯದಿಂದ ಅಂಚೆ ಮತ ಚೀಟಿ ತಿದ್ದಿ ಟಿ.ಡಿ.ರಾಜೇಗೌಡರಿಗೆ ಬಿದ್ದಿದ್ದ 255 ಮತ ಅನೂರ್ಜಿತಗೊಳಿಸಿದ್ದಾರೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಗಂಭೀರ ಆರೋಪ ಮಾಡಿದ್ದಾರೆ.



ಮಂಗಳವಾರ ಸುದ್ದಿಗೋಷ್ಠಿ ನಡೆಸಿದ ಅವರು, '2023ರ ಚುನಾವಣೆ ವೇಳೆಯಲ್ಲೇ ಮತ ಎಣಿಕೆ ಬಳಿಕ ಮತಪತ್ರ ಹಾಗೂ ದಾಖಲೆಗಳನ್ನು ಸಾಗಿಸುವಾಗ ಸಿಬ್ಬಂದಿಯೇ ಮತ ತಿದ್ದಿದ್ದಾರೆ. ಅಂಚೆ ಮತ ಮರು ಎಣಿಕೆ ವೇಳೆ ರಾಜೇಗೌಡರಿಗೆ ಚಲಾವಣೆಯಾಗಿದ್ದ 569 ಅಂಚೆ ಮತಗಳಲ್ಲಿ 255 ಮತಗಳನ್ನು ಅನೂರ್ಜಿತಗೊಳಿಸಲಾಗಿದೆ. 2023ರ ಮತ ಎಣಿಕೆ ವೇಳೆ ಈ ಮತಪತ್ರಗಳನ್ನು ಬಿಜೆಪಿ ಏಜೆಂಟ್ ನೋಡಿ ಸರಿ ಇದೆ ಎಂದು ಸಹಿ ಮಾಡಿದ್ದಾರೆ. ಅಂಥ ಮತಗಳು ಈಗ ಹೇಗೆ ಅನೂರ್ಜಿತಗೊಂಡವು?' ಎಂದು ಸಿಎಂ ಪ್ರಶ್ನಿಸಿದ್ದಾರೆ.

ಮತಪತ್ರದಲ್ಲಿ ತಪ್ಪಾಗಿ ಇಂಕ್ ಗುರುತು ಮಾಡಲಾಗಿದೆ ಎಂಬ ಕಾರಣ ನೀಡಿ ರಾಜೇಗೌಡರಿಗೆ ಚಲಾವಣೆ ಆಗಿರುವ ಮತಗಳನ್ನೇ ಅನೂರ್ಜಿತಗೊಳಿಸಲಾಗಿದೆ. ಇದನ್ನು ಚುನಾವಣಾ ಅಧಿಕಾರಿಗಳು ಫೋರೆನ್ಸಿಕ್ ಲ್ಯಾಬ್‌ಗೆ ಕಳುಹಿಸಬೇಕಿತ್ತು. ಈ ರೀತಿ ಆಗಿರುವುದು ಕೋರ್ಟ್‌ನ ಗಮನಕ್ಕಾದರೂ ತರಬೇಕಿತ್ತು. ಮತ ಎಣಿಕೆ ಬಗ್ಗೆ ನಮ್ಮ ಚುನಾವಣಾ ಏಜೆಂಟರು ಆಕ್ಷೇಪ ಎತ್ತಿದ್ದು ಸಹಿ ಹಾಕಿಲ್ಲ. ಆದರೂ, ಜಿಲ್ಲಾಧಿಕಾರಿಗಳು ಹಾಗೂ ರಿಟರ್ನಿಂಗ್ ಅಧಿಕಾರಿಗಳು ಮೇಲಿನ ಒತ್ತಡದಿಂದ ತರಾತುರಿಯಲ್ಲಿ ಫಲಿತಾಂಶ ಘೋಷಿಸಿದ್ದಾರೆ. ಇದರ ವಿರುದ್ಧ ಎಫ್‌ಐಆರ್ ದಾಖಲಿಸಿದ್ದು, ಕಾನೂನು ಹೋರಾಟ ಮುಂದುವರೆಸುತ್ತೇವೆ ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

ಸಿಎಂ ಪ್ರಕಾರ ಷಡ್ಯಂತ್ರ ಹೇಗೆ?: ಷಡ್ಯಂತ್ರ ಕುರಿತು ವಿವರಣೆ ನೀಡಿದ ಸಿದ್ದರಾಮಯ್ಯ, ರಾಜೇಗೌಡ ಅವರು 201 ಮತಗಳ ಅಂತರದಿಂದ 2023ರಲ್ಲಿ ಗೆದ್ದಿದ್ದರು. ಅವರ ವಿರುದ್ಧ ಬಿಜೆಪಿಯ ಜೀವರಾಜ್ ಕೋರ್ಟ್ ಮೊರೆ ಹೋಗಿದ್ದು, ನ್ಯಾಯಾಲಯವು ಮಾ.6 ರಂದು ಅಂಚೆ ಮತ ಪತ್ರ ಮಾತ್ರ ಮರು ಎಣಿಕೆ ಮಾಡುವಂತೆ ಆದೇಶ ಮಾಡಿತ್ತು. ಇದಕ್ಕೂ ಮೊದಲು 2023ರಲ್ಲಿ ರಾಜೇಗೌಡರಿಗೆ 59,171 ಮತ, ಜೀವರಾಜ್ ಅವರಿಗೆ 58,970 ಮತ ಬಂದಿದ್ದವು. ಈ ಪೈಕಿ ರಾಜೇಗೌಡರಿಗೆ ಇವಿಎಂ ಮೂಲಕ 58,602 ಹಾಗೂ ಅಂಚೆ ಮತ 569 ಬಂದಿದ್ದು, ಡಿ.ಎನ್.ಜೀವರಾಜ್ ಅವರಿಗೆ 58,278 ಇವಿಎಂ ಮತ ಹಾಗೂ ಅಂಚೆ ಮತ 692 ಬಂದಿದ್ದವು.

ರಾಜೇಗೌಡರನ್ನು ವಿಜಯಿ ಎಂದು ಘೋಷಿಸುವ ಮೊದಲು ಅಂಚೆ ಮತಗಳೆಲ್ಲ ಊರ್ಜಿತ ಮತಗಳು ಎಂದು ರಿಟರ್ನಿಂಗ್ ಅಧಿಕಾರಿ, ಸಹಾಯಕ ರಿಟರ್ನಿಂಗ್ ಅಧಿಕಾರಿ, ಏಜೆಂಟರು ತೀರ್ಮಾನಿಸಿದ್ದರು. ಆದರೂ ಇದನ್ನು ಮತ್ತೆ ವಿವಾದ ಮಾಡಲಾಯಿತು ಎಂದು ಜೀವರಾಜ್ ಹಾಗೂ ಬಿಜೆಪಿ ವಿರುದ್ಧ ಸಿದ್ದರಾಮಯ್ಯ ಹರಿಹಾಯ್ದರು.

ಇಷ್ಟೇ ಮತದಿಂದ ಗೆಲ್ಲುತ್ತೇನೆಂದು ಜೀವರಾಜ್ ಹೇಳಿದ್ದರು: ಡಿಸಿಎಂ

ಜೀವರಾಜ್ ಅವರು ಅಂಚೆ ಮತಗಳ ಮರು ಎಣಿಕೆಗೆ ಮಾತ್ರ ನ್ಯಾಯಾಲಯ ಮೊರೆ ಹೋಗಿದ್ದು ಯಾಕೆ? ಮತಗಳ ಮರುಎಣಿಕೆಗೆ ಮೊದಲೇ ಜೀವರಾಜ್ ಅವರು 52 ಮತಗಳಿಂದಲೇ ಗೆಲ್ಲುತ್ತೇನೆ ಎಂದು ಸಹಚರರಿಗೆ ಹೇಳಿದ್ದಾರೆ. ಬೆಟ್ಟಿಂಗ್ ಕಟ್ಟಲೂ ಕುಮ್ಮಕ್ಕು ನೀಡಿದ್ದಾರೆ. ಹಿಂದೆ ಮತ ಎಣಿಕೆ ವೇಳೆ ಪ್ರತಿ ಮತವನ್ನೂ ಏಜೆಂಟರಿಗೆ ತೋರಿಸಿ ವಿಡಿಯೋ ಮಾಡಿರುತ್ತಾರೆ. ಆಗ ಸರಿಯಿದ್ದ ಮತ ಈಗ ಅನೂರ್ಜಿತ ಎಂದರೆ ಸುಮ್ಮನೆ ಕೂರಬೇಕೆ? ಹೀಗಾಗಿ ಎಫ್‌ಐಆರ್ ದಾಖಲಿಸಿದ್ದೇವೆ. ಇದನ್ನು ಪ್ರಶ್ನಿಸಿ ತರಾತುರಿಯಲ್ಲಿ ಅವರು ನ್ಯಾಯಾಲಯಕ್ಕೆ ಯಾಕೆ ಹೋದರು? ಇದನ್ನು ಇಲ್ಲಿಗೆ ಬಿಡುವುದಿಲ್ಲ. ದೇಶದಲ್ಲೇ ಅತಿ ಗಂಭೀರ ಅಪರಾಧ ಕೃತ್ಯದ ವಿರುದ್ಧ ಹೋರಾಡುತ್ತೇವೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಜೀವರಾಜ್ ವಿರುದ್ಧ ತನಿಖೆಗೆ 2 ದಿನ ಕೋರ್ಟ್ ತಡೆ

ರಾಜಕೀಯ ಒತ್ತಡದಿಂದ ಎಫ್‌ಐಆರ್ | ಪೊಲೀಸರು ಒತ್ತಡಕ್ಕೆ ಮಣಿಯಬಾರದು: ಹೈಕೋರ್ಟ್

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಅಂಚೆ ಮತಗಳ ಮರು ಎಣಿಕೆಯಲ್ಲಿ ಮತಗಳನ್ನು ತಿರುಚಿದ ಆರೋಪ ಸಂಬಂಧ ಶೃಂಗೇರಿ ಬಿಜೆಪಿ ಶಾಸಕರಾಗಿ ಆಯ್ಕೆಯಾಗಿರುವ ಡಿ.ಎನ್. ಜೀವರಾಜ್ ವಿರುದ್ಧ ಚಿಕ್ಕಮಗಳೂರು ಟೌನ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್‌ಗೆ ಹೈಕೋರ್ಟ್ ಎರಡು ದಿನಗಳ ತಾತ್ಕಾಲಿಕ ತಡೆಯಾಜ್ಞೆ ನೀಡಿ ಮಂಗಳವಾರ ಮಧ್ಯಂತರ ಆದೇಶ ಮಾಡಿದೆ.


ಅಲ್ಲದೇ, ಪ್ರಕರಣದಲ್ಲಿ ರಾಜಕೀಯ ಒತ್ತಡಕ್ಕೆ ಮಣಿದು ಎಫ್‌ಐಆರ್ ದಾಖಲಿಸಲಾಗಿದೆ. ಪೊಲೀಸರು ರಾಜಕೀಯ ಒತ್ತಡಗಳಿಗೆ ಮಣಿದು ಕೆಲಸ ಮಾಡಬಾರದು ಎಂದು ನ್ಯಾಯಾಲಯವು ರಾಜ್ಯ ಸರ್ಕಾರ ಹಾಗೂ ಪೊಲೀಸರ ವಿರುದ್ಧ ತೀಕ್ಷ್ಣವಾಗಿ ನುಡಿದಿದೆ.

ಮತ ತಿರುಚಿದ ಆರೋಪ ಮೇಲೆ ಕಾಂಗ್ರೆಸ್ ಏಜೆಂಟ್ ಸುಧೀರ್ ಮುರೊಳ್ಳಿ ದೂರಿನ ಆಧಾರದಲ್ಲಿ ಚಿಕ್ಕಮಗಳೂರು ಟೌನ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣ ರದ್ದತಿ ಕೋರಿ ಜೀವರಾಜ್ ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ವಿ.ಶ್ರೀಶಾನಂದ ಅವರ ರಜಾಕಾಲೀನ ಏಕಸದಸ್ಯ ಪೀಠ ಹೀಗೆ ಅಸಮಾಧಾನ ವ್ಯಕ್ತಪಡಿಸಿತು.

ಜೊತೆಗೆ, ಅರ್ಜಿ ಸಂಬಂಧ ಸರ್ಕಾರ (ಚಿಕ್ಕಮಗಳೂರು ಟೌನ್ ಠಾಣಾ ಪೊಲೀಸರು) ಮತ್ತು ದೂರುದಾರ ಸುಧೀರ್ ಮುರೊಳ್ಳಿಗೆ ನೋಟಿಸ್ ಜಾರಿಗೊಳಿಸಿತು. ಹಾಗೆಯೇ, ಇದೇ ಪ್ರಕರಣ ಸಂಬಂಧ ತಮ್ಮ ವಿರುದ್ಧದ ಎಫ್‌ಐಆರ್‌ಗೆ ತಡೆ ಕೋರಿ 2023ರ ಮೇ ನಲ್ಲಿ ಚಿಕ್ಕಮಗಳೂರು ಜಿಲ್ಲಾಧಿಕಾರಿಯಾಗಿದ್ದ ರಮೇಶ್ ಸಲ್ಲಿಸಿರುವ ಅರ್ಜಿಯಲ್ಲೂ ಇದೇ ಆದೇಶ ಮಾಡಲಾಗುವುದು ಎಂದು ಮೌಖಿಕವಾಗಿ ತಿಳಿಸಿದ ಪೀಠ, ವಿಚಾರಣೆಯನ್ನು 7ಕ್ಕೆ ಮುಂದೂಡಿತು.

ಇದಕ್ಕೂ ಮುನ್ನ ಅರ್ಜಿದಾರ ಡಿ.ಎನ್. ಜೀವರಾಜ್ ಪರ 2023ರ ಮೇ 13ರಂದು ನಡೆದಿದೆ ಎನ್ನಲಾದ ಆರೋಪ ಆಧರಿಸಿ ಈಗ ಪ್ರಕರಣ ದಾಖಲಿಸಲಾಗಿದೆ. ಆಡಳಿತರೂಢ ಪಕ್ಷದ ಅಭ್ಯರ್ಥಿ ಸೋತ ಹಿನ್ನೆಲೆಯಲ್ಲಿ ಈ ಪ್ರಕರಣ ದಾಖಲಿಸಲಾಗಿದೆ. ಇಲ್ಲಿ ರಾಜಕೀಯ ದುರುದ್ದೇಶವಿದೆ ಎಂದು ಆಕ್ಷೇಪಿಸಿದರು.

ಪ್ರಮಾಣ ವಚನಕ್ಕೆ ವಿಳಂಬ: ರಾಜ್ಯಪಾಲರಿಗೆ ದೂರು



ಬೆಂಗಳೂರು: ಶೃಂಗೇರಿ ಶಾಸಕ ಡಿ.ಎನ್.ಜೀವರಾಜ್ ಅವರಿಗೆ ಸ್ಪೀಕರ್‌ಯು.ಟಿ.ಖಾದರ್‌ಪ್ರಮಾಣವಚನ ಬೋಧಿಸಲು ತಡ ಮಾಡುತ್ತಿದ್ದಾರೆ. ಆದ್ದರಿಂದ ತಾವೇ ನೇರವಾಗಿ ಪ್ರಮಾಣವಚನ ಬೋಧಿಸುವಂತೆ ವಿಧಾನಸಭೆ ಪ್ರತಿಪಕ್ಷದ ನಾಯಕ ಆರ್. ಅಶೋಕ್ ಅವರು ರಾಜ್ಯಪಾಲರಿಗೆ ದೂರು ನೀಡಿ ಆಗ್ರಹಿಸಿದ್ದಾರೆ. ಮಂಗಳವಾರ ಜೀವರಾಜ್ ಜತೆ ಲೋಕಭವನಕ್ಕೆ ತೆರಳಿ ರಾಜ್ಯಪಾಲ ಗೆಹಲೋತ್ ಅವರಿಗೆ ಅಶೋಕ್ ದೂರು ಸಲ್ಲಿಸಿದರು.

ಅಧಿಕಾರಿಗಳಿಗೆ ಡಕಾಯಿತರು ಪದ ಬಳಕೆ: ಅಶೋಕ್ ಕಿಡಿ

ಅವರ ಅಧಿಕಾರಿಗಳನ್ನೇ ಸಿಎಂ ಹೀಗೆ ಕರೆದಿದ್ದಾರೆ ಕಾಂಗ್ರೆಸ್ ಸರ್ಕಾರವೇ ಡಕಾಯಿತಿ ಸರ್ಕಾರ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಅಧಿಕಾರಿಗಳ ಬಗ್ಗೆ ಡಕಾಯಿತರು ಪದ ಬಳಸಿರುವ ಸಿದ್ದರಾಮಯ್ಯ ಅವರಿಗೆ ನಾಚಿಕೆಯಾಗಬೇಕು. ಅವರೇ ನೇಮಿಸಿದ ಅಧಿಕಾರಿಗಳನ್ನು ಡಕಾಯಿತರು ಎಂದ ಮೇಲೆ ಅವರ ಸರ್ಕಾರವೂ ಡಕಾಯಿತಿ ಸರ್ಕಾರವೇ ಆಗಿದೆ ಎಂದು ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ್ ತಿರುಗೇಟು ನೀಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಜೀವರಾಜ್ ಅವರ ವಿರುದ್ಧದ ದೂರಿಗೆ ಸಂಬಂಧಿಸಿ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಛೀಮಾರಿ ಹಾಕಿದೆ. ಕಾಂಗ್ರೆಸ್‌ನವರೇ ದೊಡ್ಡ ಡಕಾಯಿತಿ ಮಾಡುತ್ತಾರೆ. ಮತ ಎಣಿಕೆ ವೇಳೆ ಚುನಾವಣಾಧಿಕಾರಿಗೆ ಸಿದ್ದರಾಮಯ್ಯ ಅಥವಾ ಡಿ.ಕೆ.ಶಿವಕುಮಾರ್ ಕರೆ ಮಾಡಿ ಒತ್ತಡ ಹೇರಿದ್ದಾರೆಯೇ ಎಂಬುದರ ಬಗ್ಗೆ ಸಿಬಿಐ ತನಿಖೆ ಆಗಬೇಕಿದೆ ಎಂದರು.

ಸಿದ್ದರಾಮಯ್ಯ ಅವರ ಕೈಕೆಳಗಿನ ಅಧಿಕಾರಿಗಳು ಪೇಮೆಂಟ್ ಗಿರಾಕಿಗಳು ಅಂದ ಮೇಲೆ ಅವರೇ ಟ್ಯಾಂಪರ್ ಮಾಡಲು ಹೇಗೆ ಸಾಧ್ಯ? ಜೀವರಾಜ್ ಸೋತು ಹಲವು ವರ್ಷವಾಗಿರುವಾಗ ಅವರ ಮಾತನ್ನು ಅಧಿಕಾರಿಗಳು ಕೇಳಲು ಸಾಧ್ಯವೇ? ಅಧಿಕಾರಿಗಳು ಸಿಎಂ ಮಾತು ಕೇಳುತ್ತಾರೆ. ಶೃಂಗೇರಿ ಕ್ಷೇತ್ರ ವೋಟ್ ಚೋರಿಗೆ ಉದಾಹರಣೆಯಾಗಿದ್ದು, ಇಡೀ ಸರ್ಕಾರ ವಜಾ ಮಾಡಬೇಕಿದೆ. ಎಲ್ಲ ಕಡೆ ಮತಗಳ್ಳತನ ಆಗುತ್ತಿದೆ ಎಂದರೆ ಸರ್ಕಾರದ ಎಲ್ಲ ಅಧಿಕಾರಿಗಳು ಡಕಾಯಿತರು ಎನ್ನಬೇಕಾಗುತ್ತದೆ. ಎಲ್ಲ ಕಡೆ ಸಿಸಿಟಿವಿ ಕ್ಯಾಮರಾ ಇರುವಾಗ ಕಳ್ಳತನವಾಗಲು ಸಾಧ್ಯವಿಲ್ಲ ಎಂದರು.

ರಾಜ್ಯದ ಕೆಲ ನಗರಗಳಲ್ಲಿ ಕಲುಷಿತ ಗಾಳಿ ಆತಂಕ

ಉಡುಪಿ, ಮಂಗಳೂರಲ್ಲಿ ಕಳಪೆ ಗುಣಮಟ್ಟ | ಶ್ವಾಸಕೋಶ ಸಂಬಂಧಿ ಕಾಯಿಲೆಯ ಭೀತಿ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ರಾಜ್ಯದಲ್ಲಿ ಹಲವು ದಿನಗಳಿಂದ ಗಾಳಿ ಗುಣಮಟ್ಟದಲ್ಲಿ ಏರಿಳಿತ ಕಂಡುಬಂದಿದ್ದು, ರಾಜ್ಯದ ಉಡುಪಿ ಹಾಗೂ ಮಂಗಳೂರು ನಗರಗಳಲ್ಲಿ ಕಳಪೆ ಗುಣಮಟ್ಟ ದಾಖಲಾಗಿದೆ. ಇದರಿಂದಾಗಿ ಶ್ವಾಸಕೋಶ ಸಂಬಂಧಿ ಕಾಯಿಲೆಗಳು ಬರುವ ಸಂಭವವಿದೆ ಎಂದು ತಜ್ಞರು ಎಚ್ಚರಿಕೆ ನೀಡಿದ್ದಾರೆ.

ಕೆಲ ದಿನಗಳಿಂದ ಬೆಂಗಳೂರಿನ ಗಾಳಿ ಗುಣಮಟ್ಟ ಕಳಪೆ ಹಂತ ತಲುಪಿತ್ತು. ಆದರೆ, ಮಂಗಳವಾರ ಸುಧಾರಣೆ ಕಂಡು ಅಪಾಯದಿಂದ ಪಾರಾಗಿದೆ. ದೇಶದ ಉಳಿದ ಯಾವುದೇ ಮೆಟ್ರೋ ಸಿಟಿಗಳಿಗೆ ಹೋಲಿಸಿದರೆ ಬೆಂಗಳೂರಿನಲ್ಲಿ ಗಾಳಿಯ ಗುಣಮಟ್ಟ ಉತ್ತಮ ಮಟ್ಟದಲ್ಲಿದೆ. ಇದರಿಂದಾಗಿ ನಗರದ ಜನರಲ್ಲಿ ಉಂಟಾಗಿದ್ದ ಆತಂಕ ದೂರವಾಗಿದೆ.

ಕೆಲ ದಿನಗಳ ಹಿಂದೆಯಷ್ಟೇ ತೀವ್ರ ಕಳಪೆ ಮಟ್ಟಕ್ಕೆ ಇಳಿದಿದ್ದ ಹುಬ್ಬಳ್ಳಿ ಏರ್‌ಕ್ವಾಲಿಟಿಯಲ್ಲಿ ಸುಧಾರಣೆ ಕಂಡು ಬಂದಿದೆ.

ಸದ್ಯ ಹುಬ್ಬಳ್ಳಿ ಏರ್‌ಕ್ವಾಲಿಟಿ 52ಕ್ಕೆ ತಲುಪಿದೆ. ಆರೋಗ್ಯಕ್ಕೆ ಮಾರಕವಾಗಿರುವ ಬೆಂಗಳೂರಿನ ಅಕಿಐ ಅಂಕೆಗಳಲ್ಲಿ ಕಳೆದ ಕೆಲ ದಿನಗಳಿಗೆ ಹೋಲಿಸಿದರೆ ಸಣ್ಣ ಏರುಪೇರು ಉಂಟಾಗಿತ್ತು. ಡಬ್ಲ್ಯುಎಚ್‌ಒ ಮಾನದಂಡಗಳ ಪ್ರಕಾರ ಈ ಮಟ್ಟದ ಗಾಳಿಯ ಗುಣಮಟ್ಟ ಆರೋಗ್ಯಕ್ಕೆ ಹಾನಿಕರವಾಗಿಯೇ ಉಳಿದಿದೆ.



ಗಾಳಿ ಗುಣಮಟ್ಟ ತಿಳಿಯುವುದು ಹೇಗೆ?

ಉತ್ತಮ	0 - 50
ಮಧ್ಯಮ	50 - 100
ಕಳಪೆ	100 - 150
ಅನಾರೋಗ್ಯಕರ	150 -200
ಗಂಭೀರ	200 - 300
ಅಪಾಯಕಾರಿ	300 - 500

ರಾಜ್ಯದ ಪ್ರಮುಖ ನಗರದಲ್ಲಿ ಗಾಳಿ ಗುಣಮಟ್ಟ (ಎಕ್ಯುಐ)

ಬೆಂಗಳೂರು	98
ಮಂಗಳೂರು	124
ಮೈಸೂರು	84
ಬೆಳಗಾವಿ	42
ಕಲಬುರಗಿ	90
ಶಿವಮೊಗ್ಗ	94
ಬಳ್ಳಾರಿ	96
ಹುಬ್ಬಳ್ಳಿ	58
ಉಡುಪಿ	102
ವಿಜಯಪುರ	99

ಆಡ್ತಿದ್ದ ಮಗುವನ್ನು 100 ಅಡಿ ಎಳೆದೊಯ್ದ ಬೀದಿ ನಾಯಿ!

ವಿಜಯಪುರದಲ್ಲಿ ಘಟನೆ | ತೊಡೆ, ಬೆನ್ನಿಗೆ ಗಾಯ

• **ಕನ್ನಡಪ್ರಭ ವಾರ್ತೆ** ವಿಜಯಪುರ



ಆಡುತ್ತಿದ್ದ ಮಗುವಿನ ಮೇಲೆ ಬೀದಿ ನಾಯಿಗಳು ದಾಳಿ ಮಾಡಿದ್ದು, ಪುಟ್ಟ ಬಾಲಕನನ್ನು ಕಚ್ಚಿ ಸುಮಾರು 100 ಅಡಿ ದೂರ ಎಳೆದೊಯ್ದಿರುವ ಹೃದಯವಿದ್ರಾವಕ ಘಟನೆ ವಿಜಯಪುರ ನಗರದ ರಾಜಕುಮಾರ ಲೇಔಟ್‌ನಲ್ಲಿ ಮಂಗಳವಾರ ಜರುಗಿದೆ.

ಇಲ್ಲಿನ ನಿವಾಸಿ ವಿರಾಜ ಸಂತೋಷ ಬಿರಾದಾರ (3) ಎಂಬ ಮಗು ಗಾಯಗೊಂಡಿದೆ. ಮನೆಮುಂದೆ ಆಟವಾಡುವಾಗ ಬೀದಿ ನಾಯಿಗಳು ಮಗುವಿನ ಮೇಲೆ ದಾಳಿ ಮಾಡಿವೆ. ಈ ವೇಳೆ ಒಂದು ನಾಯಿ ಮಗುವನ್ನು ಎಳೆದುಕೊಂಡು ಓಡುತ್ತಿರುವುದನ್ನು ಕಂಡ ಸ್ಥಳೀಯರು ಕೂಡಲೇ ಓಡಿಹೋಗಿ, ನಾಯಿಯನ್ನು ಓಡಿಸಿ ಬಾಲಕನನ್ನು ರಕ್ಷಿಸಿದ್ದಾರೆ. ದಾಳಿಯ ಭೀಕರ ದೃಶ್ಯ ಸಿಸಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಬಾಲಕನ ಬೆನ್ನಿಗೆ ಹಾಗೂ ತೊಡೆಗೆ ಗಾಯಗಳಾಗಿದ್ದು, ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗುತ್ತಿದೆ. ಬೀದಿ ನಾಯಿಗಳ ನಿಯಂತ್ರಣ ಮಾಡದ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿರುವ ಸ್ಥಳೀಯರು, ಸೂಕ್ತ ಕ್ರಮಕ್ಕೆ ಆಗ್ರಹಿಸಿದ್ದಾರೆ.

ವೈರಲ್! ಸ್ವಚ್ಛತೆ ಕಾಪಾಡಲು ಮೈಸೂರು ನಗರ ಪಾಲಿಕೆಯಿಂದ ಹೊಸ ಯೋಜನೆ | ಈ ಐಡಿಯಾಗೆ ಜನರಿಂದ ಭಾರೀ ಮೆಚ್ಚುಗೆ

ರಸ್ತೇಲಿ ಮೂತ್ರವಿಸರ್ಜನೆ ತಡೆಗೆ ಕಾಂಪೌಂಡ್‌ಗೆ ಕನ್ನಡಿ!

• **ಕನ್ನಡಪ್ರಭ ವಾರ್ತೆ** ಮೈಸೂರು

ಈ ಬಾರಿಯ ಸ್ವಚ್ಛ ಸರ್ವೇಕ್ಷಣೆಯಲ್ಲಿ ನಂ.1 ಪಟ್ಟಕ್ಕೇರಲು ಹವಣಿಸುತ್ತಿರುವ ಮೈಸೂರು ಮಹಾನಗರ ಪಾಲಿಕೆಯು ನಗರದಲ್ಲಿ ಸ್ವಚ್ಛತೆ ಕಾಪಾಡುವ ಸಲುವಾಗಿ ವಿಶೇಷ ಯೋಜನೆಯೊಂದನ್ನು ಕೈಗೊಂಡಿದೆ. ಸಾರ್ವಜನಿಕ ಸ್ಥಳಗಳಲ್ಲಿ ಮೂತ್ರ ವಿಸರ್ಜನೆ, ಕಸ ಸುರಿಯುವುದನ್ನು ತಡೆಗಟ್ಟಲು ನಗರ ಪ್ರಮುಖ ರಸ್ತೆಯೊಂದರ ಪಾದಚಾರಿ ಮಾರ್ಗಕ್ಕೆ ಅಂಟಿಕೊಂಡಿರುವ ಕಾಂಪೌಂಡ್‌ಗೆ ಸ್ಟೀಲ್ ಕನ್ನಡಿ ಅಳವಡಿಸಿ ಗಮನ ಸೆಳೆಯುತ್ತಿದೆ.

ವಿಶಿಷ್ಟ ಯೋಜನೆಯ ಭಾಗವಾಗಿ ನಗರದ ಗ್ರಾಮಾಂತರ ಬಸ್ ನಿಲ್ದಾಣದ ಎದುರಿನ ಮೋರಿಗೆ ಹೊಂದಿಕೊಂಡಂತೆ ಹಾಗೂ ಸರ್ಕಾರಿ ಅತಿಥಿಗೃಹದ ಕಾಂಪೌಂಡ್‌ಗೆ ಹೊಂದಿಕೊಂಡಂತೆ ಪ್ರಾಯೋಗಿಕವಾಗಿ ಕನ್ನಡಿ ಅಳವಡಿಸಿದೆ.

ಇಲ್ಲಿ ಸಾಮಾನ್ಯವಾಗಿ ಬಸ್ ನಿಲ್ದಾಣಕ್ಕೆ ಬರುವ ಪ್ರಯಾಣಿಕರು, ಸಾರ್ವಜನಿಕರು, ದಾರಿಹೋಕರು ಮೂತ್ರ ವಿಸರ್ಜನೆ ಮಾಡುವುದು ಸಾಮಾನ್ಯವಾಗಿತ್ತು. ಇದನ್ನು ತಪ್ಪಿಸಲು ಈಗ ಕನ್ನಡಿ ಅಳವಡಿಸಲಾಗಿದೆ. ಇದರಿಂದಾಗಿ ಸಾರ್ವಜನಿಕರು ಮೂತ್ರ ವಿಸರ್ಜನೆಗೆ ನಿಂತರೇ ಮೂತ್ರ ವಿಸರ್ಜಿಸುವುದನ್ನು ತಾವೇ ನೋಡುವಂತಾಗುತ್ತದೆ. ಜೊತೆಗೆ ರಸ್ತೆಯಲ್ಲಿ ಓಡಾಡುವ ಜನರಿಗೂ ಕಾಣುತ್ತದೆ. ಇದರಿಂದ ಅನೈರ್ಮಲ್ಯ ತಪ್ಪಿಸಬಹುದು ಎಂಬುದು ನಗರ ಪಾಲಿಕೆ ಯೋಜನೆ ಮತ್ತು ಯೋಚನೆ.

ಅಲ್ಲದೆ ರಾತ್ರಿ ವೇಳೆ ಈ ಕನ್ನಡಿಯ ಕೆಳಗೆ ಎಲ್‌ಇಡಿ ಬಲ್ಬ್ ಅಳವಡಿಸಿರುವುದರಿಂದ ರಾತ್ರಿ ವೇಳೆಯೂ ಮೂತ್ರ ವಿಸರ್ಜನೆ ಮಾಡುವುದು ತಪ್ಪಿಸಬಹುದು. ಈ ಕಾರ್ಯ ಯಶಸ್ವಿಯಾದರೆ ನಗರದ ಇತರ ಕಡೆಗೂ ವಿಸ್ತರಿಸುವ ಸಾಧ್ಯತೆ ಹೆಚ್ಚಿದೆ. ಈ ಸಲಹೆಯನ್ನು ಯಾರು ಕೊಟ್ಟರೋ ಏನೋ ಆದರೆ ಉತ್ತಮವಾಗಿದೆ ಎಂಬುದು ಸಾರ್ವಜನಿಕರ ಅಭಿಪ್ರಾಯ. ಕನ್ನಡಿ ಅಳವಡಿಸಿರುವ ವಿಡಿಯೋ ಸಾಮಾಜಿಕ ತಾಣಗಳಲ್ಲಿ ವೈರಲ್ ಆಗಿದೆ.








ಪಂಚಮಸಾಲಿ ಪೀಠದಲ್ಲಿ 31ರವರೆಗೆ ಸಭೆ-ಸಮಾರಂಭ ನಿಷೇಧಿಸಿದ ಡೀಸಿ

ಮಠದಲ್ಲಿ ದೈನಂದಿನ ಪೂಜಾ ವಿಧಾನಗಳಿಗೆ ಇಲ್ಲ ಅಡ್ಡಿ

• **ಕನ್ನಡಪ್ರಭ ವಾರ್ತೆ** ಹರಿಹರ

ಪಂಚಮಸಾಲಿ ಪೀಠದ ಟ್ರಸ್ಟಿಗಳು ಹಾಗೂ ವಚನಾನಂದ ಶ್ರೀಗಳ ಬೆಂಬಲಿಗರ ನಡುವಿನ ಸಂಘರ್ಷ ತಾರಕಕ್ಕೇರಿರುವ ಹಿನ್ನೆಲೆಯಲ್ಲಿ ಮಠದ ಆವರಣದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ದಾವಣಗೆರೆ ಜಿಲ್ಲಾಧಿಕಾರಿ ಸೋಮವಾರ ನಿಷೇಧಾಜ್ಞೆ ಜಾರಿಗೊಳಿಸಿದ್ದಾರೆ.



ಮೇ 31ರವರೆಗೆ ಪೀಠದ ಆವರಣದಲ್ಲಿ ಯಾವುದೇ ರೀತಿಯ ಸಭೆ- ಸಮಾರಂಭ ಹಾಗೂ ಪತ್ರಿಕಾಗೋಷ್ಠಿಗಳನ್ನು ನಡೆಸದಂತೆ ಬಿಎನ್‌ಎಸ್ ಕಲಂ 163ರ ಪ್ರಕಾರ ನಿಷೇಧಾಜ್ಞೆ ಜಾರಿಗೊಳಿಸಿ ಡೀಸಿ ಗಂಗಾಧರ ಸ್ವಾಮಿ ಆದೇಶಿಸಿದ್ದಾರೆ. ಈ ನಿಷೇಧಾಜ್ಞೆಯು ಕೇವಲ ಸಭೆ, ಸಮಾರಂಭ ಮತ್ತು ಪತ್ರಿಕಾಗೋಷ್ಠಿಗಳಿಗೆ ಅನ್ವಯಿಸಲಿದೆ. ಮಠದಲ್ಲಿ ನಡೆಯುವ ದೈನಂದಿನ ಧಾರ್ಮಿಕ ಪೂಜಾ ವಿಧಾನಗಳಿಗೆ ಅಡ್ಡಿ ಆಗುವುದಿಲ್ಲ. ಪೀಠದಲ್ಲಿ ಸದ್ಯ ಪರಿಸ್ಥಿತಿ ಜಿಲ್ಲಾಡಳಿತದ ಹದ್ದಿನ ಕಣ್ಣಿನಲ್ಲಿದ್ದು, ಶಾಂತಿ ಕಾಪಾಡಲು ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿದೆ.


ಮಾ.10ರಿಂದ ಏ.27ರವರೆಗೆ ಮಠದಲ್ಲಿ ಟ್ರಸ್ಟಿಗಳು ಮತ್ತು ವಚನಾನಂದ ಶ್ರೀಗಳ ಬೆಂಬಲಿಗರ ನಡುವೆ ನಡೆದ ಸರಣಿ ಸಭೆಗಳು ಹಾಗೂ ಪತ್ರಿಕಾಗೋಷ್ಠಿಗಳು ಉದ್ವಿಗ್ನ ವಾತಾವರಣ ನಿರ್ಮಿಸಿವೆ ಎಂದು ಜಿಲ್ಲಾ ಪೊಲೀಸ್ ಅಧೀಕ್ಷಕರು ವರದಿ ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ನಿಷೇಧಾಜ್ಞೆ ಹೊರಡಿಸಲಾಗುತ್ತಿದೆ ಎಂದು ಆದೇಶದಲ್ಲಿ ವಿವರಿಸಲಾಗಿದೆ.

ರಾಜ್ಯದಲ್ಲಿ ತಾಪಮಾನ
ಡಿಗ್ರಿ ಸೆಲ್ಸಿಯಸ್‌ಗಳಲ್ಲಿ

	ಬಾಗಲಕೋಟೆ	ದಾವಣಗೆರೆ	ಧಾರವಾಡ	ಕಾರವಾರ	ಶಿವಮೊಗ್ಗ
ಗರಿಷ್ಠ	37.8	37.5	37.5	37.2	36.4
ಕನಿಷ್ಠ	23.7	22.0	21.0	26.4	22.0

ರಾಜ್ಯದಲ್ಲಿ ಜನಪರ ಮೈತ್ರಿ ಸರ್ಕಾರ ತನ್ನಿ: ಎಚ್‌.ಡಿ. ಕುಮಾರಸ್ವಾಮಿ ಕರೆ


ತುಮಕೂರು: ಈಗಿನ ಸರ್ಕಾರದ ಆಡಳಿತಕ್ಕೆ ಜನ ಬೇಸತ್ತಿದ್ದಾರೆ. ಮುಂದಿನ ದಿನಗಳಲ್ಲಿ ಬಿಜೆಪಿ, ಜೆಡಿಎಸ್ ಮೈತ್ರಿ ಜನಪರ, ಜನರಿಗೆ ಗೌರವ ತರುವಸರ್ಕಾರ ತರಲು ಜನರು ಆಶೀರ್ವಾದ ಮಾಡಬೇಕು ಎಂದು ಕೇಂದ್ರ ಸಚಿವ ಎಚ್.ಡಿ.



ಕುಮಾರಸ್ವಾಮಿ ಮನವಿ ಮಾಡಿದರು. ಇಲ್ಲಿ ಜಾತ್ರೆಗೆ ಆಗಮಿಸಿದ್ದ ವೇಳೆ ಮಾತನಾಡಿದ ಅವರು, ರಾಜ್ಯದಲ್ಲಿರುವ ಸರ್ಕಾರದ ಆಡಳಿತದಿಂದ ಜನ ಬೇಸತ್ತಿದ್ದಾರೆ, ಬದಲಾವಣೆ ಬಯಸಿದ್ದಾರೆ. ಜನಪರವಾದ, ಜನರ ಸಮಸ್ಯೆಗಳಿಗೆ ಸ್ಪಂದಿಸುವ ಸರ್ಕಾರ ಅಸ್ತಿತ್ವಕ್ಕೆ ಬರಬೇಕು. ಮುಂದಿನ ಚುನಾವಣೆಯಲ್ಲಿ ಜನರಿಗೆ ಗೌರವ ತರುವಂತಹ ಜೆಡಿಎಸ್–ಬಿಜೆಪಿ ಮೈತ್ರಿ ಸರ್ಕಾರವನ್ನು ಅಧಿಕಾರಕ್ಕೆ ತರಬೇಕು ಎಂದರು. ಬಂಗಾಳದಲ್ಲಿ ಬಿಜೆಪಿ ಗೆಲುವು ದೇಶದ ಮುಂದಿನ ಚುನಾವಣೆಗಳಿಗೆ ದಿಕ್ಸೂಚಿ ಎಂದು ಇದೇ ವೇಳೆ ಹೇಳಿದರು.

ಅಭಿಮಾನೋತ್ಸವದಲ್ಲಿ ಕೈ ಸರ್ಕಾರ ಕಿತ್ತೊಗೆಯುವ ಸಂಕಲ್ಪ: ಬೊಮ್ಮಾಯಿ

ಮಡಿಕೇರಿ: ಬಿ.ಎಸ್. ಯಡಿಯೂರಪ್ಪ ಅವರ ಅಭಿಮಾನೋತ್ಸವದಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರವನ್ನು ಕಿತ್ತೊಗೆಯುವ ಸಂಕಲ್ಪ ಕೈಗೊಳ್ಳಲಾಗುವುದು. ಅದು ನಮ್ಮ ಚುನಾವಣೆಯ ಪ್ರಾರಂಭ ಮತ್ತು ಕಾಂಗ್ರೆಸ್‌ನ ಅಂತ್ಯದ ಆರಂಭ ಎಂದು



ಮಾಜಿ ಸಿಎಂ, ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇತ್ತೀಚೆಗೆನಡೆದಪಂಚರಾಜ್ಯಗಳಚುನಾವಣೆಫಲಿತಾಂಶ ಮತ್ತೊಮ್ಮೆ ಪ್ರಧಾನಿ ಮೋದಿ ಅವರ ನೇತೃತ್ವದಲ್ಲಿ ಮುಂದಿನ ಚುನಾವಣೆಯನ್ನೂ ಗೆಲ್ಲುವಂತ ಶಕ್ತಿ ನೀಡಿದೆ ಎಂದರು. ಕರ್ನಾಟಕದಲ್ಲಿ ನಡೆದ 2 ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಎರಡೂ ಕಡೆ ಉತ್ತಮ ವಾತಾವರಣ ಇತ್ತು. ಆದರೆ ಕೊನೆ 2 ದಿನ ಕಾಂಗ್ರೆಸ್ ಹಣದ ಹೊಳೆ ಹರಿಸಿ ಚುನಾವಣೆ ಜಯಿಸಿತು ಎಂದು ಆರೋಪಿಸಿದರು.

ಅಹಿಂದ ಮತಗಳು ಒಗ್ಗೂಡಿದರೆ 2028ರಲ್ಲೂ ಅಧಿಕಾರ: ಜಾರಕಿಹೊಳಿ


ಬೆಂಗಳೂರು: ಬಾಗಲಕೋಟೆ ಉಪಚುನಾವಣೆಯಲ್ಲಿ ಅಹಿಂದ ಮತಗಳು ಒಗ್ಗೂಡಿದ್ದರಿಂದ ನಿರೀಕ್ಷೆಗೂ ಹೆಚ್ಚಿನ ಮತಗಳ ಅಂತರದಿಂದ ಪಕ್ಷದ ಅಭ್ಯರ್ಥಿ ಗೆಲುವು ಸಾಧಿಸಿದ್ದು, 2028ರ ಚುನಾವಣೆ ವೇಳೆಗೆ ರಾಜ್ಯದಲ್ಲಿ ಅಹಿಂದ ಮತ



ಗಳನ್ನು ಒಗ್ಗೂಡಿಸುವ ಅವಶ್ಯಕತೆಯಿದೆ ಎಂದು ಸಚಿವ ಸತೀಶ್ ಜಾರಕಿಹೊಳಿ ತಿಳಿಸಿದರು.ಸುದ್ದಿಗಾರರೊಂದಿಗೆ ಮಾತನಾಡಿದ,ಸ್ಥಳೀಯ ಮುಖಂಡರು, ಕೆಪಿಸಿಸಿಯಿಂದ ನೇಮಿಸಲಾದ ಸಚಿವರು, ಶಾಸಕರು, ಪದಾಧಿಕಾರಿಗಳ ಶ್ರಮ ಗೆಲುವಿಗೆ ಸಹಕಾರಿ ಯಾಗಿದೆ. ಗ್ಯಾರಂಟಿಯಿಂದ ಗೆಲುವು ಎನ್ನಲಾಗದು. ಅಭಿವೃದ್ಧಿ, ಎಚ್.ವೈ.ಮೇಟಿ ಅವರ ಕೆಲಸ,ಕಾರ್ಯಕರ್ತರ ಶ್ರಮವೂ ಕಾರಣ. ಬಿಜೆಪಿಗೆ ಹೋಗಿದ್ದ ಅಹಿಂದ ವರ್ಗದ ಮತಗಳನ್ನು ಕಾಂಗ್ರೆಸ್‌ನತ್ತ ಮತ್ತೊಮ್ಮೆ ಸೆಳೆಯಲು ಸಫಲವಾದ ಕಾರಣ ಭಾರೀ ಅಂತರದಲ್ಲಿ ಗೆದ್ದಿದ್ದೇವೆ ಎಂದರು.

ಅಭಿಮಾನೋತ್ಸವಕ್ಕೆ ಬೆಳಗಾವಿಯ 20 ಸಾವಿರ ಜನರು ಭಾಗಿ: ಕೋರೆ

ಬೆಳಗಾವಿ: ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪರ ರಾಜಕೀಯ ಜೀವನದ ಸಾರ್ಥಕ 50 ವರ್ಷಗಳ ಅಭಿಮಾನೋತ್ಸವ ಕಾರ್ಯಕ್ರಮವನ್ನು ಮೇ 9ರಂದು ಚಿತ್ರದುರ್ಗದಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ಬಿಜೆಪಿ



ನಾಯಕ, ಮಾಜಿ ಸಂಸದ ಪ್ರಭಾಕರ ಕೋರೆ ಹೇಳಿ ದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈ ಮಹಾಸ ಭೆಯಲ್ಲಿ ಲಕ್ಷಾಂತರ ಜನ ಭಾಗವಹಿಸುವ ನಿರೀಕ್ಷೆಯಿದೆ. ಬೆಳಗಾವಿ ಜಿಲ್ಲೆಯಿಂದಲೇ ಸುಮಾರು 20 ಸಾವಿರ ಜನರು ಭಾಗವಹಿಸಲಿದ್ದಾರೆ ಎಂದರು. ಕೇಂದ್ರ ಗೃಹ ಸಚಿವ ಅಮಿತ್ ಶಾ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ, ಎಚ್.ಡಿ.ಕುಮಾರಸ್ವಾಮಿ, ಶೋಭಾ ಕರಂದ್ಲಾಜೆ ಸೇರಿದಂತೆ ಹಲವು ಗಣ್ಯರು ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಕೆಲವರ ಮೇಲೆ ಪಕ್ಷದ ಕ್ರಮ ಸರಿ ಇದೆ: ಸಿದ್ದು

ದಾವಣಗೆರೆ ಬೈಎಲೆಕ್ಷನ್ ವೇಳೆ ಪಕ್ಷ ವಿರೋಧಿ ಚಟುವಟಿಕೆ ಹಿನ್ನೆಲೆಯಲ್ಲಿ ಕೆಪಿಸಿಸಿ ತೆಗೆದುಕೊಂಡ ನಿರ್ಧಾರದ ಬಗ್ಗೆ ಸಿಎಂ ಸಮರ್ಥನೆ

ಉಪಚುನಾವಣೆಯಲ್ಲಿ ಅಲ್ಪಸಂಖ್ಯಾತರ ಮತ ಪಡೆಯುವಲ್ಲಿ ಎಡವಿದ್ದೆಲ್ಲಿ ಎಂಬ ಬಗ್ಗೆ ತನಿಖೆ | ಆ ಬಳಿಕ ಸೂಕ್ತ ಕ್ರಮ: ಸಿದ್ದರಾಮಯ್ಯ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

'ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆ ವೇಳೆ ಪಕ್ಷ ವಿರೋಧಿ ಚಟುವಟಿಕೆ ಹಿನ್ನೆಲೆ ಕೆಪಿಸಿಸಿಯು ಕೆಲ ನಾಯಕರ ಮೇಲೆ ತೆಗೆದುಕೊಂಡಿರುವ ಕ್ರಮ ಸರಿ ಇದೆ. ಜತೆಗೆ ಚುನಾ ವಣೆಯಲ್ಲಿ ಅಲ್ಪಸಂಖ್ಯಾತರ ಮತ ಪಡೆಯುವಲ್ಲಿ ನಾವು ಎಡವಿದ್ದೆಲ್ಲಿ ಎಂಬ ಬಗ್ಗೆ ತನಿಖೆ ನಡೆಸಿ ಕ್ರಮ ಕೈಗೊಳ್ಳುತ್ತೇವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.



ದಾವಣಗೆರೆ ದಕ್ಷಿಣ ಕ್ಷೇತ್ರದ ಉಪ ಚುನಾವಣೆಯಲ್ಲಿ 56,000 ಅಲ್ಪಸಂಖ್ಯಾತ ಮತ ಚಲಾವಣೆಯಾಗಿದ್ದು, ಇದರಲ್ಲಿ 35,000 ಮತ ಕಾಂಗ್ರೆಸ್ ಅಭ್ಯರ್ಥಿಗೆ ಬಂದಿದೆ. ಆದರೂ ಅಲ್ಪಸಂಖ್ಯಾತರ ಹೆಚ್ಚು ಮತ ಪಡೆಯುವಲ್ಲಿ ನಾವು ಎಡವಿದ್ದೆಲ್ಲಿ? ಎಸ್‌ಡಿಪಿಐಗೆ 19,000 (18,975) ಮತ ಹೇಗೆ ಹೋಯಿತು? ಎಂಬುದನ್ನು ಪಕ್ಷ ತನಿಖೆ ನಡೆಸಲಿದೆ. ಬಳಿಕ ಅಗತ್ಯ ಕ್ರಮ ಕೈಗೊಳ್ಳಲಿದೆ' ಎಂದರು.

ಸುದ್ದಿಗೋಷ್ಠಿ ನಡೆಸಿ ಮಾತನಾಡಿ, ಪಕ್ಷ ವಿರೋಧಿ ಚಟುವಟಿಕೆ ಆರೋಪದ ಹಿನ್ನೆಲೆಯಲ್ಲಿ ಇಬ್ಬರು ಅಲ್ಪಸಂಖ್ಯಾತ ನಾಯಕರ ಮೇಲೆ ಪಕ್ಷ ಕ್ರಮ ಕೈಗೊಂಡಿರುವುದನ್ನು ಸಿದ್ದರಾಮಯ್ಯ ಅವರುಸಮರ್ಥಿಸಿದ್ದು, 'ಪಕ್ಷತೆಗೆದುಕೊಂಡ ಕ್ರಮ ಸರಿ ಇದೆ' ಎಂದರು. ಇನ್ನು ಅಲ್ಪಸಂಖ್ಯಾತ ಮತಗಳು ಕಾಂಗ್ರೆಸ್‌ನಿಂದ ದೂರವಾಗಿಲ್ಲ. ಕಳೆದ ಚುನಾವಣೆಯಲ್ಲಿ ಎಸ್‌ಡಿಪಿಐ ಇಷ್ಟೊಂದು ಪ್ರಮಾಣದಲ್ಲಿ ಮತ ಪಡೆದಿರಲಿಲ್ಲವಲ್ಲ ಎಂಬ ಪ್ರಶ್ನೆಗೆ, 'ಈ ಬಾರಿ ಅಲ್ಪಸಂಖ್ಯಾತ ಮತಗಳು ಕಾಂಗ್ರೆಸ್‌ಗೆ ಕಡಿಮೆಯಾಗಿವೆ. ನಾವು ಎಡವಿದ್ದೆಲ್ಲಿ? ಎಸ್‌ಡಿಪಿಐಗೆ ಹೇಗೆ ಮತ ಹೋಯಿತು ಎಂಬ ಬಗ್ಗೆ ಪಕ್ಷ ತನಿಖೆ ನಡೆಸಿ ವರದಿ ಪಡೆಯಲಿದೆ. ವರದಿ ಆಧಾರದ ಮೇಲೆ ಕ್ರಮ ಕೈಗೊಳ್ಳಲಿದೆ' ಎಂದು ಸಿದ್ದರಾಮಯ್ಯಹೇಳಿದರು.

2028ಕ್ಕೆ ನಾವೇ ಅಧಿಕಾರಕ್ಕೆ ಬರುತ್ತೇವೆಂದಾಯ್ತು

ಬಿಜೆಪಿಯವರು ಉಪಚುನಾವಣೆ ಮುಂದಿನ ಚುನಾವಣೆಗೆ ದಿಕ್ಸೂಚಿ ಎಂದಿದ್ದರು. ಇದೀಗ ಉಪಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಎರಡೂ ಕ್ಷೇತ್ರವನ್ನು ಗೆದ್ದಿದ್ದು, ಬಿಜೆಪಿಯವರ ಪ್ರಕಾರ 2028ಕ್ಕೆ ನಾವೇ ಅಧಿಕಾರಕ್ಕೆ ಬರುತ್ತೇವೆ ಎಂದು ಆಯ್ತಲ್ಲ. ಉಪಚುನಾವಣೆ ಫಲಿತಾಂಶ ನೋಡಿದರೆ ಜನ ನಮ್ಮ ಆಡಳಿತ, ಗ್ಯಾರಂಟಿ ಮೆಚ್ಚಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದರು.


ಪಕ್ಷದ ಸೇನಾನಿಯಂತೆ ಕೆಲಸ ಮಾಡಿದ ಸಲೀಂ, ರಿಜ್ವಾನ್‌ಗೆ ಸಿಎಂರಿಂದ ಅಭಿನಂದನೆ

ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ತಿಕ್ಕಾಟವನ್ನು ಸಮರ್ಥವಾಗಿ ನಿಭಾಯಿಸಿದ ಸಲೀಂ ಅಹಮದ್ ಹಾಗೂ ರಿಜ್ವಾನ್ ಅರ್ಷದ್‌ಗೆ ಸಿಎಂ ಸಿದ್ದರಾಮಯ್ಯ ಅಭಿನಂದಿಸಿದರು. ಸಲೀಂ ಮತ್ತು ತಂಡ ಪಕ್ಷದ ಸೇನಾನಿಗಳಂತೆ ಕೆಲಸ ಮಾಡಿದ್ದಾರೆ ಎಂದರು.ಅವರು ಸಚಿವ ಸ್ಥಾನಕ್ಕೆ ಅರ್ಹರಿದ್ದಾರೆ. ಹೀಗಾಗಿ ಅವರು ಆಕಾಂಕ್ಷಿ ಆಗಿರುವುದರಲ್ಲಿ ತಪ್ಪಿಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಸುದ್ದಿ ಸಿಂಚನ

'ಸಿಎಂ ಬದಲಾವಣೆ ವಿಚಾರದಲ್ಲಿ ವರಿಷ್ಠರ ನಿರ್ಧಾರವೇ ಫೈನಲ್'

ವಿಜಯಪುರ: ಕಳೆದ ಮೂರು ವರ್ಷಗಳಿಂದ ಸಿಎಂ ಬದಲಾವಣೆ ವಿಚಾರವಾಗಿ ಪ್ರಚಾರ ಮಾಡುತ್ತಲೇ



ಬರುತ್ತಿದ್ದೀರಾ. ಆದರೆ, ಕೊನೆಗೆ ಪಕ್ಷ ಏನು ಹೇಳುತ್ತದೆ ಅದೇ ಆಗುತ್ತದೆ ಎಂದು ಸಚಿವ ಶಿವಾನಂದ ಪಾಟೀಲ ಹೇಳಿದರು. ರಾಜ್ಯದಲ್ಲಿ ಸಿಎಂ ಬದಲಾವಣೆ ವಿಚಾರದ ಕುರಿತು ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎಲ್ಲವನ್ನೂ ಹೈಕಮಾಂಡ್ ತೀರ್ಮಾನಿಸುತ್ತದೆ ಎಂದರು. ಕೆಲ ಶಾಸಕರು ಹಾಗೂ ಸಚಿವರು ಡೆಲ್ಲಿಗೆ ಹೋಗುತ್ತಿರುವ ವಿಚಾರದ ಕುರಿತು ಮಾತನಾಡಿ, ಹೋಗುವುದರಲ್ಲಿ ತಪ್ಪೇನಿದೆ? ಹಿಂದೆ ಬಿಜೆಪಿಯ ಕೇಂದ್ರ ಸರ್ಕಾರ ಐದು ವರ್ಷದಲ್ಲಿ ಮೂರು ಮೂರು ಬಾರಿ ಬದಲಾವಣೆ ಮಾಡಿತಲ್ಲ ಕಾಂಗ್ರೆಸ್ ಸರ್ಕಾರ ಹೈಕಮಾಂಡ್ ಏನೇ ನಿರ್ಣಯ ತಗೊಂಡರು ಒಪ್ಪಿಕೊಳ್ಳುತ್ತೇವೆ ಎಂದು ಸ್ಪಷ್ಟಪಡಿಸಿದರು.

ಕಾಂಗ್ರೆಸ್ಸಲ್ಲಿ ಯಾವುದೇ ಗೊಂದಲವಿಲ್ಲ: ಖಂಡ್ರೆ

ಜಮಖಂಡಿ: ರಾಜ್ಯ ಕಾಂಗ್ರೆಸ್‌ನಲ್ಲಿ ಯಾವುದೇ ಗೊಂದಲವಿಲ್ಲ. ಕಾಂಗ್ರೆಸ್ ಇರುವುದು ಅಧಿಕಾರಕ್ಕಲ್ಲ,



ಜನರ ಸೇವೆಗೆ. ಇದು ಸೇವಾಪಕ್ಷ ಎಂದು ಅರಣ್ಯ ಮತ್ತು ಪರಿಸರ ಖಾತೆ ಸಚಿವ ಈಶ್ವರ ಖಂಡ್ರೆ ಹೇಳಿದರು. ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಿರೀಕ್ಷಿತವಾಗಿ ಉಪ ಚುನಾವಣೆಗಳ ಫಲಿತಾಂಶ ಬಂದಿವೆ. ಇದರಿಂದ ರಾಜ್ಯ ಕಾಂಗ್ರೆಸ್‌ನಲ್ಲಿ ಯಾವುದೇ ಗೊಂದಲ ಸೃಷ್ಟಿಯಾಗುವುದಿಲ್ಲ. ಮೂರು ವರ್ಷ ನುಡಿದಂತೆ ನಡೆದು ಜನಪರ ಆಡಳಿತ ನೀಡಿದ್ದೇವೆ. ಉಳಿದ ಇನ್ನೆರಡು ವರ್ಷಗಳ ಆಡಳಿತ ಅವಧಿಯಲ್ಲಿ ರಾಜ್ಯದ ಜನಹಿತಕ್ಕಾಗಿ ಕೆಲಸ ಮಾಡುತ್ತೇವೆ. ಬಡವರೂ ಸೇರಿದಂತೆ ಜಾತ್ಯತೀತವಾಗಿ ಎಲ್ಲರಿಗೂ ಶಕ್ತಿ ತುಂಬುವ ಕೆಲಸ ಮಾಡುತ್ತೇವೆ. ಪಕ್ಷದ ವರಿಷ್ಠರ ಸೂಚನೆಯಂತೆ ಎಲ್ಲ ನಾಯಕರು ನಡೆದುಕೊಳ್ಳುತ್ತಾರೆ. ಅಧಿಕಾರಕ್ಕಾಗಿ ಅಭಿಪ್ರಾಯ ಬೇಧವಿಲ್ಲ. ಪಕ್ಷದಲ್ಲಿ ಯಾವುದೇ ಗೊಂದಲವಿಲ್ಲ ಎಂದು ಸ್ಪಷ್ಟಪಡಿಸಿದರು.

ಸೋತೆವು ಎಂದು ಎದೆಗುಂದಬೇಕಿಲ್ಲ: ಬಿವೈವಿ

ಕಾರ್ಯಕರ್ತರ ಶ್ರಮದಿಂದ 64000 ಮತ ಬಂದಿದೆ | ಸಮಸ್ಯೆ, ವ್ಯತ್ಯಾಸ ಬದಿಗಿಡೋಣ

ಎಲ್ಲರೂ ಒಟ್ಟಾಗಿ ಪಕ್ಷಕ್ಕೆ ಗತವೈಭವ ತರೋಣ | ದಾವಣಗೆರೆ ಅಭ್ಯರ್ಥಿ ಮನೆಗೆ ಬಿವೈವಿ ಭೇಟಿ

• **ಕನ್ನಡಪ್ರಭ ವಾರ್ತೆ** ದಾವಣಗೆರೆ

ದಾವಣಗೆರೆದಕ್ಷಿಣಕ್ಷೇತ್ರದಲ್ಲಿಶ್ರೀನಿವಾಸದಾಸಕರಿಯಪ್ಪಗೆ ಹಿನ್ನಡೆ ಆಗಿದೆಯೆಂದು ತಲೆಯಲ್ಲಿಟ್ಟುಕೊಳ್ಳದೇ, ಜಿಲ್ಲೆ, ಕ್ಷೇತ್ರಾದ್ಯಂತ ಪಕ್ಷ ಸಂಘಟನೆಗೆ ಒತ್ತು ನೀಡೋಣ. ಬಿಜೆಪಿಗೆ ಗತವೈಭವ ಮರಳಿ ತರೋಣ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದ್ದಾರೆ.

ನಗರದಲ್ಲಿ ಬಿಜೆಪಿ ಅಭ್ಯರ್ಥಿ ಶ್ರೀನಿವಾಸ ದಾಸಕರಿಯಪ್ಪ ನಿವಾಸಕ್ಕೆ ಮಂಗಳವಾರ ಭೇಟಿ ನೀಡಿದ್ದ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಮ್ಮೆಲ್ಲಾ ಮುಖಂಡರು, ಕಾರ್ಯಕರ್ತರ ಸತತ ಪರಿಶ್ರಮದಿಂದ ಸುಮಾರು 64 ಸಾವಿರ ಮತಗಳ ಸಮೀಪ ಮತ ಪಡೆದಿದ್ದೇವೆ. ಈ ಸೋಲಿಗೆ ಎದೆಗುಂದದೆ ಮತ್ತಷ್ಟು ಉತ್ಸಾಹದಿಂದ ಕೆಲಸ ಮಾಡೋಣ ಎಂದರು.

ಎಲ್ಲಾ ಸಮಸ್ಯೆ, ವ್ಯತ್ಯಾಸಗಳನ್ನು ಬದಿಗಿಟ್ಟು, ಎಲ್ಲರನ್ನೂ ಒಳಗೊಂಡಂತೆ ಪಕ್ಷ ಸಂಘಟನೆ ಮಾಡುವ ಮೂಲಕ ಮುಂದಿನ ಚುನಾವಣೆಯಲ್ಲಿ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವಂತೆ ಮಾಡೋಣ ಎಂದು ಅವರು ಮನವಿ ಮಾಡಿದರು. ಮುಂಬರುವ ಚುನಾವಣೆಯಲ್ಲಿ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವ ಸಂದರ್ಭದಲ್ಲಿ ನಾವೆಲ್ಲಾ ಒಟ್ಟಾಗಿ, ಒಂದಾಗಿ ಬಿಜೆಪಿಗೆ ಗತವೈಭವ ಮರುಸ್ಥಾಪನೆಯಾಗುವಂತೆ ಶ್ರಮ ಹಾಕುತ್ತೇವೆ. ನಮಗೆ ಒಳ್ಳೆಯ ಕಾರ್ಯಕರ್ತರನ್ನು ಗುರುತಿಸಿ, ಶಕ್ತಿ ತುಂಬುವ ಜವಾಬ್ದಾರಿ, ಕರ್ತವ್ಯ ನನಗಿದೆ. ಖಂಡಿತಾ ಆ ಕೆಲಸವನ್ನು ಮಾಡುತ್ತೇನೆ ಎಂದು ತಿಳಿಸಿದರು.



ದಾವಣಗೆರೆ ದಕ್ಷಿಣ ಪರಾಜಿತ ಅಭ್ಯರ್ಥಿ ಶ್ರೀನಿವಾಸದಾಸಕರಿಯಪ್ಪ ಅವರ ಮನೆಗೆ ಭೇಟಿ ನೀಡಿದ ಬಿವೈವಿ

ದಕ್ಷಿಣ ಕ್ಷೇತ್ರದ ಸೋಲಿನಿಂದ ಯಾರೂ ಹತಾಶರಾಗಬೇಕಾಗಿಲ್ಲ. ಬಿ.ಎಸ್.ಯಡಿಯೂರಪ್ಪ ಅನೇಕ ಸವಾಲು, ಹೋರಾಟಗಳನ್ನು ಮಾಡಿದ್ದಾರೆ. ಇಂತಹ ಸವಾಲುಗಳನ್ನು ಗಟ್ಟಿಯಾಗಿ ನಿಂತು ಎದುರಿಸಿದ್ದಾರೆ. ಅದೇ ಯಡಿಯೂರಪ್ಪನವರ ಮಗನಾಗಿ, ರಾಜ್ಯಾಧ್ಯಕ್ಷನಾಗಿ ಇಟ್ಟ ಗುರಿ, ಮುಂದಿಟ್ಟ ಹೆಜ್ಜೆ ಹಿಂದಿಡುವ ಪ್ರಶ್ನೆಯೇ ಇಲ್ಲ. ಮತ್ತೆ ಬಿಜೆಪಿಗೆ ದಾವಣಗೆರೆ ಸೇರಿದಂತೆ ರಾಜ್ಯಾದ್ಯಂತ ಗತವೈಭವವನ್ನು ತಂದು, ಬಿಜೆಪಿಯನ್ನು ಮರು ಪ್ರತಿಷ್ಠಾಪನೆಯನ್ನು ಎಲ್ಲಾ ಹಿರಿಯರ ಆಶೀರ್ವಾದ, ಮಾರ್ಗದರ್ಶನದಿಂದ ಮಾಡುತ್ತೇವೆ ಎಂದು ವಿಜಯೇಂದ್ರ ಹೇಳಿದರು.

ಟೀಂ ವರ್ಕ್ ಮಾಡದಿದ್ದಕ್ಕೆ ಬಿಜೆಪಿಗೆ ಸೋಲು: ಸೋಮಣ್ಣ

ಮುಂದೆ ತಪ್ಪು ಸರಿಪಡಿಸಿಕೊಳ್ಳುತ್ತೇವೆ: ಸಚಿವ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ತಂಡವಾಗಿ ಸರಿಯಾಗಿ ಕೆಲಸ ಮಾಡದ ಪರಿಣಾಮರಾಜ್ಯದಉಪಚುನಾವಣೆಯಲ್ಲಿ ಬಿಜೆಪಿಗೆ ಸೋಲಾಗಿದೆ ಎಂದು ಕೇಂದ್ರ ಸಚಿವ ವಿ.ಸೋಮಣ್ಣ ಹೇಳಿದ್ದಾರೆ. ಮಂಗಳವಾರ ನಗರದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿ, ನನ್ನನ್ನೂ ಒಳಗೊಂಡಂತೆ ಪಕ್ಷ ಇದ್ದರೆ ನಾವು, ದೇಶ ಇದ್ದರೆ ಪಕ್ಷ. ನಮ್ಮೆಲ್ಲರಿಗಿಂತಲೂ ದೇಶ ದೊಡ್ಡದು ಎಂಬುದು ಪಕ್ಷದ ರಾಷ್ಟ್ರೀಯ ನಾಯಕರ ಸಂದೇಶ. ಈ ಸಂದೇಶವನ್ನು ಸರಿಯಾಗಿ ಉಪಯೋಗಿಸಿಕೊಳ್ಳುವಲ್ಲಿ ನಮಗೆ ಹಿನ್ನಡೆಯಾಗಿದೆ. ಮುಂದೆ ಇದನ್ನು ಸರಿಪಡಿಸಿಕೊಂಡು ಕೆಲಸ ಮಾಡುತ್ತೇವೆ. ದೇಶಕ್ಕಾಗಿ ನಮ್ಮ ಪಕ್ಷದ ರಾಷ್ಟ್ರೀಯ ನಾಯಕರು ಪಡುತ್ತಿರುವ ಶ್ರಮದ ಎದುರು ನಮ್ಮದು ಏನೇನೂ ಇಲ್ಲ. ಮುಂದೆ ನಾವೆಲ್ಲ ಎಚ್ಚೆತ್ತುಕೊಂಡು ಅವರ ದಾರಿಯಲ್ಲಿ ಹೆಜ್ಜೆ ಹಾಕುತ್ತೇವೆ ಎಂದರು.



ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ಉಪಚುನಾವಣೆ ಸೋಲಿಗೆ ಜವಾಬ್ದಾರಿ ಯಾರು ಎನ್ನುವುದಕ್ಕಿಂತ ತಂಡವಾಗಿ ಕೆಲಸ ಮಾಡುವಲ್ಲಿ ಎಡವಟ್ಟಾಗಿದೆ. ನನ್ನದೂ ಜವಾಬ್ದಾರಿ ಇತ್ತು. ಎಲ್ಲರೂ ಕುಳಿತು ಚರ್ಚಿಸಿ ಸರಿಯಾದ ತೀರ್ಮಾನ ಕೈಗೊಳ್ಳಬೇಕಿತ್ತು. ಈಗ ಇನ್ನೊಬ್ಬರ ಮೇಲೆ ಗೂಬೆ ಕೂರಿಸುವುದು ಸರಿಯಲ್ಲ ಎಂದರು.

ಬಿಎಸ್‌ವೈ ಕಾರ್ಯಕ್ರಮಕ್ಕೆ ಹೋಗುವೆ: ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಅವರ ಅಭಿಮಾನೋತ್ಸವಕ್ಕೆ ನನ್ನನ್ನೂ ಕರೆದಿದ್ದಾರೆ. ಪಕ್ಷಾತೀತವಾಗಿ ಮಾಡು ತ್ತಿರುವುದಾಗಿ ಹೇಳಿದ್ದಾರೆ. ಯಡಿಯೂರಪ್ಪ ಪಕ್ಷ ಕಟ್ಟಿದವರು. ಹೀಗಾಗಿ ನಾನೂ ಹೋಗುತ್ತೇನೆ ಎಂದು ಇದೇ ವೇಳೆ ಪ್ರಶ್ನೆಯೊಂದಕ್ಕೆ ಕೇಂದ್ರ ಸಚಿವ ಸೋಮಣ್ಣ ತಿಳಿಸಿದರು.

X ಫೈಲ್ಸ್

ಇನ್ನು ಚುರುಮುರಿ ರಾಷ್ಟ್ರೀಯ ಖಾದ್ಯ!

ಬ್ರೇಕಿಂಗ್ ನ್ಯೂಸ್: **ಪ.ಬಂಗಾಳ ಚುನಾವಣೆಯಲ್ಲಿ ಬಿಜೆಪಿ ಗೆಲ್ಲಲು ಮೋದಿ ಚುರುಮುರಿ ತಿಂದಿದ್ದೇ ಕಾರಣ. ಹೀಗಾಗಿ ಚುರುಮುರಿಯನ್ನು ರಾಷ್ಟ್ರೀಯ ಖಾದ್ಯ ಎಂದು ಘೋಷಿಸಲು ಒಳಗೊಳಗೇ ತಯಾರಿ ಶುರು!**

• **ಜಾನಿ**

3, 2, 1 ಗೋ,,,

ಈಗ 3 ಮುಖ್ಯಮಂತ್ರಿಗಳು ಸೋತು ಸುಣ್ಣ. ಇವರಲ್ಲಿ ಮಮತಾ ಬ್ಯಾನರ್ಜಿ (3 ಅವಧಿ ಸಿಎಂ), ಪಿಣರಾಯ್ ವಿಜಯನ್ (2 ಅವಧಿ), ಎಂ.ಕೆ.ಸ್ಟಾಲಿನ್ (1 ಅವಧಿ). ಅಂದ್ರೆ 3, 2, 1..ಗೋ.... ಇದು ರಾಜಕೀಯವಾಗಿ ನಾಟಕೀಯ ದಿನ.

• **ಉಮಾ ಎಸ್.**

ಬೈಎಲೆಕ್ಷನ್ ಸೋಲನ್ನು ಒಬ್ಬರ ತಲೆಗೆ ಕಟ್ಟೋದು ಬೇಡ: ಬಿಸಿಪಾ

ಮನಸ್ತಾಪ ಬಿಟ್ಟು ಸಂಘಟನೆ ನಡೆಸಬೇಕಿದೆ

• **ಕನ್ನಡಪ್ರಭ ವಾರ್ತೆ** ಹಾವೇರಿ

ಉಪಚುನಾವಣೆಯ ಸೋಲನ್ನು ಒಬ್ಬರ ತಲೆಗೆಕಟ್ಟುವುದು ಸರಿಯಲ್ಲ. ಮನಸ್ತಾಪಕೈಬಿಟ್ಟು, ಎಲ್ಲರೂ ಒಟ್ಟಾಗಿ ಪಕ್ಷ ಸಂಘಟನೆಗೆ ಮುಂದಾಗಬೇಕು ಎಂದು ಮಾಜಿ ಸಚಿವ ಬಿ.ಸಿ. ಪಾಟೀಲ ಹೇಳಿದರು.



ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಮ್ಮ ಪಕ್ಷದಲ್ಲಿನ ರಾಜ್ಯನಾಯಕರಲ್ಲಿನ ಹೊಂದಾಣಿಕೆ ಕೊರತೆ, ಅಸಹನೆ ಮತ್ತು ಈ ಗೆಲುವಿನಿಂದ ಬೇರೆಯವರಿಗೆ ಕ್ರೆಡಿಟ್ ಹೋಗತ್ತೆ ಎಂಬ ಸಣ್ಣತನದಿಂದಾಗಿ ಬಾಗಲಕೋಟೆ ಮತ್ತು ದಾವಣಗೆರೆಯಲ್ಲಿ ನಾವು ಸೋತಿದ್ದೇವೆ ಎಂದರು.

ಈಗಲೇ ಎಚ್ಚೆತ್ತುಕೊಂಡು ಪರಸ್ಪರ ಸಹಕಾರ ಮತ್ತು ಹೊಂದಾಣಿಕೆಯಿಂದ ಸಂಘಟನೆ ಮಾಡಿದಲ್ಲಿ ಮುಂದಿನ ಚುನಾವಣೆಯಲ್ಲಿ ಗೆಲುವು ನಿಶ್ಚಿತ. ಈ ಕುರಿತಂತೆ ರಾಜ್ಯ ಬಿಜೆಪಿ ನಾಯಕರು ಕ್ರೆಡಿಟ್ ವಾರ್‌ಕೈಬಿಟ್ಟು ಪಕ್ಷ ಸಂಘಟನೆಗೆ ಮುಂದಾಗಬೇಕು. ಈ ಮೂಲಕ ಆತ್ಮಾವಲೋಕನ ಮಾಡಿಕೊಂಡು ಈಗಲೇ ಸರಿಪಡಿಸಿಕೊಳ್ಳಬೇಕು. ಎಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡಿದರೆ ಗೆಲುವು ಖಚಿತ. ಇದು ನನ್ನ ವೈಯಕ್ತಿಕ ಅಭಿಪ್ರಾಯ ಎಂದು ಹೇಳಿದರು.

ಮೇ 10ರಂದು ಬೆಂಗಳೂರಿಗೆ ಪ್ರಧಾನಿ ನರೇಂದ್ರ ಮೋದಿ ಭೇಟಿ

ಆರ್ಟ್ ಆಫ್ ಲಿವಿಂಗ್ ಕಾರ್ಯಕ್ರಮದಲ್ಲಿ ಭಾಗಿ

1 ತಿಂಗಳಲ್ಲಿ ಕರ್ನಾಟಕಕ್ಕೆ 2ನೇ ಬಾರಿಗೆ ಭೇಟಿ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಪ್ರಧಾನಿ ನರೇಂದ್ರ ಮೋದಿ ಅವರು ಈ ತಿಂಗಳ 10ರಂದು ಆರ್ಟ್ ಆಫ್ ಲಿವಿಂಗ್‌ನ 45ನೇ ವಾರ್ಷಿಕೋತ್ಸವ ಹಾಗೂ ರವಿಶಂಕರ್‌ಗುರೂಜಿ ಅವರ 70ನೇ ಹುಟ್ಟುಹಬ್ಬದ ಅಂಗವಾಗಿ ನಡೆಯುವ ಕಾರ್ಯಕ್ರಮಗಳ ಹಿನ್ನೆಲೆಯಲ್ಲಿ ಬೆಂಗಳೂರಿಗೆ ಆಗಮಿಸಲಿದ್ದಾರೆ.



ಇದೇ ವೇಳೆ ಅವರು ಆರ್ಟ್ ಆಫ್ ಲಿವಿಂಗ್ ಆವರಣದಲ್ಲಿ ನೂತನ ಆಧ್ಯಾತ್ಮಿಕ ಕೇಂದ್ರ ಉದ್ಘಾಟನೆ ಸೇರಿ ವಿವಿಧ ಸೇವಾ ಯೋಜನೆಗಳಿಗೆ ಚಾಲನೆ ನೀಡಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕಳೆದ ತಿಂಗಳಷ್ಟೇ ಮೋದಿ ಅವರು ಮಂಡ್ಯ ಜಿಲ್ಲೆ ನಾಗಮಂಗಲ ತಾಲೂಕಿನ ಆದಿಚುಂಚನಗಿರಿ ಕ್ಷೇತ್ರಕ್ಕೆ ಭೇಟಿ ನೀಡಿ ಭೈರವೈಕ್ಯ ಮಂದಿರದ ಉದ್ಘಾಟನೆ ನೆರವೇರಿಸಿದ್ದರು. ಇದೀಗ ಒಂದು ತಿಂಗಳೊಳಗಾಗಿ ಮತ್ತೊಂದು ಧಾರ್ಮಿಕ ಕೇಂದ್ರದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಸಂಬಂಧ ರಾಜ್ಯಕ್ಕೆ ಭೇಟಿ ನೀಡುತ್ತಿದ್ದಾರೆ.

ಬಿಜೆಪಿಯಿಂದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಅಪಾಯ: ಡಿಕೆಶಿ

ಎಲೆಕ್ಷನ್‌ನಲ್ಲಿ ಬಿಜೆಪಿಯಿಂದ ಅಧಿಕಾರ ದುರ್ಬಳಕೆ

ಮತಗಳ್ಳತನ ಬಗ್ಗೆ ರಾಗಾ ಹೇಳಿಕೆಗೆ ಬೆಂಬಲ: ಡಿಸಿಎಂ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕೇಂದ್ರ, ಚುನಾವಣೆಗಳಲ್ಲಿ ತನ್ನ ಅಧಿಕಾರದ ಮೂಲಕ ರಾಜಕೀಯ ಯಂತ್ರಗಳನ್ನು ದುರ್ಬಳಕ್ಕೆ ಮಾಡಿಕೊಳ್ಳುತ್ತಿದ್ದು, ಅದು ಪರಮಾವಧಿ ತಲುಪಿದೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್‌ತಿಳಿಸಿದರು.



ವಿಧಾನಸೌಧದಲ್ಲಿ ಮಂಗಳವಾರ ಮಾತನಾಡಿ, ಅಸ್ಸಾಂ, ಪಶ್ಚಿಮ ಬಂಗಾಳದಲ್ಲಿ ಮತಕಳ್ಳತನ ಎಂಬ ರಾಹುಲ್ ಗಾಂಧಿ ಹೇಳಿಕೆ ಕುರಿತು ಕೇಳಿದಾಗ, ಈ ಹೇಳಿಕೆ ನಾನು ಬೆಂಬಲಿಸುತ್ತೇನೆ ಎಂದರು.ಬಿಜೆಪಿಯವರು ಕೇರಳ ಹಾಗೂ ಇತರೆ ರಾಜ್ಯಗಳನ್ನು ಪ್ರಶ್ನೆ ಮಾಡುತ್ತಿವೆ ಎಂದು ಕೇಳಿದಾಗ, ಏನೆಲ್ಲಾ ನಡೆ ಯುತ್ತಿದೆ ಎಂದು ಮೊದಲಿನಿಂದಲು ನೋಡುತ್ತಿದ್ದೇವೆ. ಬಂಗಾಳ ದಲ್ಲಿ 2.50 ಲಕ್ಷ ಕೇಂದ್ರ ಸಶಸ್ತ್ರ ಪಡೆ ಸಿಬ್ಬಂದಿ ನಿಯೋಜಿಸಿ ಭಯದ ವಾತಾವರಣ ಸೃಷ್ಟಿಸ ಲಾಗಿತ್ತು. ಕ್ಷೇತ್ರ ಮರು ವಿಂಗಡಣೆಯಲ್ಲಿ ಅಲ್ಪಸಂ ಖ್ಯಾತರನ್ನು ಒಂದು ಕಡೆಗೆ ಹಾಕಲಾಗಿತ್ತು. ಇದರಿಂದ ದೇಶದ ರಾಜಕೀಯ ಭವಿಷ್ಯದ ಮೇಲೆ ಪರಿಣಾಮ ಬೀರಿದ್ದು, ಪ್ರಜಾಪ್ರ ಭುತ್ವ ವ್ಯವಸ್ಥೆ ಅಪಾಯದಲ್ಲಿದೆ ಎಂದರು.

ತಯಾರಿ ಊಟ ವಿತರಣೆ ಜವಾಬ್ದಾರಿ ಬೆಂಗಳೂರು ಬಿಜೆಪಿ ಶಾಸಕರ ಹೆಗಲಿಗೆ | ಸಿದ್ಧತೆ ಪರಿಶೀಲಿಸಿದ ವಿಶ್ವನಾಥ್, ಮುನಿರತ್ನ, ಗೋಪಾಲಯ್ಯ, ಮುನಿರಾಜು

ಬಿಎಸ್‌ವೈ ಅಭಿಮಾನೋತ್ಸವ: 10 ಲಕ್ಷ ಮಂದಿಗೆ ಊಟ ವ್ಯವಸ್ಥೆ

• **ಕನ್ನಡಪ್ರಭ ವಾರ್ತೆ** ಚಿತ್ರದುರ್ಗ

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ರಾಜಕೀಯ ಜೀವನಕ್ಕೆ 50 ವರ್ಷ ತುಂಬಿದ ಹಿನ್ನಲೆಯಲ್ಲಿ ಹಮ್ಮಿಕೊಂಡಿರುವ ಅಭಿಮಾನೋತ್ಸವ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರ್ವಹಿಸಲು ಶಾಸಕರು ಸೇರಿದಂತೆ ಕಾರ್ಯಕರ್ತರ ಪಡೆಯೇ ಸಿದ್ಧವಾಗಿದೆ. ಕಾರ್ಯಕ್ರಮಕ್ಕೆ 10 ಲಕ್ಷಕ್ಕೂ ಅಧಿಕ ಜನರು ಪಾಲ್ಗೊಳ್ಳಲಿದ್ದು, ಊಟದ ವ್ಯವಸ್ಥೆಯನ್ನು ಸವಾಲಾಗಿ ತೆಗೆದುಕೊಳ್ಳಲಾಗಿದೆ.



ಅಭಿಮಾನೋತ್ಸವದ ಪೂರ್ವ ಸಿದ್ಧತೆ ಪರಿಶೀಲಿಸಿ ಮಾತನಾಡಿದ ಯಲಹಂಕ ಶಾಸಕ ವಿಶ್ವನಾಥ್, ರಾಜ್ಯದ ವಿವಿಧೆಡೆಗಳಿಂದ ಕಾರ್ಯಕ್ರಮಕ್ಕೆ ಆಗಮಿಸುವ ಜನತೆಗೆ ಊಟದ ಕೊರತೆ ಆಗದಂತೆ ಎಚ್ಚರವಹಿಸಲಾಗುತ್ತಿದೆ ಎಂದರು.

ಅಭಿಮಾನೋತ್ಸವಕ್ಕೆ ಆಗಮಿಸುವವರಿಗೆ ಊಟ, ನೀರಿನ ಕೊರತೆಯಾಗದಂತೆ ನೋಡಿಕೊಳ್ಳುವ ಜವಾಬ್ದಾರಿಯನ್ನು ಬೆಂಗಳೂರಿನ ಶಾಸಕರು ಮತ್ತು ಪ್ರಮುಖರಿಗೆ ವಹಿಸಲಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ಈಗಾಗಲೆ ಅಡುಗೆ ಭಟ್ಟರನ್ನು ನೇಮಿಸಲಾಗಿದೆ. ಸುಮಾರು 500 ಬಾಣಸಿಗರು ಚಿತ್ರದುರ್ಗಕ್ಕೆ ಬರಲಿದ್ದಾರೆ. ಎಲ್ಲ ವ್ಯವಸ್ಥೆ ಮಾಡಲಾಗಿದೆ ಎಂದರು.

ಮೇ 9ರಂದು ಬೆಳಗ್ಗೆ 9 ಗಂಟೆಯಿಂದಕಾರ್ಯಕ್ರಮ ಮುಗಿಯುವವರೆಗೂ ಊಟದ ವ್ಯವಸ್ಥೆ ಇರುತ್ತೆ. ಬಫೆ ರೀತಿಯಲ್ಲಿ ಊಟ ಬಡಿಸಲಾಗುವುದು. ಬೆಳಗ್ಗೆ ಟೊಮೋಟೋ ಬಾತ್, ಮೊಸರನ್ನ, ಮೈಸೂರು ಪಾಕ್, ವಾಟರ್ ಬಾಟಲ್ ನೀಡಲಾಗುವುದು. 12ರ ನಂತರ ವೆಜಿಟೇಬಲ್ ಪಲಾವ್, ಮೊಸರನ್ನ, ಮೈಸೂರು ಪಾಕ್ ನೀಡಲಾಗುವುದು. ಯಾವುದೇ ಕಾರಣಕ್ಕೂ ಕಾರ್ಯಕ್ರಮಕ್ಕೆ ಬಂದವರನ್ನು ಹಸಿದ ಹೊಟ್ಟೆಯಲ್ಲಿ ಕಳುಹಿಸುವುದಿಲ್ಲ. ಊಟ ಬಡಿಸುವಾಗ ಯಾವುದೇ ಸಮಸ್ಯೆ ಯಾಗಬಾರದೆಂದು ಒಂದೊಂದು ಕೌಂಟರ್ ಬಳಿ ಇಬ್ಬರು ಶಾಸಕರು, 120 ಜನ ಸ್ವಯಂ ಸೇವಕರು ಇರಲಿದ್ದಾರೆ ಎಂದರು.



ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮದ ಸಿದ್ಧತೆ ಪರಿಶೀಲಿಸಿದ ಬೆಂಗಳೂರು ಬಿಜೆಪಿ ಶಾಸಕರು.

ಬೆಂಗಳೂರಿನ ರಾಜರಾಜೇಶ್ವರಿ ನಗರದ ಶಾಸಕಮುನಿರತ್ನಮಾತನಾಡಿ,ಯಡಿಯೂರಪ್ಪ ಅವರು ಕೊಟ್ಟ ಮಾತಿನಂತೆ ನಡೆದಿದ್ದಾರೆ. ಅಧಿಕಾರದ ಸಮಯದಲ್ಲಿ ತಾನು ಬೆಳೆದು ತನ್ನ ಜೊತೆಯಲ್ಲಿ ಇರುವವರನ್ನು ಸಹ ಬೆಳೆಸುವುದರ ಮೂಲಕ ದೊಡ್ಡ ವ್ಯಕ್ತಿಯಾಗಿದ್ದಾರೆ. ನಂಬಿದವರನ್ನು ಕೈಬಿಡುವುದಿಲ್ಲ ಎಂಬ ಹೆಸರು ಯಾರಿಗಾದರೂ ಇದ್ದರೆ ಅದು ಯಡಿಯೂರಪ್ಪ ಅವರಿಗೆ ಮಾತ್ರ. 50 ವರ್ಷದ ಹೋರಾಟ, ಸಾಧನೆಯ ಕಾರ್ಯಕ್ರಮದ ಯಶಸ್ವಿಗೆ ಎಲ್ಲರು ಕಂಕಣ ಬದ್ಧರಾಗಿ ದುಡಿಯುತ್ತಿದ್ದೇವೆ. ಪಕ್ಷದ ಕಾರ್ಯಕರ್ತರಿಗೆ ಈ ಕಾರ್ಯಕ್ರಮ ಹಬ್ಬದ ವಾತಾವರಣವ ಮೂಡಿಸಿದೆ ಎಂದರು.

ಈ ವೇಳೆ ಮಹಾಲಕ್ಷ್ಮಿ ಲೇಔಟ್‌ನ ಶಾಸಕ ಗೋಪಾಲಯ್ಯ, ದಾಸರಹಳ್ಳಿ ಶಾಸಕ ಮುನಿರಾಜ್, ಬೆಂಗಳೂರು ದಕ್ಷಿಣದ ಕೃಷ್ಣಪ್ಪ, ಮಾಜಿ ಸಚಿವ ಕಟ್ಟಾ ಸುಬ್ರಮಣ್ಯ ನಾಯ್ಡು, ರಾಜ್ಯ ಉಪಾಧ್ಯಕ್ಷ ತಮ್ಮೇಶ್ ಗೌಡ, ಮಲ್ಲಿಕಾರ್ಜುನ, ಕಲ್ಲಂ ಸೀತರಾಮರೆಡ್ಡಿ ಹಾಜರಿದ್ದರು.

ಜಮೀರ್ ಮನೇಲಿ ₹1.13 ಕೋಟಿ ಮೌಲ್ಯದ ಚಿನ್ನಾಭರಣ ಕಳವು!

ಕಳ್ಳತನ ಮಾಡಿದ್ದ ಇಬ್ಬರು ಸಂಬಂಧಿಕರ ಬಂಧನ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಇತ್ತೀಚೆಗೆ ವಸತಿ ಸಚಿವ ಜಮೀರ್‌ಅಹಮ್ಮದ್ ಖಾನ್ ಅವರ ಮನೆಯಲ್ಲಿ ಚಿನ್ನಾಭರಣ ಕಳವು ಮಾಡಿದ್ದ ಸಚಿವರ ಇಬ್ಬರು ಸಂಬಂಧಿಕರನ್ನು ಶಿವಾಜಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.



ಅಮೀರ್‌ಅಹ್ಮದ್ ಹಾಗೂ ಸೈಯದ್ ಅಮೀನ್ ಅಹ್ಮದ್ ಬಂಧಿತರು.1.13 ಕೋಟಿ ರು. ಮೌಲ್ಯದ 759 ಗ್ರಾಂ. ಚಿನ್ನಾಭರಣ ಜಪ್ತಿ ಮಾಡಲಾಗಿದೆ. ಕೆಲದಿನಗಳ ಹಿಂದೆ ಸಚಿ ವರ ಮನೆಯಲ್ಲಿ 1.2 ಕೆ.ಜಿ. ಚಿನ್ನಾಭರಣ ಕಳ್ಳತನ ಬಗ್ಗೆ ಪೊಲೀ ಸರಿಗೆ ಅವರ ತಾಯಿ ದೂರು ನೀಡಿದ್ದರು.ತನಿಖೆಗಿಳಿದ ಪೊಲೀ ಸರು, ತಾಂತ್ರಿಕ ಮಾಹಿತಿ ಆಧರಿಸಿ ಇಬ್ಬರನ್ನು ಬಂಧಿಸಿದ್ದಾರೆ.

ಟ್ರಾವೆಲ್ಸ್ ನಷ್ಟಕ್ಕೆ ಕಳ್ಳತನ: ಸಚಿವ ಜಮೀರ್‌ಅವರಿಗೆ ಅಮೀರ್‌ಹಾಗೂ ಸೈಯದ್ ಸೋದರ ಸಂಬಂಧಿಗಳಾಗಿದ್ದು, ಗೋವಿಂದಪುರದಲ್ಲಿ ಅವರು ನೆಲೆಸಿದ್ದಾರೆ. ಇನ್ನು ಅಮೀರ್ ಟ್ರಾವೆಲ್ಸ್ ವ್ಯವಹಾರ ನಡೆಸಿದರೆ, ಸೈಯದ್ ಇಸ್ತ್ರಿ ಅಂಗಡಿ ನಡೆಸುತ್ತಿದ್ದ. ಆದರೆ ಟ್ರಾವೆಲ್ಸ್ ವ್ಯವಹಾರದಲ್ಲಿ ಕೈಸುಟ್ಟುಕೊಂಡಿದ್ದ. ಹೀಗಾಗಿ ಸುಲಭ ಹಣ ಸಂಪಾದನೆಗೆ ಸಚಿವರ ಮನೆಯಲ್ಲಿ ಕಳ್ಳತನಕ್ಕೆ ಸಂಚು ರೂಪಿಸಿದ್ದ. ಸೈಯದ್ ಸಹ ಸಾಥ್ ಕೊಟ್ಟಿದ್ದಾನೆ. ಅಂತೆಯೇ ಜ.15ರಂದು ಕುಶಲೋಪರಿ ವಿಚಾರಿಸುವ ನೆಪದಲ್ಲಿ ಮನೆಗೆ ಆರೋಪಿಗಳು ಬಂದಿದ್ದರು. ಕದ್ದಆಭರಣಗಳನ್ನು ಮತ್ತಿಕೆರೆ, ಕೆ.ಜಿ.ಹಳ್ಳಿ ಸಮೀಪದ ಚಿನ್ನಾಭರಣ ಮಳಿಗೆಯಲ್ಲಿ ಅಡವಿಟ್ಟು ಹಣ ಪಡೆದಿದ್ದರು ಎಂದು ಅಧಿಕಾರಿಗಳು ವಿವರಿಸಿದ್ದಾರೆ.

ಕನ್ನಡಪ್ರಭ
ಬುಧವಾರ 6.05.2026

ಸುದ್ದಿ ಸಿಂಚನ

ರಾಜಕಾಲುವೆ ನಿರ್ಮಾಣಕ್ಕೆ ಪ್ರಸ್ತಾವನೆ: ಶಾಸಕ ಭರತ್ ಶೆಟ್ಟಿ



ಮೂಲ್ಕಿ: ಮಂಗಳೂರು ಮಹಾನಗರ ಪಾಲಿಕೆಯ 7ನೇ ವಾರ್ಡ್ ವ್ಯಾಪ್ತಿಯ ಇಡ್ಯಾ ಗ್ರಾಮದ ಸುಭಾಷಿತ ನಗರದಲ್ಲಿ ರಾಜಕಾಲುವೆ ತಡೆಗೋಡೆ ಇಲ್ಲದೆ ಇರುವ ಕಾರಣ ಪ್ರತಿ ವರ್ಷ ಮಳೆಗಾಲ ಸಂದರ್ಭದಲ್ಲಿ ನೆರೆ ಬಂದು ಅಲ್ಲಿನ ನಿವಾಸಿಗಳಿಗೆ ಸಮಸ್ಯೆ ಅರಿವಿಗೆ ಬಂದಿದೆ. ಸರಿಯಾದ ತಡೆಗೋಡೆಯಿಲ್ಲದಿರುವುದರಿಂದ ರಾಜ ಕಾಲುವೆಯಲ್ಲಿ ನೀರು ಸರಾಗವಾಗಿ ಹರಿಯದೇ ಸಮಸ್ಯೆಯಾಗಿದೆ. ಶಾಶ್ವತ ಪರಿಹಾರದ ನಿಟ್ಟಿನಲ್ಲಿ ಯೋಜನೆಯನ್ನು ರೂಪಿಸಿ ಅನುದಾನಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಶೀಘ್ರದಲ್ಲಿ ಅನುದಾನ ಬಿಡುಗಡೆಯಾಗಿ ಕಾಮಗಾರಿ ನಡೆದು ಸಮಸ್ಯೆ ಬಗೆಹರಿಯಲಿದೆಯೆಂದು ಶಾಸಕರು ತಿಳಿಸಿದ್ದಾರೆ.

ಇಂದು ಕದ್ರಿಯಲ್ಲಿ ವಿದ್ಯುತ್ ನಿಲುಗಡೆ

ಮಂಗಳೂರು: ಮೇ 6ರಂದು ಬೆಳಗ್ಗೆ 10 ರಿಂದ ಸಂಜೆ 5ರ ವರೆಗೆ 33/11ಕೆವಿ ಕದ್ರಿ ಉಪಕೇಂದ್ರದಿಂದ ಹೊರಡುವ 11ಕೆವಿ ಲೈಟ್ ಹೌಸ್ ಹಿಲ್ ರೋಡ್ ಫೀಡರ್‌ನಲ್ಲಿ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಬಂಟ್ಸ್‌ಹಾಸ್ಟೆಲ್, ವುಡ್ ಲ್ಯಾಂಡ್, ಗೋಲ್ಡ್ ಪಿಂಚ್, ಜ್ಯೋತಿ ಟಾಕೀಸ್, ಲೈಟ್ ಹೌಸ್ ಹಿಲ್, ಲೇಡೀಸ್ ಕ್ಲಬ್, ಸೈಂಟ್ ಅಲೋಶಿಯಸ್ ಕಾಲೇಜ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

12ರಂದು ಮಹಾಸಭೆ

ಮಂಗಳೂರು: ದ.ಕ. ಜಿಲ್ಲಾ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ 13ನೇ ವಾರ್ಷಿಕ ಮಹಾಸಭೆ 12ರಂದು ಬೆಳಗ್ಗೆ 9ರಿಂದ ಮಂಗಳೂರು ಪಾಂಡೇಶ್ವರದ ಪೊಲೀಸ್ ವಸತಿ ಗೃಹ ಸಮುಚ್ಚಯದಲ್ಲಿರುವ ಶ್ರೀ ಮುನೀಶ್ವರ ಮಹಾಗಣಪತಿ ದೇವಸ್ಥಾನ ಸಭಾ ಭವನದಲ್ಲಿ ನಡೆಯಲಿದೆ. ಪಶ್ಚಿಮ ವಲಯ ಪೊಲೀಸ್ ಮಹಾ ನಿರೀಕ್ಷಕ ಅಮಿತ್ ಸಿಂಗ್ ಉದ್ಘಾಟಿಸುವರು. ಮಂಗಳೂರು ನಗರ ಪೊಲೀಸ್ ಆಯುಕ್ತ ಸುದೀರ್ ಕುಮಾರ್ ರೆಡ್ಡಿ, ಜಿಲ್ಲಾ ಪೊಲೀಸ್ ಅಧೀಕ್ಷಕ ಡಾ. ಅರುಣ್ ಕೆ. ಗೌರವ ಉಪಸ್ಥಿತರಿರುವರು. ಕಟೀಲ್ ಸೌಂದರ್ಯ ಪ್ಯಾಲೇಸ್ ಮಾಲಕಿ ಸೌಂದರ್ಯ ರಮೇಶ್, ಮುಖ್ಯ ಅತಿಥಿಗಳಾಗಿ ಭಾಗವಹಿಸುವರು ಎಂದು ಸಂಘದ ಅಧ್ಯಕ್ಷ ವಿಶ್ವನಾಥ್ ಪಂಡಿತ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಿಎಂ ಸಿದ್ದರಾಮಯ್ಯರ ಯೋಜನೆಗಳು ಜನರಿಗೆ ಭರವಸೆ: ಐವನ್ ಡಿಸೋಜಾ

ಮಂಗಳೂರು: ಕರ್ನಾಟಕದ ಎರಡೂ ಕ್ಷೇತ್ರಗಳ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅದ್ಭುತ ಗೆಲವು ಸಾಧಿಸಿದ್ದು, ಬಿಜೆಪಿ ಪಕ್ಷ ತಮ್ಮದೇ ಗೆಲುವು ಎಂದು ಕಾಂಗ್ರೆಸ್‌ನ ಮತ ಪಡೆಯಲು ಕೋಮವಾದಿ ಪಕ್ಷಗಳ ಸಂಬಂಧ ಬೆಳೆಸಿ, ಕಾಂಗ್ರೆಸ್ ಪಕ್ಷವನ್ನು ಎತ್ತಿಕಟ್ಟುವ ಕೆಲಸ ಮಾಡಿದ್ದು, ಇದನ್ನು ಲೆಕ್ಕಿಸದೇ ಇಂದು ಕರ್ನಾಟಕದ ಜನತೆ ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಿ, ಸಿದ್ದರಾಮಯ್ಯನವರ ಯೋಜನೆಗಳು ಜನರಿಗೆ ಹೊಸ ಭರವಸೆಯನ್ನು ಹಾಗೂ ಕಾಂಗ್ರೆಸ್ ಪಕ್ಷವನ್ನು ಗೆಲ್ಲಿಸುವಲ್ಲಿ ವಿಶ್ವಾಸ ಮೂಡಿಸಿದೆ ಎಂದು ವಿಧಾನ ಪರಿಷತ್ ಶಾಸಕ ಐವನ್ ಡಿಸೋಜಾ ತಿಳಿಸಿದ್ದಾರೆ.

ಉಪಚುನಾವಣೆಯಲ್ಲಿ ಕಾಂಗ್ರೆಸ್ ಗಲುವಿನ ಹಿನ್ನಲೆಯಲ್ಲಿ ಪತ್ರಿಕಾ ಹೇಳಿಕೆಯಲ್ಲಿ ಅವರು, ಈ ಫಲಿತಾಂಶ ಬಿಜೆಪಿ ರಾಜ್ಯದಲ್ಲಿ ಮುಂದೆಂದೂ ಅಧಿಕಾರಕ್ಕೆ ಬರಲಾರದು ಎಂಬ ಸೂಚನೆ ನೀಡಿದೆ. ಎಂದಿದ್ದಾರೆ.

ಪಂಚರಾಜ್ಯ ಚುನಾವಣೆ, ಬಿಜೆಪಿ ದಿಗ್ವಿಜಯ: ಹರ್ಷೋತ್ಸವ

ಚುರುಮುರಿ ತಯಾರಿಸಿ ಕಾರ್ಯಕರ್ತರಿಗೆ ಹಂಚಿದ ಬಿಜೆಪಿ ಕಾರ್ಯಕರ್ತ ರತ್ನಾಕರಪ್ರಭು | ಸಿಹಿತಿಂಡಿಯನ್ನು ಹಂಚಿ ಸಂಭ್ರಮ

• **ಕನ್ನಡಪ್ರಭ ವಾರ್ತೆ** ಪುತ್ತೂರು

ಪಂಚರಾಜ್ಯ ಚುನಾವಣೆಯಲ್ಲಿ ಬಿಜೆಪಿ ದಿಗ್ವಿಜಯ ಸಾಧಿಸಿದೆ. ತಮಿಳುನಾಡು ಮತ್ತು ಕೇರಳದಲ್ಲಿ ಒಳ್ಳೆಯ ಸಾಧನೆ ಮಾಡಿದೆ. ಪಶ್ಚಿಮ ಬಂಗಾಳದಲ್ಲಿ ಕಳೆದ 15 ವರ್ಷಗಳ ಗೂಂಡಾ ರಾಜಕ್ಕೆ ಅಲ್ಲಿನ ಮತದಾರರು ಬಿಜೆಪಿಯನ್ನು ಗೆಲ್ಲಿಸುವ ಹಿಂದುತ್ವದ ನೆಲೆಯಲ್ಲಿ ಅಭಿವೃದ್ಧಿ ಮಾಡುವ ಸಂದೇಶ ನೀಡಿದೆ. ಹೀಗೆ ಕಾಂಗ್ರೆಸ್ ಪಕ್ಷ ಮತ್ತು ಕಮ್ಯುನಿಸ್ಟ್ ಪಕ್ಷಕ್ಕೆ ಉತ್ತರ ಕೊಡುವ ಕೆಲಸ ಆಗಿದೆ ಎಂದು ಪುತ್ತೂರು ಮಾಜಿ ಶಾಸಕ ಸಂಜೀವ ಮಠಂದೂರು ಹೇಳಿದ್ದಾರೆ.

ಪಂಚರಾಜ್ಯದ ಚುನಾವಣೆಯ ಫಲಿತಾಂಶಕ್ಕೆ ಸಂಬಂಧಿಸಿ ಪುತ್ತೂರು ಬಿಜೆಪಿಯಿಂದ ಮೇ 4ರಂದು ಸಂಜೆ ಬಿಜೆಪಿ ಕಚೇರಿ ಮುಂದೆ ಹರ್ಷಾಚರಣೆಯಲ್ಲಿ ಅವರು ಮಾತನಾಡಿದರು.

ಕೇರಳದಲ್ಲಿ ಯುಡಿಎಫ್ ಬಂದಿದೆ. ದಾವಣಗೆರೆಯಲ್ಲೂ ಕಾಂಗ್ರೆಸ್ ಗೆಲುವಾಗಿದೆ. ಓಟ್ ಚೋರಿ ಎನ್ನುವವರು ಮರು ಮತದಾನಕ್ಕೆ ಹೋಗಬಹುದಿತ್ತಲ್ಲ. ಇನ್ನಾದರೂ ಸುಮ್ಮನೆ ಬಿಜೆಪಿ ಮೇಲೆ ಗೂಬೆ ಕೂರಿಸುವುದನ್ನು ನಿಲ್ಲಿಸಿ, ಚುನಾವಣ



ಪಂಚರಾಜ್ಯ ಚುನಾವಣೆಯಲ್ಲಿ ಬಿಜೆಪಿ ಜಯಭೇರಿ ಪಡೆದಿರುವುದಕ್ಕೆ ಹರ್ಷೋತ್ಸವ ಆಚರಿಸಲಾಯಿತು.

ಆಯೋಗದ ಕುರಿತು ಅಪಪ್ರಚಾರ ಮಾಡುವ ಕೆಲಸವನ್ನೂ ನಿಲ್ಲಿಸಿ, ಇನ್ನಾದರೂ ಕಾಂಗ್ರೆಸ್ ಅಪಪ್ರಚಾರ ಮಾಡುವುದು ಬಿಡಲಿ ಎಂದು ಮಠಂದೂರು ಹೇಳಿದರು.

ಬಿಜೆಪಿ ಗ್ರಾಮಾಂತರ ಮಂಡಲದ ಅಧ್ಯಕ್ಷ ದಯಾನಂದ ಶೆಟ್ಟಿ ಉಜಿರೆಮಾರು ಅವರು ಮಾತನಾಡಿ ಪಂಚರಾಜ್ಯ ಚುನಾವಣೆ ಹಿಂದುತ್ವದ ಪಥದಲ್ಲಿ ಅಭಿವೃದ್ಧಿಯ ಮಂತ್ರ ಪ್ರಧಾನಿ ಮೋದಿ ಮಾಡಿದ್ದಾರೆ ಎಂದರು.

ಬಿಜೆಪಿ ಕಾರ್ಯಕರ್ತ ರತ್ನಾಕರಪ್ರಭು ಅವರು ಚರುಂಬುರಿ ತಂದು ಸ್ಥಳದಲ್ಲೇ ಚುರಂಬುರಿ ಮಾಡಿ ಕಾರ್ಯಕರ್ತರಿಗೆ ಹಂಚಿದರು. ಈ ಸಂದರ್ಭ ಸಿಹಿ

▪ ಬಿಜೆಪಿ ಕಾರ್ಯಕರ್ತ ರತ್ನಾಕರಪ್ರಭು ಅವರು ಚರುಂಬುರಿ ತಂದು ಸ್ಥಳದಲ್ಲೇ ಚುರಂಬುರಿ ಮಾಡಿ ಕಾರ್ಯಕರ್ತರಿಗೆ ಹಂಚಿದರು. ಈ ಸಂದರ್ಭ ಸಿಹಿ ತಿಂಡಿ ಹಂಚಲಾಯಿತು. ಪಟಾಕಿ ಸಿಡಿಸಿ ಸಂಭ್ರಮಿಸಲಾಯಿತು. ಬಳಿಕ ಬಸ್ ನಿಲ್ದಾಣದ ಬಳಿ, ದರ್ಬೆ, ಮತ್ತು ಪುರುಷರಕಟ್ಟೆಯಲ್ಲಿ ಪಟಾಕಿ ಸಿಡಿಸಿ ಸಿಹಿತಿಂಡಿಯನ್ನು ಹಂಚಿ ಸಂಭ್ರಮಿಸಿದರು.

ತಿಂಡಿ ಹಂಚಲಾಯಿತು. ಪಟಾಕಿ ಸಿಡಿಸಿ ಸಂಭ್ರಮಿಸಲಾಯಿತು. ಬಳಿಕ ಬಸ್ ನಿಲ್ದಾಣದ ಬಳಿ, ದರ್ಬೆ, ಮತ್ತು ಪುರುಷರಕಟ್ಟೆಯಲ್ಲಿ ಪಟಾಕಿ ಸಿಡಿಸಿ ಸಿಹಿತಿಂಡಿಯನ್ನು ಹಂಚಿ ಸಂಭ್ರಮಿಸಿದರು.

ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಪ್ರಸನ್ನ ಕುಮಾರ್ ಮಾರ್ತ ಬಿಜೆಪಿ ನಗರ ಮಂಡಲದ ಅಧ್ಯಕ್ಷ ಶಿವಕುಮಾರ್‌ಪಿ.ಬಿ, ಜಿಲ್ಲಾ ಕಾರ್ಯದರ್ಶಿ ವಿದ್ಯಾ ಗೌರಿ, ರಾಜ್ಯ ಹಿಂದುಳಿದಮೋರ್ಚಾಕಾರ್ಯದರ್ಶಿ ಆರ್.ಸಿ.ನಾರಾಯಣ್, ಜಿಲ್ಲಾ ಫಲಾನುಭವಿಗಳ ಪ್ರಮುಖ್ ನಿತೀಶ್ ಕುಮಾರ್‌ಶಾಂತಿವನ, ನಗರಸಭೆ ಮಾಜಿ ಅಧ್ಯಕ್ಷೆ ಲೀಲಾವತಿ ಅಣ್ಣು ನಾಯ್ಕ, ಹರಿಪ್ರಸಾದ್ ಯಾದವ್, ಜಿಲ್ಲಾ ಪ್ರಶಿಕ್ಷಣ ಪ್ರಕೋಷ್ಠದ ಸಹ ಸಂಚಾಲಕ ಪುರುಷೋತ್ತಮ ಮುಂಗ್ಲಿಮನೆ, ಹಿರಿಯರಾದ ಎಸ್ ಅಪ್ಪಯ್ಯ ಮಣಿಯಾಣಿ, ಉದ್ಯಮಿ ಉಜ್ವಲ್ ಪ್ರಭು, ವಸಂತಲಕ್ಷ್ಮೀ, ಸ್ವರ್ಣಲತಾ ಹೆಗ್ಡೆ, ಶಶಿಕಲಾ ಸಿ. ಎಸ್, ಜಯಲಕ್ಷ್ಮೀ ಶಗ್ರಿತ್ತಾಯ, ನಾಗೇಂದ್ರ ಬಾಳಿಗ, ಶಶಿಧರ್‌ನಾಯಕ್, ಮಂಡಲದ ಪ್ರಧಾನ ಕಾರ್ಯದರ್ಶಿ ಲೋಕೇಶ್ ಚಾಕೋಟೆ, ಭಾಸ್ಕರ್‌ರೈ ಕಟ್ಟಪುಣಿ, ಭಾಮಿ ಜಗದೀಶ್ ಶೆಣೈ, ಅಚ್ಚುತ ನಾಯಕ್, ಯುವ ಉದ್ಯಮಿ ಉಜ್ವಲ್ ಪ್ರಭು, ವಿರೂಪಾಕ್ಷ ಭಟ್, ರಫೀಕ್ ದರ್ಬೆ, ಹರೀಶ್ ದೋಳ್ಪಾಡಿ, ನಿತೇಶ್ ಕಲ್ಲೇಗ, ಯತೀಶ್ ದೇವ, ಸುರೇಶ್ಚಂದ್ರ ರೈ, ರಾಜೇಶ್ ಬನ್ನೂರು, ಅಭಿಜಿತ್ ಕೊಡಿಪ್ಪಾಡಿ, ಸುನಿಲ್ ದಡ್ಡು, ರಾಜೇಶ್ ರೈ ಪರ್ಪುಂಜ, ಅಣ್ಣಪ್ಪ ಕಾರೆಕ್ಕಾಡು, ನಾಗೇಶ್ ಟಿ.ಎಸ್, ನಾಗೇಂದ್ರ ಬಾಳಿಗ, ಅಜಿತ್ ಕುಮಾರ್ ರೈ, ದಿನೇಶ್ ಪಂಜಿಗ ಮತ್ತಿತರರಿದ್ದರು.

ವಡ್ಡರ್ಸೆ: ಯಕ್ಷಗಾನ ಕಲಾರಂಗದ 93ನೇ ಮನೆ ಹಸ್ತಾಂತರ

ದಯಾಶಂಕರ ಶೆಟ್ಟಿ ಮತ್ತು ಪ್ರತಿಭಾ ಶೆಟ್ಟಿ ಅವರ ಹೆಸರಿನಲ್ಲಿ ನಿರ್ಮಿಸಿದ ನೂತನ ಮನೆ

• **ಕನ್ನಡಪ್ರಭ ವಾರ್ತೆ** ಉಡುಪಿ

ಯಕ್ಷಗಾನ ಕಲಾರಂಗ ವಿದ್ಯಾಪೋಷಕ್ ಯೋಜನೆಯ ಪ್ರತಿಭಾವಂತೆ ದ್ವಿತೀಯ ಪಿಯುಸಿ ವಿದ್ಯಾರ್ಥಿನಿ ಸಜನಿ (ಎಸ್‌ಎಸ್‌ಎಲ್‌ಸಿಯಲ್ಲಿ ಶೇ 98, ಪ್ರಥಮ ಪಿಯುಸಿಯಲ್ಲಿ ಶೇ 97) ಸರಸ್ವತಿ ಮತ್ತು ಬಸವ ಪೂಜಾರಿ ಇವರ ಪುತ್ರಿ, ಇವಳಿಗೆ ಬ್ರಹ್ಮಾವರ ತಾಲೂಕಿನ ವಡ್ಡರ್ಸೆಯಲ್ಲಿ ದಯಾಶಂಕರ ಶೆಟ್ಟಿ ಮತ್ತು ಪ್ರತಿಭಾ ಶೆಟ್ಟಿ ಅವರ ಹೆಸರಿನಲ್ಲಿ ಮುಂಬೈಯ ವಿಂಡ್ಸರ್‌ರೆಫ್ರೆಕ್ಟರೀಸ್ ಪ್ರೈ.ಲಿ. ಸಂಸ್ಥೆಯ ಸಿಇಒ ಪ್ರಜ್ಞಾ ಶೆಟ್ಟಿ ಅವರು ಸಂಸ್ಥೆಯ ವತಿಯಿಂದ ನಿರ್ಮಿಸಿದ ನೂತನ ಮನೆ 'ಪ್ರತಿಭಾ ನಿಲಯ'ವನ್ನು ಕುಂದಾಪುರ ಶಾಸಕ ಕಿರಣ್ ಕುಮಾರ್‌ಕೊಡ್ಗಿ ಅವರು ಹಸ್ತಾಂತರಿಸಿದರು.

ಯಕ್ಷಗಾನ ಕಲಾರಂಗದ ವಿದ್ಯಾಪೋಷಕ್ ಫಲಾನುಭವಿಗಳ ಆಯ್ಕೆ, ಮನೆ ನಿರ್ಮಾಣಕ್ಕೆ ಅರ್ಹತೆಯ ಮಾನದಂಡ ಎಲ್ಲವೂ ಪಾರದರ್ಶಕ. ಅಲ್ಲಿ ಯಾರ ಪ್ರಭಾವವೂ ಕೆಲಸ ಮಾಡದು, ಅವರ ಶಿಸ್ತು, ಸಮಯಪ್ರಜ್ಞೆಯಿಂದ ಕೂಡಿದ ಕಾರ್ಯಕ್ರಮ ಹೇಗಿದೆಯೆಂದರೆ ಬರಲು ಅನಿವಾರ್ಯ ಕಾರಣದಿಂದ ಸ್ವಲ್ಪ ವಿಳಂಬವಾದರೂ ನಮ್ಮನ್ನು ಅಪರಾಧಿ ಪ್ರಜ್ಞೆಗೆ ಒಳಗಾಗುವಂತೆ ಮಾಡುತ್ತದೆ ಎಂದು ಹೇಳಿದರು.

ನಿವೃತ್ತ ಪ್ರಾಧ್ಯಾಪಕ ಉಪೇಂದ್ರ ಸೋಮಯಾಜಿ ಅವರು ಯಕ್ಷಗಾನ ಕಲಾರಂಗ ಸುಮನಸ್ಕರ ಕೂಟ. ಅವರ ಸಮಾಜಪರ ಕಾಳಜಿ ಅನನ್ಯ. ಈ ಕಾಲದಲ್ಲಿ ಇಂತಹ ಒಂದು ಸಂಘಟನೆ ಇದೆ ಎಂಬುದೇ ನಾಡಿನ ಹೆಮ್ಮೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಅಧ್ಯಕ್ಷತೆ ಉಡುಪಿಯ ಮಾಜಿ ಲಯನ್ಸ್ ಗವರ್ನರ್, ಯಕ್ಷಗಾನ ಕಲಾರಂಗದ ಸದಸ್ಯ ವಿ. ಜಿ. ಶೆಟ್ಟಿ ವಹಿಸಿದ್ದರು.



ಉಡುಪಿ ಯಕ್ಷಗಾನ ಕಲಾರಂಗದ 93ನೇ ಮನೆಯಲ್ಲಿ ಶಾಸಕ ಕೊಡ್ಗಿ ಉದ್ಘಾಟಿಸಿದರು

▪ ಯಕ್ಷಗಾನ ಕಲಾರಂಗದ ವಿದ್ಯಾಪೋಷಕ್ ಫಲಾನುಭವಿಗಳ ಆಯ್ಕೆ, ಮನೆ ನಿರ್ಮಾಣಕ್ಕೆ ಅರ್ಹತೆಯ ಮಾನದಂಡ ಎಲ್ಲವೂ ಪಾರದರ್ಶಕ. ಅಲ್ಲಿ ಯಾರ ಪ್ರಭಾವವೂ ಕೆಲಸ ಮಾಡದು, ಅವರ ಶಿಸ್ತು, ಸಮಯಪ್ರಜ್ಞೆಯಿಂದ ಕೂಡಿದ ಕಾರ್ಯಕ್ರಮ ಹೇಗಿದೆಯೆಂದರೆ ಬರಲು ಅನಿವಾರ್ಯ ಕಾರಣದಿಂದ ಸ್ವಲ್ಪ ವಿಳಂಬವಾದರೂ ನಮ್ಮನ್ನು ಅಪರಾಧಿ ಪ್ರಜ್ಞೆಗೆ ಒಳಗಾಗುವಂತೆ ಮಾಡುತ್ತದೆ ಎಂದು ಕೊಡ್ಗಿ ಹೇಳಿದರು.

ಕುಂದಾಪುರ ವಕೀಲರ ಸಂಘದ ಮಾಜಿ ಅಧ್ಯಕ್ಷ ಬನ್ನಾಡಿ ಸೋಮನಾಥ ಹೆಗ್ಡೆ, ಚನ್ನರಾಯಪಟ್ಟಣದ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶೆ ಅರುಣಾ ಸೋಮನಾಥ ಹೆಗ್ಡೆ ಭಾಗವಹಿಸಿದ್ದರು.

ಪ್ರಾಂಶುಪಾಲ ಜಗದೀಶ ನಾವುಡ, ಗೋವಿಂದ ಪೈ ಸಂಶೋಧನ ಕೇಂದ್ರದ ನಿರ್ದೇಶಕ ಡಾ. ಬಿ. ಜಗದೀಶ ಶೆಟ್ಟಿ, ಸಂಸ್ಥೆಯ ಉಪಾಧ್ಯಕ್ಷ ಪಿ. ಕಿಶನ್ ಹೆಗ್ಡೆ, ಯು. ವಿಶ್ವನಾಥ ಶೆಣೈ, ಯು. ಎಸ್. ರಾಜಗೋಪಾಲ ಆಚಾರ್ಯ, ವಿಷ್ಣುಮೂರ್ತಿ ಭಟ್ ಉಪಸ್ಥಿತರಿದ್ದರು.

ಅಧ್ಯಕ್ಷ ಎಂ. ಗಂಗಾಧರ ರಾವ್ ಸ್ವಾಗತಿಸಿದರು. ನಾರಾಯಣ ಎಂ. ಹೆಗಡೆ ವಂದಿಸಿದರು. ಕಾರ್ಯದರ್ಶಿ ಮುರಲಿ ಕಡೆಕಾರ್ ಕಾರ್ಯಕ್ರಮ ನಿರೂಪಿಸಿದರು.

ಕಾಪು: ಸ್ವಾವಲಂಬಿ ಸಾರಥಿ ಗೂಡ್ಸ್ ವಾಹನ ಹಸ್ತಾಂತರ

ವಾಹನ ಹಸ್ತಾಂತರಿಸಿದ ಶಾಸಕ ಗುರ್ಮೆ ಸುರೇಶ್ ಶೆಟ್ಟಿ



ಶಾಸಕ ಗುರ್ಮೆ ಸುರೇಶ್ ಶೆಟ್ಟಿ ವಾಹನ ಹಸ್ತಾಂತರಿಸಿದರು

• **ಕನ್ನಡಪ್ರಭ ವಾರ್ತೆ** ಉಡುಪಿ

ಡಾ. ಬಿ. ಆರ್. ಅಂಬೇಡ್ಕರ್‌ಅಭಿವೃದ್ಧಿ ನಿಗಮ ಉಡುಪಿ ಜಿಲ್ಲೆ ವತಿಯಿಂದ ಕಾಪು ಶಾಸಕರಾದ ಗುರ್ಮೆ ಸುರೇಶ್ ಶೆಟ್ಟಿ ಅವರ ಶಿಫಾರಸ್ಸಿನ ಮೇರೆಗೆ ಸ್ವಾವಲಂಬಿ ಸಾರಥಿ ಯೋಜನೆಯಡಿ ಗೂಡ್ಸ್ ವಾಹನ ಮಂಜೂರಾಗಿದ್ದು, ಅವುಗಳನ್ನು ಕಾಪು ತಾಲೂಕು ಪಂಚಾಯತ್ ಬಳಿ ಫಲಾನುಭವಿಗಳಿಗೆ ಶಾಸಕರು ವಿತರಿಸಿದರು.

ಸ್ವಾವಲಂಬಿ ಸಾರಥಿ ಯೋಜನೆಯಡಿ ಎರ್ಮಾಳು ಗ್ರಾಮದ ಸುಜೇಂದ್ರ, ಕಟಪಾಡಿ ಏಣಗುಡ್ಡೆ ಗ್ರಾಮದ ಸೂರಜ್ ಅವರಿಗೆ ಸೇರಿದಂತೆ ಒಟ್ಟು 2 ಫಲಾನುಭವಿಗಳಿಗೆ ಗೂಡ್ಸ್ ವಾಹನ ವಿತರಿಸಲಾಯಿತು.

ಈಸಂದರ್ಭ ಕಾಪುತಹಸೀಲ್ದಾರರಾದ ಅನಂತ ಶಂಕರ್, ಕಾಪು ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳಾದ ವಿಜಯ್ ಕುಮಾರ್, ಅಂಬೇಡ್ಕರ್ ಅಭಿವೃದ್ಧಿ ನಿಗಮದ ವ್ಯವಸ್ಥಾಪಕರಾದ ಶಂಕರ್‌ಉಪಸ್ಥಿತರಿದ್ದರು.

ಪಕ್ಷ ಸಂಘಟನೆಗೆ ಪ್ರಶಿಕ್ಷಣ ಅಭಿಯಾನ ಸಹಕಾರಿ: ಕ್ಯಾ.ಚೌಟ

ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಪ್ರಶಿಕ್ಷಣ ಮಹಾಭಿಯಾನ ವರ್ಗದ ಉದ್ಘಾಟನೆ

• **ಕನ್ನಡಪ್ರಭ ವಾರ್ತೆ** ಮಂಗಳೂರು

ಬಿಜೆಪಿ ಮಂಗಳೂರು ನಗರ ದಕ್ಷಿಣ ಮಂಡಲದ ವತಿಯಿಂದ ಪಂ.ದೀನ್ ದಯಾಳ್ ಉಪಾಧ್ಯಾಯ ಪ್ರಶಿಕ್ಷಣ ಮಹಾಭಿಯಾನ-2026 ವರ್ಗದ ಉದ್ಘಾಟನಾ ಸಮಾರಂಭ ಗಂಜಿಮಠ ಬಳಿಯ ಒಡ್ಡೂರು ಫಾರ್ಮ್ಸ್‌ನಲ್ಲಿ ನಡೆಯಿತು.

ಸಂಸದ ಕ್ಯಾ.ಬ್ರಿಜೇಶ್ ಚೌಟ ಮಾತನಾಡಿ, ಇಂತಹ ವರ್ಗಗಳು ಪಕ್ಷ ಸಂಘಟನೆಗೆ ಸಹಕಾರಿಯಾಗುವುದರ ಜೊತೆಗೆ ಕಾರ್ಯಕರ್ತರನ್ನು ರೂಪುಗೊಳಿಸುವಲ್ಲಿ ಸಹಕಾರಿಯಾಗುತ್ತವೆ ಎಂದರು.

ಶಾಸಕ ಡಿ.ವೇದವ್ಯಾಸ ಕಾಮತ್ ಮಾತನಾಡಿ, ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಸಾಧನೆಗಳು ಹಾಗೂ ರಾಜ್ಯ

▪ ಶಾಸಕ ಡಿ.ವೇದವ್ಯಾಸ ಕಾಮತ್ ಮಾತನಾಡಿ, ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಸಾಧನೆಗಳು ಹಾಗೂ ರಾಜ್ಯ ಕಾಂಗ್ರೆಸ್ ಸರ್ಕಾರದ ಆಡಳಿತ ವೈಫಲ್ಯಗಳ ಬಗ್ಗೆ ವಿಸ್ತಾರವಾಗಿ ಮಾಹಿತಿ ನೀಡಿದರು. ಎರಡು ದಿನಗಳ ಕಾಲ ವರ್ಗ ನಡೆಯಲಿದ್ದು, ಶಿಬಿರಾರ್ಥಿಗಳಿಗೆ ಹಲವು ಪ್ರಮುಖರು ಪಕ್ಷ ಸಂಘಟನೆ, ಚಟುವಟಿಕೆ ಕುರಿತಂತೆ ವಿವಿಧ ಅವಧಿಗಳನ್ನು ತೆಗೆದುಕೊಳ್ಳಲಿದ್ದಾರೆ ಎಂದರು.



ಪಂ.ದೀನ್ ದಯಾಳ್ ಉಪಾಧ್ಯಾಯ ಪ್ರಶಿಕ್ಷಣ ಮಹಾಭಿಯಾನ ವರ್ಗಕ್ಕೆ ಚಾಲನೆ ನೀಡಲಾಯಿತು

ಕಾಂಗ್ರೆಸ್ ಸರ್ಕಾರದ ಆಡಳಿತ ವೈಫಲ್ಯಗಳ ಬಗ್ಗೆ ವಿಸ್ತಾರವಾಗಿ ಮಾಹಿತಿ ನೀಡಿದರು.

ಎರಡು ದಿನಗಳ ಕಾಲ ವರ್ಗ ನಡೆಯಲಿದ್ದು, ಶಿಬಿರಾರ್ಥಿಗಳಿಗೆ ಹಲವು ಪ್ರಮುಖರು ಪಕ್ಷ ಸಂಘಟನೆ, ಚಟುವಟಿಕೆ ಕುರಿತಂತೆ ವಿವಿಧ ಅವಧಿಗಳನ್ನು ತೆಗೆದುಕೊಳ್ಳಲಿದ್ದಾರೆ.

ಜಿಲ್ಲಾಧ್ಯಕ್ಷ ಸತೀಶ್ ಕುಂಪಲ, ಮಂಡಲ ಅಧ್ಯಕ್ಷ ರಮೇಶ್‌ಕಂಡೆಟ್ಟು, ಜಿಲ್ಲಾಪ್ರಧಾನಕಾರ್ಯದರ್ಶಿಗಳಾದ ಪ್ರೇಮಾನಂದ ಶೆಟ್ಟಿ, ಯತೀಶ್ ಆರ್ವಾರ್, ಮಂಡಲದ ಪ್ರಧಾನ ಕಾರ್ಯದರ್ಶಿಗಳಾದ ರಮೇಶ್ ಹೆಗ್ಡೆ, ಲಲ್ಲೇಶ್ ಕುಮಾರ್, ರಾಜ್ಯ ಕಾರ್ಯಕಾರಿಣಿ ಸದಸ್ಯ ನಿತಿನ್ ಕುಮಾರ್, ಮಾಜಿ ವಿಧಾನಪರಿಷತ್ ಸದಸ್ಯ ಮೋನಪ್ಪ ಭಂಡಾರಿ, ಜಿಲ್ಲಾ ಪದಾಧಿಕಾರಿಗಳು, ನಿಕಟ ಪೂರ್ವ ಮನಪಾ ಸದಸ್ಯರು, ಮಂಡಲ ಪದಾಧಿಕಾರಿಗಳು, ಜಿಲ್ಲೆ ಮತ್ತು ಮಂಡಲದ ಮೋರ್ಚಾದ ಪದಾಧಿಕಾರಿಗಳು, ಪ್ರಕೋಷ್ಠದ ಪ್ರಮುಖರು ಇದ್ದರು.

ಮಾನವ ಹಕ್ಕುಗಳ ಆಯೋಗ ಕಿರುಚಿತ್ರ ಸ್ಪರ್ಧೆಗೆ ಆಹ್ವಾನ

• **ಕನ್ನಡಪ್ರಭ ವಾರ್ತೆ** ಮಂಗಳೂರು

ನವದೆಹಲಿಯ ಭಾರತದ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ 2015ರಿಂದ ಮಾನವ ಹಕ್ಕುಗಳ ಕುರಿತು ಕಿರುಚಿತ್ರ ಸ್ಪರ್ಧೆಯನ್ನು ನಡೆಸಿಕೊಂಡು ಬರುತ್ತಿದ್ದು, 2026 ರಲ್ಲಿ ಸ್ಪರ್ಧೆಯ 12ನೇ ಆವೃತ್ತಿಗೆ, ದೇಶದ ನಾಗರಿಕರಿಂದ ಆನ್‌ಲೈನ್‌ನಲ್ಲಿ ಪ್ರವೇಶಗಳನ್ನು ಆಹ್ವಾನಿಸಿದೆ.

ಮೊದಲ, ಎರಡನೇ ಮತ್ತು ಮೂರನೇ ಅತ್ಯುತ್ತಮ ಚಿತ್ರಕ್ಕೆ ಬಹುಮಾನದ ಮೊತ್ತವು ಕ್ರಮವಾಗಿ 2 ಲಕ್ಷ ರು., 1.50 ಲಕ್ಷ ರು. ಮತ್ತು 1 ಲಕ್ಷ ರು. ಆಗಿರುತ್ತದೆ. ಆಯೋಗ ಮೂರು ನಗದು ಪ್ರಶಸ್ತಿಗಳು, ಪ್ರಮಾಣಪತ್ರಗಳು ಮತ್ತು ಟ್ರೋಫಿಗಳ ಜೊತೆಗೆ,ತೀರ್ಪುಗಾರರು ಶಿಫಾರಸು ಮಾಡಿದ ಗರಿಷ್ಠ 4 ಚಿತ್ರಗಳಿಗೆ ತಲಾ 50 ಸಾವಿರ ರು. ನಗದು ಬಹುಮಾನ 'ದೊಂದಿಗೆ ಪ್ರಮಾಣಪತ್ರವನ್ನು ನೀಡಲಾಗುತ್ತದೆ.

ಕಿರುಚಿತ್ರಗಳು ಹಿಂದಿ ಅಥವಾ ಯಾವುದೇ ಭಾರತೀಯ ಭಾಷೆಯಲ್ಲಿರಹುದು. ಇಂಗ್ಲಿಷ್‌ನಲ್ಲಿ ಉಪಶೀರ್ಷಿಕೆಗಳನ್ನು ಹಾಕಿರಬೇಕು. ಕಿರುಚಿತ್ರದ ಅವಧಿ ಕನಿಷ್ಠ 3 ನಿಮಿಷಗಳು ಮತ್ತು ಗರಿಷ್ಠ 10 ನಿಮಿಷಗಳು.

▪ ಷರತ್ತುಗಳು ಮತ್ತು ಅರ್ಜಿ ನಮೂನೆಯ ಪ್ರತಿಯನ್ನು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ವೆಬ್‌ಸೈಟ್ ನಿಂದ ಡೌನ್‌ಲೋಡ್ ಮಾಡಬಹುದು.

ಪ್ರವೇಶಗಳನ್ನು ಸ್ವೀಕರಿಸಲು ಕೊನೆಯ ದಿನ ಜೂ.30. ಗೂಗಲ್ ಡ್ರೈವ್ ಬಳಸಿ ಆನ್‌ಲೈನ್‌ನಲ್ಲಿ ಕಿರುಚಿತ್ರಗಳನ್ನು ಸ್ಪರ್ಧೆಗೆ ಕಳುಹಿಸಬೇಕು.

ಮಾನವ ಹಕ್ಕುಗಳ ಸಂಸ್ಕೃತಿ ಮತ್ತು ಸಂವೇದನೆಯನ್ನು ಮೂಡಿಸುವ ಉದ್ದೇಶದ ಈ ಸ್ಪರ್ಧೆಯಲ್ಲಿ ಸಾರ್ವಜನಿಕರು ಯಾವುದೇ ವಯೋಮಿತಿಯ ನಿರ್ಬಂಧವಿಲ್ಲದೇ ಭಾಗವಹಿಸಬಹುದು. ಚ್ಚಿನ ವಿವರಗಳಿಗೆ ದೂರವಾಣಿ ಸಂಖ್ಯೆ: 011-24663281/ 24663367 ಸಂಪರ್ಕಿಸಬಹುದು ಎಂದು ಎನ್. ಹೆಚ್.ಆರ್.ಸಿ ಮಾಧ್ಯಮ ಮತ್ತು ಸಂವಹನ ವಿಭಾಗದ ಉಪನಿರ್ದೇಶಕ ಜೈಮಿನಿ ಕುಮಾರ್‌ಶ್ರೀವಾಸ್ತವ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉದ್ಘಾಟನೆ ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನದಿಂದ ಸ್ವರ್ಶ ಕಲಾ ಮಂದಿರಕ್ಕೆ ಜಾನಪದ ದಿಬ್ಬಣ ಮೆರವಣಿಗೆ

ಬಿ.ಸಿ.ರೋಡ್: ಕರಾವಳಿ ಕಲೋತ್ಸವಕ್ಕೆ ಸಂಭ್ರಮದ ಚಾಲನೆ

• **ಕನ್ನಡಪ್ರಭ ವಾರ್ತೆ** ಬಂಟ್ವಾಳ

ಚಿಣ್ಣರ ಲೋಕ ಮೋಕೆದ ಕಲಾವಿದೆರ್‌ಸೇವಾ ಟ್ರಸ್ಟ್ ಬಂಟ್ವಾಳ ಮತ್ತು ಚಿಣ್ಣರ ಲೋಕ ಸೇವಾ ಬಂಧು ಬಂಟ್ವಾಳ ಸಂಯುಕ್ತ ಆಶ್ರಯದಲ್ಲಿ ಬಿ.ಸಿ. ರೋಡಿನ ಸ್ವರ್ಶ ಕಲಾ ಮಂದಿರದಲ್ಲಿ ಆಯೋಜಿಸಲಾಗಿರುವ ಕರಾವಳಿ ಕಲೋತ್ಸವಕ್ಕೆ ಚಾಲನೆ ದೊರಕಿತು.

ಇದಕ್ಕೆ ಪೂರ್ವಭಾವಿಯಾಗಿ ಜಾನಪದ ದಿಬ್ಬಣ ಮೆರವಣಿಗೆ ಬಿ.ಸಿ. ರೋಡ್ ನ ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನ ಸಭಾಂಗಣದಿಂದ ಸ್ವರ್ಶ ಕಲಾ ಮಂದಿರಕ್ಕೆ ಸಾಗಿತು. ಬಂಟ್ವಾಳ ತಹಸೀಲ್ದಾರ್ ಮಂಜುನಾಥ್ ಚಾಲನೆ ನೀಡಿದರು. ಕರ್ನಾಟಕ ಗೇರು ಅಭಿವೃದ್ಧಿ ನಿಗಮದ ಅಧ್ಯಕ್ಷೆ ಮಮತಾ ಡಿ.ಎಸ್. ಗಟ್ಟಿ ಮುಖ್ಯ ಅತಿಥಿಯಾಗಿದ್ದರು.

ಕರಾವಳಿ ಕಲೋತ್ಸವ ಅಧ್ಯಕ್ಷ ಸುದರ್ಶನ್ ಜೈನ್ ಪಂಜಿಕಲ್ಲು, ತುಳುಸಾಹಿತ್ಯ ಸಂಭ್ರಮದ ಅಧ್ಯಕ್ಷ ಬೇಬಿ ಕುಂದರ್, ಕಲೋತ್ಸವದ ಸ್ಥಾಪಕಾಧ್ಯಕ್ಷ ಮೋಹನ್ ದಾಸ ಕೊಟ್ಟಾರಿ ಮುನ್ನೂರು, ಆಡಳಿತ ಟ್ರಸ್ಟಿ ತೇವು ತಾರಾನಾಥ



ಬಿ.ಸಿ. ರೋಡಿನ ಸ್ವರ್ಶ ಕಲಾ ಮಂದಿರದಲ್ಲಿ ಆಯೋಜಿಸಲಾಗಿರುವ ಕರಾವಳಿ ಕಲೋತ್ಸವಕ್ಕೆ ಚಾಲನೆ.

▪ ಮೆರವಣಿಗೆ ಬಿ.ಸಿ. ರೋಡ್ ನ ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನ ಸಭಾಂಗಣದಿಂದ ಸ್ವರ್ಶ ಕಲಾ ಮಂದಿರಕ್ಕೆ ಸಾಗಿತು. ಬಂಟ್ವಾಳ ತಹಸೀಲ್ದಾರ್‌ಮಂಜುನಾಥ್ ಚಾಲನೆ ನೀಡಿದರು. ಗೇರು ಅಭಿವೃದ್ಧಿ ನಿಗಮದ ಅಧ್ಯಕ್ಷೆ ಮಮತಾ ಗಟ್ಟಿ ಅತಿಥಿಯಾಗಿದ್ದರು.

ಕೊಟ್ಟಾರಿ, ಬ್ಯಾರಿ ಸಾಹಿತ್ಯ ಸಂಭ್ರಮದ ಅಧ್ಯಕ್ಷ ಅಬ್ದುಲ್ ರಝಾಕ್ ಕುಕ್ಕಾಜೆ ಸಹಿತ ಹಲವರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಮಹಿಳೆಯರಿಗೆ ಸೀರೆ ನಡಿಗೆ ಸ್ಪರ್ಧೆಗೆ ಕರ್ನಾಟಕ ಗೇರು ಅಭಿವೃದ್ಧಿ ನಿಗಮದ ಅಧ್ಯಕ್ಷೆ ಮಮತಾ ಡಿ.ಎಸ್. ಗಟ್ಟಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಬಳಿಕ ಸ್ವರ್ಶ ಕಲಾ ಮಂದಿರದಲ್ಲಿ ಕಲೋತ್ಸವಕ್ಕೆ ಚಾಲನೆ ದೊರೆಯಿತು. ಮಾಜಿ ಸಚಿವ ಬಿ. ರಮಾನಾಥ ರೈ, ಗೇರು ಅಭಿವೃದ್ಧಿ ನಿಗಮದ ಅಧ್ಯಕ್ಷೆ ಮಮತಾ ಗಟ್ಟಿ, ಕಲೋತ್ಸವ ಅಧ್ಯಕ್ಷ ಸುದರ್ಶನ ಜೈನ್, ಕಸಾಪ ಜಿಲ್ಲಾಧ್ಯಕ್ಷ ಡಾ. ಎಂ.ಪಿ. ಶ್ರೀನಾಥ, ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ತಾರಾನಾಥ ಗಟ್ಟಿ ಕಾಪಿಕಾಡ್, ರೋಟರಿ ಮಾಜಿ ಜಿಲ್ಲಾ ಗವರ್ನರ್‌ಪ್ರಕಾಶ್ ಕಾರಂತ, ಪ್ರಮುಖರಾದ ಪಿಯೂಸ್‌ಎಲ್. ರೋಡ್ರಿಗಸ್, ಸೀತಾರಾಮ ಶೆಟ್ಟಿ ಕಾಂತಾಡಿಗುತ್ತು, ಉಮೇಶ್ ಕುಮಾರ್ ವೈ, ಬ್ಯಾರಿ ಸಾಹಿತ್ಯ ಸಂಭ್ರಮ ಅಧ್ಯಕ್ಷ ರಝಾಕ್ ಕುಕ್ಕಾಜೆ ಉಪಸ್ಥಿತರಿದ್ದರು.

10ರಿಂದ ಶ್ರೀಮದ್ ಭಾಗವತ ಸಪ್ತಾಹ ಪ್ರವಚನ

ಮಾತೃಮಂಡಳಿಯವರಿಂದ ಶ್ರೀ ಭಗವನ್ನಾಮ ಸಂಕೀರ್ತನೆ | ವಿವಿಧ ಮಠಾಧೀಶರ ಆಶೀರ್ವಚನ



ಶ್ರೀಮದ್ ಭಾಗವತ ಸಪ್ತಾಹ ಪ್ರವಚನ ಕುರಿತು ಡಾ.ಎಂ.ಬಿ.ಪುರಾಣಿಕ್ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು

• **ಕನ್ನಡಪ್ರಭ ವಾರ್ತೆ** ಮಂಗಳೂರು

ದಕ್ಷಿಣ ಕನ್ನಡ ದ್ರಾವಿಡ ಬ್ರಾಹ್ಮಣರ ಎಸೋಸಿಯೇಷನ್ ಮಂಗಳೂರು ಮತ್ತು ತುಳುನಾಡು ಎಜ್ಯುಕೇಶನಲ್ ಟ್ರಸ್ಟ್ ಮಂಗಳೂರು ವತಿಯಿಂದ ಮೇ 10ರಿಂದ 16ರವರೆಗೆ ಮಂಗಳೂರಿನ ಕೊಡಿಯಾಲ್‌ಬೈಲ್‌ನ ಎಸ್‌ಕೆಡಿಬಿ ಆವರಣದಲ್ಲಿರುವ ಶಾರದಾ ವಿದ್ಯಾಲಯದ ಧ್ಯಾನಮಂದಿರದಲ್ಲಿ ಶ್ರೀಮದ್ ಭಾಗವತ ಸಪ್ತಾಹ ಪ್ರವಚನ ನಡೆಯಲಿದೆ ಎಂದು ತುಳುನಾಡು ಎಜ್ಯುಕೇಶನ್ ಟ್ರಸ್ಟ್ ಅಧ್ಯಕ್ಷ ಡಾ.ಎಂ.ಬಿ.ಪುರಾಣಿಕ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ವರ್ಷ ಪ್ರಸಿದ್ಧ ಪ್ರವಚನಕಾರ ಹುಬ್ಬಳ್ಳಿ ಡಾ.ಶ್ರೀಹರಿ ಆಚಾರ್ಯ ಬಾಳ್ವೇಕರ್ ಅವರಿಂದ ಶ್ರೀಮದ್ ಭಾಗವತ ಸಪ್ತಾಹ ಪ್ರವಚನ ಸಂಜೆ 5.30ರಿಂದ 7.30ರ ವರೆಗೆ ನಡೆಯಲಿದೆ. ಪ್ರತಿದಿನ ಸಂಜೆ 5ರಿಂದ ಮಾತೃಮಂಡಳಿಯವರಿಂದ ಶ್ರೀ ಭಗವನ್ನಾಮ ಸಂಕೀರ್ತನೆ ಕಾರ್ಯಕ್ರಮ ನಡೆಯಲಿದೆ. ವಿವಿಧ ಮಠಾಧೀಶರು ಆಗಮಿಸಿ ಆಶೀರ್ವದಿಸಲಿದ್ದಾರೆ ಎಂದರು.

ದಕ್ಷಿಣ ಕನ್ನಡ ದ್ರಾವಿಡ ಬ್ರಾಹ್ಮಣರ ಎಸೋಸಿಯೇಶನ್ ಮಂಗಳೂರು ಅಧ್ಯಕ್ಷ ಬಿ.ಸುಬ್ರಹ್ಮಣ್ಯ ರಾವ್, ಕೋಶಾಧಿಕಾರಿ ಸುಧಾಕರ ರಾವ್ ಪೇಜಾವರ, ಸದಸ್ಯ ಪ್ರಭಾಕರ ಇದ್ದರು.

ಸುದ್ದಿ ಸಿಂಚನ

ಸ್ಕೂಟರ್‌ಗೆ ಕ್ರೇನ್ ಡಿಕ್ಕಿ: ಸವಾರ ಸ್ಥಳದಲ್ಲೇ ಸಾವು

ಬೆಳ್ತಂಗಡಿ: ಕ್ರೇನ್ ದ್ವಿಚಕ್ರ ವಾಹನದ ಹಿಂಭಾಗಕ್ಕೆ ಡಿಕ್ಕಿ ಹೊಡೆದ ಪರಿಣಾಮ ಸ್ಕೂಟರ್‌ಸವಾರ ಸ್ಥಳದಲ್ಲೇ ದುರ್ಮರಣ ಹೊಂದಿದ ಘಟನೆ ಮಂಗಳವಾರ ಬೆಳ್ತಂಗಡಿ ತಾಲೂಕಿನ ಬೆಳಾಲು ಪೇಟೆಯಲ್ಲಿ ಸಂಭವಿಸಿದೆ. ಬೆಳ್ತಂಗಡಿ ತಾಲೂಕಿನ ಬಳಂಜ ಗ್ರಾಮದ ಬಳಂಜ ನಿವಾಸಿ ಜಯ ಮೇಸ್ತ್ರಿ(49) ಮೃತಪಟ್ಟರಾಗಿದ್ದಾರೆ. ಇವರು ಬೆಳಾಲು ಗ್ರಾಮದ ಬಳಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದು ರಬ್ಬರ್‌ಟ್ಯಾಪಿಂಗ್ ಕೆಲಸ ಮಾಡುತ್ತಿದ್ದರು. ಬೆಳ್ತಂಗಡಿ ಸಂಚಾರಿ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್‌ಕಿಶೋರ್‌ಕುಮಾರ್‌ಪಿ ತಂಡ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಮೃತದೇಹವನ್ನು ಬೆಳ್ತಂಗಡಿ ತಾಲೂಕು ಸರ್ಕಾರಿ ಆಸ್ಪತ್ರೆಗೆ ಸಾಗಿಸಲಾಗಿದೆ. ಸಂಚಾರಿ ಪೊಲೀಸ್ ಠಾಣೆಯಲ್ಲಿ ಅಪಘಾತ ಪ್ರಕರಣ ದಾಖಲಾಗಿದೆ.

ಮನೆಯಲ್ಲಿ ನೇಣು ಬಿಗಿದು ಯುವಕ ಆತ್ಮಹತ್ಯೆ

ಉಳ್ಳಾಲ: ಅವಿವಾಹಿತ ಯುವಕ ಮನೆಯಲ್ಲಿ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿರುವ ದುಃಖದ ಘಟನೆ ಉಳ್ಳಾಲದ ಸುಂದರಿಬಾಗ್‌ನಲ್ಲಿ ನಡೆದಿದೆ. ಶಿಲ್ಪಾ ವುಡ್ ಇಂಡಸ್ಟ್ರೀಸ್ ಮಾಲಕರಾದ ಸುರೇಶ್ ಅವರ ಪುತ್ರ ಯಜ್ಞೇಶ್ ಉಳ್ಳಾಲ (30) ಆತ್ಮಹತ್ಯೆ ಮಾಡಿಕೊಂಡವರು. ಅವಿವಾಹಿತರಾಗಿದ್ದ ಯಜ್ಞೇಶ್ ಅವರು ನಿನ್ನೆ ಮನೆಯಲ್ಲಿ ತಮ್ಮ ಕೋಣೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಫ್ಯಾಷನ್ ಹಾಗೂ ಸಿನಿಮಾ ಮೇಕಪ್ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದರು.



ಜಲ ಶೋಧಕ ಜನಾರ್ದನ್ ಶೆಟ್ಟಿಗಾರ್ ನಿಧನ

ಉಪ್ಪಿನಂಗಡಿ: ಇಲ್ಲಿನ ನಟ್ಟಿಬೈಲ್ ನಿವಾಸಿ ಅಂತರ್ಜಲ ಶೋಧಕ ಜನಾರ್ಧನ್ ಶೆಟ್ಟಿಗಾರ್ (52) ಅಲ್ಪ ಕಾಲದ ಅನಾರೋಗ್ಯದಿಂದ ಮಂಗಳವಾರದಂದು ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಬಾವಿ, ಕೊಳವೆ ಬಾವಿ ಕೊರೆಯುವ ಸಂಬಂಧ ನಿಖರವಾಗಿ ಅಂತರ್ಜಲದ ನೆಲೆಯನ್ನು ತಿಳಿಸುವ ಮೂಲಕ ಜನನುರಾಗಿಯಾಗಿದ್ದ ಅವರು ಅವಿವಾಹಿತರಾಗಿದ್ದರು. ತಾಯಿ, ಓರ್ವ ಸಹೋದರಿ ಮತ್ತು ಸಹೋದರರನ್ನು ಅಗಲಿದ್ದಾರೆ.



ಹಿರಿಯ ಕೃಷಿಕೆ ವನಜ ಪೂಜಾರ್ತಿ ನಿಧನ

ಮೂಲ್ಕಿ: ಮೂಲ್ಕಿ ಸಮೀಪದ ಅತಿಕಾರಿಬೆಟ್ಟು ಗ್ರಾಮದ ಕಕ್ವ ನಿವಾಸಿ ಹಿರಿಯ ಕೃಷಿಕೆ ವನಜ ಪೂಜಾರ್ತಿ (83) ಅನಾರೋಗ್ಯದಿಂದ ಮಂಗಳವಾರ ಸ್ವಗೃಹದಲ್ಲಿ ನಿಧನರಾದರು. ಅವರು ಅತಿಕಾರಿಬೆಟ್ಟು ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಮನೋಹರ ಕೋಟ್ಯಾನ್ ಸಹಿತ ಐವರು ಪುತ್ರರು ಹಾಗೂ ಓರ್ವ ಪುತ್ರಿಯನ್ನು ಅಗಲಿದ್ದಾರೆ. ಹಿರಿಯ ಕೃಷಿಕೆಯಾಗಿ, ಹೈನುಗಾರರಾಗಿ, ಶ್ರಮಜೀವಿಯಾಗಿದ್ದು, ಪರೋಪಕಾರಿಯಾಗಿ ಜನಾನುರಾಗಿಯಾಗಿದ್ದರು.



ಕಾರ್ಕಳ-ಪಡುಬಿದ್ರಿ ಹೆದ್ದಾರಿ: ತಿರುವುಗಳಲ್ಲಿ ಅಪಘಾತ

ಅವೈಜ್ಞಾನಿಕ ತಿರುವುಗಳಲ್ಲಿ ದುರಂತ | ಪರಪ್ಪಾಡಿಯಿಂದ ಬಪ್ಪಗೋಳಿ ತನಕ ಸಮಸ್ಯೆ | ನಿಯಮ ಉಲ್ಲಂಘನೆ ವಿರುದ್ಧ ಕಾರ್ಯಾಚರಣೆ

• **ವಿಶೇಷ ವರದಿ**

ಕನ್ನಡಪ್ರಭವಾರ್ತೆ ಕಾರ್ಕಳ

ಕಾರ್ಕಳ ಪಡುಬಿದ್ರಿ ರಾಜ್ಯ ಹೆದ್ದಾರಿಯ ನಿಟ್ಟೆ ಪರಪ್ಪಾಡಿಯಿಂದ ಬಪ್ಪಗೋಳಿ ಕ್ರಾಸ್‌ವರೆಗಿನ ಭಾಗ ಇತ್ತೀಚೆಗೆ ಸರಣಿ ಅಪಘಾತಗಳಿಗೆ ಸಾಕ್ಷಿಯಾಗುತ್ತಿದೆ.

ಸಾರ್ವಜನಿಕರಲ್ಲಿ ಭೀತಿ ವಾತಾವರಣ ನಿರ್ಮಾಣವಾಗಿದೆ. ರಸ್ತೆ ಮೇಲ್ಮೈ ಸುಸ್ಥಿತಿಯಲ್ಲಿದ್ದರೂ ಸಹ, ಅವೈಜ್ಞಾನಿಕ ತಿರುವುಗಳು, ಅತೀವೇಗದ ಚಾಲನೆ ಈ ಮಾರ್ಗವನ್ನು ಅಪಾಯದ ಗೂಡಾಗಿ ಪರಿವರ್ತಿಸಿವೆ.

ಇತ್ತೀಚೆಗೆ ಸಂಭವಿಸಿದ ದುರಂತ ಘಟನೆಯೊಂದು ಈ ಭಾಗದ ಅಪಾಯವನ್ನು ಮತ್ತಷ್ಟು ಬೆಳಕಿಗೆ ತಂದಿದೆ. ಏ.24ರಂದು ಸಿಇಟಿ ಪರೀಕ್ಷೆ ಮುಗಿಸಿ ತಂದೆ ನವೀನ್‌ಚಂದ್ರ ಮೂಲ್ಯ ಅವರೊಂದಿಗೆ ಬೈಕಿನಲ್ಲಿ ಮನೆಗೆ ತೆರಳುತ್ತಿದ್ದ ವಿದ್ಯಾರ್ಥಿನಿ ಪ್ರೇರಣಾ ಅವರಿಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ತಂದೆ ಸ್ಥಳದಲ್ಲೇ ಮೃತಪಟ್ಟರೆ, ಗಂಭೀರವಾಗಿ ಗಾಯಗೊಂಡಿದ್ದ ಪ್ರೇರಣಾ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದರು.

ಸ್ಥಳೀಯರ ಪ್ರಕಾರ, ಕಳೆದ ಎರಡು ತಿಂಗಳಲ್ಲಿ ಈ ಭಾಗದಲ್ಲಿ 10ಕ್ಕೂ ಅಧಿಕ ಸಣ್ಣ ಹಾಗೂ ಗಂಭೀರ ಅಪಘಾತಗಳು ಸಂಭವಿಸಿವೆ. ವಿದ್ಯಾರ್ಥಿಗಳ ಅತೀವೇಗದ ಚಾಲನೆ ಪ್ರಮುಖ ಕಾರಣವೆಂದು ಕೆಲವರು ಹೇಳಿದರೆ, ಪೊಲೀಸ್ ಮೂಲಗಳ ಪ್ರಕಾರ ತಿರುವಿನಲ್ಲಿದ್ದ ಅಡ್ಡಿ ತಪ್ಪಿಸಲು ಕಾರು ಚಾಲಕ ಹಠಾತ್ ಬ್ರೇಕ್ ಹಾಕಿದ ಪರಿಣಾಮ ನಿಯಂತ್ರಣ ತಪ್ಪಿ ಅಪಘಾತ ಸಂಭವಿಸಿದೆ. ಈ ಎರಡೂ ಅಂಶಗಳು ಸೇರಿ ಅಪಾಯದ ಪ್ರಮಾಣ ಹೆಚ್ಚಿಸುತ್ತಿವೆ.

ಕಾರ್ಕಳ ಹೆಬ್ರಿ ಹಾಗೂ ಘಟ್ಟ ಪ್ರದೇಶಗಳ ತಪ್ಪಲು ಕರಾವಳಿ ಭಾಗವಾಗಿರುವುದರಿಂದ ಇಲ್ಲಿ ತಿರುವುಗಳು ಹೆಚ್ಚಾಗಿದ್ದು, ವಾಹನ ಸವಾರರ ಅಜಾಗ್ರತೆಯಿಂದ ಅಪಘಾತಗಳು ಸಂಭವಿಸುತ್ತವೆ. ರಾಜ್ಯ ಹೆದ್ದಾರಿಗಳಲ್ಲಿ ವೇಗಮಿತಿ 60 ಕಿ.ಮೀ.ಗೆ ನಿಗದಿಯಾಗಿದ್ದರೂ, ಹಲವರು ನಿಯಮ ಉಲ್ಲಂಘಿಸಿ ವೇಗವಾಗಿ ಸಂಚರಿಸುತ್ತಿದ್ದಾರೆ. ಜೊತೆಗೆ ವಾಹನ ಚಲಾಯಿಸುವಾಗ ಮೊಬೈಲ್ ಬಳಕೆ, ಸೀಟ್ ಬೆಲ್ಟ್ ಮತ್ತು ಹೆಲ್ಮೆಟ್ ಧರಿಸದಿರುವುದು ಅಪಘಾತಗಳ ತೀವ್ರತೆಯನ್ನು ಹೆಚ್ಚಿಸುತ್ತಿದೆ. ಈ ನಿಟ್ಟಿನಲ್ಲಿ ಪೊಲೀಸ್ ಇಲಾಖೆ ಕಠಿಣ ಕ್ರಮಕ್ಕೆ ಮುಂದಾಗಿದೆ.

ಈ ಪರಿಸ್ಥಿತಿ ಗಂಭೀರವಾಗಿ ಪರಿಗಣಿಸಿರುವ ಪೊಲೀಸ್ ಇಲಾಖೆ, ಅತೀವೇಗದ ವಾಹನಗಳ ವಿರುದ್ಧ ವಿಶೇಷ ಕಾರ್ಯಾಚರಣೆ ಆರಂಭಿಸಲು ತೀರ್ಮಾನಿಸಿದೆ.

> ರಾಜ್ಯ ಹೆದ್ದಾರಿಗಳಲ್ಲಿ ವೇಗ ಮಿತಿ 60 ಕಿ.ಮೀ.ಗೆ ನಿಗದಿಪಡಿಸಲಾಗಿದೆ. ಕಾರ್ಕಳ-ಹೆಬ್ರಿ ಹಾಗೂ ಘಟ್ಟ ಪ್ರದೇಶಗಳ ತಪ್ಪಲು ಕರಾವಳಿ ಭಾಗವಾಗಿರುವುದರಿಂದ ಇಲ್ಲಿ ತಿರುವುಗಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತವೆ. ಈಗಾಗಲೇ ಒಂದೇ ಸ್ಥಳದಲ್ಲಿ ಮೂರು ಅಥವಾ ಅದಕ್ಕಿಂತ ಹೆಚ್ಚು ಅಪಘಾತಗಳಲ್ಲಿ ಮೂರಕ್ಕೂ ಹೆಚ್ಚು ಜನ ಮೃತಪಟ್ಟಿರುವ ಪ್ರದೇಶಗಳನ್ನು ಬ್ಲಾಕ್ ಸ್ಪಾಟ್ ಎಂದು ಗುರುತಿಸಲಾಗುತ್ತಿದೆ. ಇಂತಹ ಅಪಾಯಕರ ಸ್ಥಳಗಳ ಕುರಿತು ಸರ್ಕಾರಕ್ಕೆ ವರದಿ ಸಲ್ಲಿಸಲಾಗುತ್ತಿದ್ದು, ಅಪಾಯಕಾರಿ ತಿರುವುಗಳನ್ನು ಸರಿಪಡಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತದೆ.
>
> • **ಸೋಮಶೇಖರ್** ಪಿಡಬ್ಲ್ಯುಡಿ ಇಂಜಿನಿಯರ್‌ಕಾರ್ಕಳ



ಗ್ರಾಮಾಂತರ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಪ್ರಸನ್ನ ಅವರ ಪ್ರಕಾರ, ಸುಮಾರು 20 ಕಡೆಗಳಲ್ಲಿ ರಬ್ಬರ್‌ಸ್ಪೀಡ್ ಬ್ರೇಕರ್‌ಗಳನ್ನು ಅಳವಡಿಸುವ ಯೋಜನೆ ರೂಪಿಸಲಾಗಿದೆ. ಇದರ ಮೂಲಕ ವೇಗ ನಿಯಂತ್ರಣಕ್ಕೆ ತರಲು ಉದ್ದೇಶಿಸಲಾಗಿದೆ.

ಅದರಲ್ಲೂ ದೂಪದ ಕಟ್ಟೆ ಭಾಗದಲ್ಲಿ ವೇಗವಾಗಿ ಚಲಿಸುವ ವಾಹನಗಳ ಮೇಲೆ ಕ್ಯಾಮರಾ ನಿಗ ವಹಿಸುತ್ತಿದೆ. ಲೋಕೋಪಯೋಗಿ ಇಲಾಖೆಗೆ ಸೂಚನೆ ಸುಪ್ರೀಂ ಕೋರ್ಟ್ ಮಾರ್ಗಸೂಚಿಯಂತೆ, ಪ್ರತಿಯೊಂದು ಅಪಘಾತದ ನಂತರ ಪೊಲೀಸ್ ಇಲಾಖೆ ಆರ್‌ಟಿಒ, ಲೋಕೋಪಯೋಗಿ ಇಲಾಖೆ ಹಾಗೂ ಹೆದ್ದಾರಿ ಪ್ರಾಧಿಕಾರಕ್ಕೆ ವರದಿ ನೀಡುತ್ತದೆ.


ಈ ವರದಿಗಳ ಆಧಾರದ ಮೇಲೆ ರಸ್ತೆ ವಿನ್ಯಾಸದ ದೋಷಗಳನ್ನು ಮರುಪರಿಶೀಲನೆ ಮಾಡುವ ಕಾರ್ಯವೂ ನಡೆಯಲಿದೆ.

ಮುಂದಿನ ದಿನಗಳಲ್ಲಿ ತುರ್ತು ಚಿಕಿತ್ಸೆ ವ್ಯವಸ್ಥೆ ಮತ್ತು ಅಪಘಾತ ವರದಿ ಪ್ರಕ್ರಿಯೆಯಲ್ಲಿ ಆಸ್ಪತ್ರೆಗಳನ್ನೂ ಸೇರಿಸುವ ಚಿಂತನೆ ನಡೆದಿದೆ.

ಜನಜಾಗೃತಿ ಅಗತ್ಯ: ರಸ್ತೆ ಉತ್ತಮವಾಗಿದ್ದರೂ ಕೆಲವರ ಅತೀವೇಗದ ಚಾಲನೆ ಇನ್ನೊಬ್ಬರ ಜೀವಕ್ಕೆ ಮುಳುವಾಗುತ್ತಿದೆ. ಅತೀವೇಗದ ಚಾಲನೆ ತಡೆ, ಸುರಕ್ಷತಾ ನಿಯಮಗಳ ಪಾಲನೆ ಹಾಗೂ ರಸ್ತೆ ವಿನ್ಯಾಸ ದೋಷಗಳ ಸರಿಪಡಿಕೆ ಈ ಮೂರು ಅಂಶಗಳ ಮೇಲೆ ಸಮಾನ ಒತ್ತು ನೀಡಿದಾಗ ಮಾತ್ರ ಈ ಮಾರ್ಗದಲ್ಲಿ ಅಪಘಾತಗಳನ್ನು ಕಡಿಮೆ ಮಾಡಬಹುದು.

ವ್ಯಕ್ತಿ ಪತ್ತೆಗೆ ಮನವಿ

ಮಂಗಳೂರು: ಶಕ್ತಿನಗರ ಕ್ಲಾಸಿಕ್ ಪರ್ಲ್ ಅಪಾರ್ಟ್‌ಮೆಂಟ್‌ನಲ್ಲಿ ವಾಸವಿದ್ದ ಸುನೀಲ್ ಶಂಕರ್‌ಬೇಕಲ್ (48) ಎಂಬವರಿಗೆ ದ್ವಿಚಕ್ರ ವಾಹನದಲ್ಲಿ ಹೋಗುವಾಗ ಅಪಘಾತವಾಗಿದ್ದು, ಸರ್ಕಾರಿ ವೆನ್‌ಲಾಕ್ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿ ಚಿಕಿತ್ಸೆ ಪಡೆದು, ಏ.2ರಂದು ಆಸ್ಪತ್ರೆಯಿಂದ ಮನೆಗೆ ಬಂದವರು ಅಲ್ಲಿಂದ ನೇರವಾಗಿ ಯಾರಿಗೂ ತಿಳಿಸದೇ ಮನೆ ಬಿಟ್ಟು ಹೋಗಿರುತ್ತಾರೆ. ಈ ಬಗ್ಗೆ ಮಂಗಳೂರು ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕಾಣೆಯಾದವರ ಚಹರೆ: ಎತ್ತರ 5.9 ಅಡಿ, ಗೋಧಿ ಮೈಬಣ್ಣ, ಕಪ್ಪು ಕೂದಲು, ಸಾಧಾರಣ ಶರೀರ, ಕನ್ನಡ, ಹಿಂದಿ, ಇಂಗ್ಲಿಷ್, ತುಳು, ತಮಿಳು, ತೆಲುಗು ಮಾತನಾಡುತ್ತಾರೆ. ಕಾಣೆಯಾದವರ ಬಗ್ಗೆ ಮಾಹಿತಿ ಪತ್ತೆಯಾದಲ್ಲಿ ಮಂಗಳೂರು ಗ್ರಾಮಾಂತರ ಪೊಲೀಸ್ ಠಾಣೆ ಸಂಪರ್ಕಿಸುವಂತೆ ಠಾಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಗುಡ್ಡದಲ್ಲಿ ಕೊಳೆತ ಮೃತದೇಹ ಪತ್ತೆ

ಬೆಳ್ತಂಗಡಿ: ಮರಕ್ಕೆ ನೇಣು ಬಿಗಿದುಕೊಂಡ ಸ್ಥಿತಿಯಲ್ಲಿ ವ್ಯಕ್ತಿಯೊಬ್ಬರ ಶವ ಕೊಳೆತ ಸ್ಥಿತಿಯಲ್ಲಿ ಲಾಯಿಲ ಗ್ರಾಮದ ಸವಣಾಲು ಕರ್ನೊಡಿ ರಸ್ತೆಯ ನಿಡ್ಯಾರ ಗುಡ್ಡದಲ್ಲಿ ಮಂಗಳವಾರ ಸಂಜೆ ಪತ್ತೆಯಾಗಿದೆ. ಸ್ಥಳೀಯ ನಿವಾಸಿಗಳಿಗೆ ದುರ್ವಾಸನೆ ಬಂದಿದ್ದರಿಂದ ಗುಡ್ಡಕ್ಕೆ ಹೋಗಿ ಪರಿಶೀಲಿಸಿದಾಗ ಶವ ಪತ್ತೆಯಾಗಿದೆ. ಈ ಬಗ್ಗೆ ಬೆಳ್ತಂಗಡಿ ಪೊಲೀಸರಿಗೆ ಮಾಹಿತಿ ನೀಡಿದ್ದು, ಪೊಲೀಸರು ಮತ್ತು ಸೋಕೋ ತಂಡ ಸ್ಥಳದಲ್ಲಿ ಪರಿಶೀಲನೆ ನಡೆಸಿದ್ದಾರೆ. ಮೃತಪಟ್ಟವರು ಸುಮಾರು 45 ರಿಂದ 50 ವರ್ಷ ವಯಸ್ಸಿನ ವ್ಯಕ್ತಿಯಾಗಿರಬಹುದು ಎಂದು ಸಂಶಯಿಸಲಾಗಿದೆ.

ಬೀದಿ ಬದಿ ವ್ಯಾಪಾರಸ್ಥರಿಗೆ ಸಾಲ ಸೌಲಭ್ಯ ಅರಿವು ಮೂಡಿಸಿ: ಡಿಸಿ

ಮಂಗಳೂರು: ಜಿಲ್ಲಾ ಕೌಶಲ್ಯ ಮಿಷನ್ ಸಭೆಯಲ್ಲಿ ಜಿಲ್ಲಾಧಿಕಾರಿ ಸೂಚನೆ | ಸಾಲ ಸೌಲಭ್ಯ ಗುರಿ ನಿಗದಿ

• **ಕನ್ನಡಪ್ರಭ ವಾರ್ತೆ** ಮಂಗಳೂರು

ಬೀದಿ ಬದಿ ವ್ಯಾಪಾರಸ್ಥರಿಗೆ ಸಾಲ ಸೌಲಭ್ಯದ ಅರಿವು ಮೂಡಿಸುವಂತೆ, ಕೌಶಲ್ಯ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳು ಕ್ರಮವಹಿಸಬೇಕು ಎಂದು ಜಿಲ್ಲಾಧಿಕಾರಿ ದರ್ಶನ್ ಹೆಚ್.ವಿ. ಸೂಚಿಸಿದ್ದಾರೆ.

ಅವರು ಮಂಗಳವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಜಿಲ್ಲಾ ಕೌಶಲ್ಯ ಮಿಷನ್ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಯುವಕರಿಗೆ ಕೌಶಲ್ಯಾಭಿವೃದ್ಧಿ ತರಬೇತಿ ನೀಡುವುದರಿಂದ ಸ್ವಯಂ ಉದ್ಯೋಗ ಕಲ್ಪಿಸಿಕೊಳ್ಳಲು ಸಹಾಯವಾಗುತ್ತದೆ. ದೇಶದ ಯುವಜನತೆಯನ್ನು ಉದ್ಯೋಗ-ಸಂಬಂಧಿತ ತರಬೇತಿಯಮೂಲಕಸಬಲೀಕರಣಗೊಳಿಸಬೇಕು ಎಂದು ಅವರು ಹೇಳಿದರು. ಪಿಎಮ್ ಸ್ವನಿಧಿ ಮತ್ತು ನಿಪುಣ್ ಯೋಜನೆ ಮಹತ್ವಾಕಾಂಕ್ಷೆ ಯೋಜನೆಯಾಗಿದ್ದು, ಸಣ್ಣ ವ್ಯಾಪಾರಿಗಳ ಮತ್ತು ಯುವ ಜನರ ಸಬಲೀಕರಣಕ್ಕೆ ಸಹಾಯ ಮಾಡುತ್ತದೆ ಎಂದರು.

ಪ್ರಧಾನಮಂತ್ರಿ ಆತ್ಮನಿರ್ಭರ್‌ನಿಧಿ (ಪಿಎಮ್ ಸ್ವನಿಧಿ) ಯೋಜನೆಯು ಜೂನ್2020ರಲ್ಲಿಪ್ರಾರಂಭಿಸಲ್ಪಟ್ಟಿದ್ದು, ಈ ಯೋಜನೆಯಡಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿಯ ಬೀದಿ ಬದಿ ವ್ಯಾಪಾರಸ್ಥರಿಗೆ ಸಾಲ ಸೌಲಭ್ಯವನ್ನು ಕಲ್ಪಿಸುವ ನಿಟ್ಟಿನಲ್ಲಿ ಈ ಯೋಜನೆಯ ಕುರಿತು ಫಲಾನುಭವಿಗಳಿಗೆ ಅರಿವು ಮೂಡಿಸಬೇಕು ಎಂದು ಅವರು ಹೇಳಿದರು.



ಪ್ರಸ್ತುತ ಕೇಂದ್ರ ಸರಕಾರದಿಂದ ಪಿಎಮ್ ಸ್ವನಿಧಿ ಯೋಜನೆಯನ್ನು ಪುನರ್‌ರಚಿಸಿ ಮಾರ್ಚ್ 2030 ರವರೆಗೆ ವಿಸ್ತರಿಸಿ, ಅನುಮೋದಿಸಲಾಗಿರುತ್ತದೆ. ಆರ್ಥಿಕ ಸೇರ್ಪಡೆ ಹೆಚ್ಚಿಸುವುದು, ಡಿಜಿಟಲ್ ವಹಿವಾಟು ಹೆಚ್ಚಿಸಲು ಉತ್ತೇಜಿಸುವುದು, ಸಾಮರ್ಥ್ಯ ಅಭಿವೃದ್ಧಿ ಮತ್ತು ಬೀದಿ ಬದಿ ವ್ಯಾಪಾರಿಗಳು ಮತ್ತು ಅವರ ಅವಲಂಬಿತ ಕುಟುಂಬ ಸದಸ್ಯರಿಗೆ ಸಾಮಾಜಿಕ ಭದ್ರತಾ ಯೋಜನೆಗಳ ಸೌಲಭ್ಯ ಕಲ್ಪಿಸುವುದು ಈ ಯೋಜನೆಯ ಪ್ರಮುಖ ಉದ್ದೇಶಗಳಾಗಿರುತ್ತದೆ. ಪಿ.ಎಮ್ ಸ್ವನಿಧಿ ಯೋಜನೆಯನ್ನು ಹೆಚ್ಚಿನ ಪ್ರದೇಶಗಳಿಗೆ ತಲುಪಿಸುವ ನಿಟ್ಟಿನಲ್ಲಿ, ಜನಗಣತಿ ಪಟ್ಟಣಗಳು, ಶಾಸನಬದ್ಧ ಪಟ್ಟಣಗಳು ಮತ್ತು ಅರೆ ನಗರ ಪ್ರದೇಶಗಳು ಇತ್ಯಾದಿಗಳನ್ನು ಹಂತ-ಹಂತವಾಗಿ ಸೇರ್ಪಡಿಸಿಕೊಂಡು ವಿಸ್ತರಿಸಲು ಉದ್ದೇಶಿಸಲಾಗಿರುತ್ತದೆ.

ಅದರಂತೆ ಪಿ.ಎಮ್ ಸ್ವನಿಧಿ ಯೋಜನೆಯ ಮೊದಲನೆಯ, ಎರಡನೇಯ ಮತ್ತು ಮೂರನೆಯ ಹಂತದ ಕಿರು ಸಾಲ ಸೌಲಭ್ಯ ಒದಗಿಸಲು ಪರಿಷ್ಕೃತ ಗುರಿಯನ್ನು ನಿಗದಿಪಡಿಸಲಾಗಿದ್ದು, ನಿಗದಿತ ಮಾರ್ಗಸೂಚಿಗಳ ಅನುಸಾರ ಅನುಷ್ಠಾನಗೊಳಿಸಬೇಕಾಗಿರುತ್ತದೆ ಎಂದು ಅಧಿಕಾರಿಗಳು ಸಭೆಗೆ ತಿಳಿಸಿದರು. ದ.ಕ. ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಜಯಲಕ್ಷ್ಮಿ ರಾಯಕೋಡ, ಜಿಲ್ಲಾ ಕೌಶಲಾಭಿವೃದ್ಧಿ ಅಧಿಕಾರಿ ಪ್ರದೀಪ್ ಡಿಸೋಜ, ವಿವಿಧ ಇಲಾಖಾಧಿಕಾರಿಗಳು ಇದ್ದರು.

ನಿರ್ವಹಣಾ ಕಾಮಗಾರಿ: ಇಂದು ಕೊಣಾಜೆ ಪರಿಸರ ವಿದ್ಯುತ್ ನಿಲುಗಡೆ

• **ಕನ್ನಡಪ್ರಭ ವಾರ್ತೆ** ಮಂಗಳೂರು

110/33/11ಕೆವಿ ಕೊಣಾಜೆ ಉಪಕೇಂದ್ರದಿಂದ ಹೊರಡುವ 11ಕೆವಿ ಪಜೀರ್ ಮತ್ತು 11ಕೆವಿ ಬೋಳಿಯಾರ್, 11ಕೆವಿ ಉಳ್ಳಾಲ ಎಕ್ಸ್‌ಪ್ರೆಸ್, 11ಕೆವಿ ಬೆಳ್ಮ ಫೀಡರ್‌ಗಳಲ್ಲಿ ಹಾಗೂ 33/11ಕೆವಿ ತೊಕ್ಕೊಟ್ಟು ಉಪಕೇಂದ್ರದಿಂದ ಹೊರಡುವ 11ಕೆವಿ ಕುಂಪಲ, 11ಕೆವಿ ಕುತ್ತಾರ್, 11ಕೆವಿ ಸೋಮೇಶ್ವರ ಫೀಡರ್ ಹಾಗೂ 33/11ಕೆವಿ ಕೋಟೆಕಾರ್ ಉಪಕೇಂದ್ರದಿಂದ ಹೊರಡುವ 11ಕೆವಿ ತಲಪಾಡಿ, 11ಕೆವಿ ಕೊಂಡಾಣ ಮತ್ತು 11ಕೆವಿ ಕೋಟೆಕಾರ್ ಫೀಡರ್ ಗಳಲ್ಲಿ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಮೇ 6ರಂದು ಬೆಳಗ್ಗೆ 10ರಿಂದ ಸಂಜೆ 5ರ ವರೆಗೆ ಅರ್ಕಾನ, ಸಾಂಬಾರ್ ತೋಟ, ಕಾಯರ್ ಗೋಳಿ, ಮಿತ್ತಕೋಡಿ, ಕಂಬ್ಲಪದವು, ಇನ್ಫೋಸಿಸ್, ಕನೀರ್ ತೋಟ, ಬಗಂಬಿಲ, ಚೇತನನಗರ, ಕೊಲ್ಯ, ಶಾಂತಿಭಾಗ್, ಕುಂಪಲ, ಮೂರುಕಟ್ಟೆ, ಚಿತ್ರಾಂಜಲಿ ನಗರ, ಆಶ್ರಯ ಕಾಲೊನಿ, ಕುಜುಮಗುಡ್ಡೆ, ಬಾಬುಕಟ್ಟೆ, ಹಿರಾನಗರ, ನಿತ್ಯಾಧರ ನಗರ, ಪ್ರಕಾಶ್ ನಗರ, ಪಂಡಿತ್ ಹೌಸ್, ಶಿವಾಜಿ ನಗರ, ಮುಂಡೋಳಿ, ಸೇವಂತಿಗುಡ್ಡೆ, ಸೇವಂತಿಗುತ್ತು, ಗಾಂಡಿ, ವಿಜೇತನಗರ, ತಾರಿಪಡ್ಪು, ದಾರಂದಬಾಗಿಲು, ಹೊಸಗದ್ದೆ, ಪಿಲಾರ್, ಪಿಲಾರ್ ಶಾಲೆ, ಅಂಬಿಕಾರೋಡ್, ಸರಸ್ವತಿ ಕಾಲನಿ, ದ್ವಾರಕಾನಗರ, ಅಬ್ಬಂಜರ, ಅನಿಲ್ ಕಂಪೌಂಡ್, 9ಕೆರೆ ಐಟಿಐ, 9ಕೆರೆ ಬನ, ಯು.ಟಿ ಕಂಪೌಂಡ್, ಕೆ.ಹೆಚ್.ಬಿ ಕಾಲೋನಿ, ಮೂಡ ಮನಾಥ ಲೇಔಟ್, ನೆಹರೂನಗರ, ಪ್ರತಾಪ್ ನಗರ, ಶಿವಶಕ್ತಿನಗರ, ಸೋಮೇಶ್ವರ ಟೆಂಪಲ್, ಸುಲ್ತಾನ್ ನಗರ, ತಲಪಾಡಿ, ಟೋಲ್ ಗೇಟ್, ಮೇಲಿನ ತಲಪಾಡಿ, ನಾರ್ಲ, ತಚ್ಚಾಣಿ, ವಿವೇಕನಂದ ನಗರ, ಸಾಂತ್ಯ, ನೆತ್ತಿಲಪದವು, ಜಲ್ಲಿ ಕ್ರಷರ್, ಉಚ್ಚಿಲ, ಪ್ರವಾಸಿ ಬಂಗ್ಲೆ, ಕೆ.ಸಿ ರೋಡ್, ಕೆ.ಸಿ ನಗರ, ಪೂಮಣ್ಣು, ಪಿಲಿಕೂರ್, ಬೈದರೆಪಾಲ್, ಹೊಸನಗರ, ಮಧುಪಾಲ್, ಅಜ್ಜಿನಡ್ಕ, ಮುಲ್ಲುಗುಡ್ಡೆ, ರಬ್ಬರ್ ಫ್ಯಾಕ್ಟರಿ, ಲಕ್ಷ್ಮಿಗುಡ್ಡೆ, ಮೂರುಕಟ್ಟೆ, ಕುಂಪಲ, ಸರಳಾಯ ಕಾಲನಿ, ಹನುಮಾನ್ ನಗರ, ಆಶ್ರಯ ಕಾಲನಿ, ಚೇತನನಗರ, ಅಸೈಗೋಳಿ, ಆರ್.ವಿ ಆರ್ಕೆಡ್, ಶಾಂತಿಭಾಗ್, ಮುಂಡೋಳಿ, ಕೆ.ಹೆಚ್.ಬಿ, ಮೂರುಕಟ್ಟೆ ಬಳಿ, ನಿಸರ್ಗ ಲೇಔಟ್, ವೈದ್ಯನಾಥ ನಗರ, ಕೊಣಾಜೆ, ಕೋಡಿಜಾಲ್, ಪರಂಡೆ, ಅಡ್ಕರೆಪಡ್ಪು, ಕಲ್ಲಿಮಾರ್, ಪುಲ್ಲಿಂಚಾಡಿ, ಅಡ್ಕ, ಕೋಟೆಕಾರ್, ಬೀರಿ, ಮಾಡೂರು, ಕೊಂಡಾಣ, ನಡಾರ್, ಮಡ್ಯಾರ್, ಉಚ್ಚಿಲ, ನಯಪಟ್ನ, ಬೋವಿಶಾಲೆ, ಅಡಂಕುದ್ರು, ಕಲ್ಲಾಪು, ರಾಣಿಪುರ, ತೊಕ್ಕೊಟ್ಟು ಜಂಕ್ಷನ್, ಕಲ್ಲಾಪು ಪಟ್ಲ, ನಾಗನಕಟ್ಟೆ, ಹಿದಾಯತ್ ನಗರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಮೆಸ್ಕಾಂ ತಿಳಿಸಿದೆ.

ಸ್ಕೂಟರ್‌ಗೆ ಗೂಡ್ಸ್ ಟೆಂಪೋ ಡಿಕ್ಕಿ: ಸವಾರ ಗಾಯ

ಮಂಗಳೂರು: ಡಿವೈಡರ್‌ದಾಟಿ ಬಂದ ಗೂಡ್ಸ್ ಟೆಂಪೋವೊಂದು ಸ್ಕೂಟರ್‌ಗೆ ಢಿಕ್ಕಿಯಾಗಿ ಸವಾರ ಗಾಯಗೊಂಡಿರುವ ಘಟನೆ ರಾ.ಹೆ. 73ರ ಕಣ್ಣೂರು ಬಳಿ ಸಂಭವಿಸಿದೆ. ಸ್ಕೂಟರ್‌ಸವಾರ ನಝೀರ್(46) ಗಾಯಗೊಂಡವರು. ನಝೀರ್ ಸ್ಕೂಟರ್‌ನಲ್ಲಿ ಬರುತ್ತಿದ್ದಾಗ, ವಿರುದ್ಧ ದಿಕ್ಕಿನಲ್ಲಿ ಅಂದರೆ ಮಂಗಳೂರು ಕಡೆಯಿಂದ ಬಿ.ಸಿ.ರೋಡ್ ಕಡೆಗೆ ಸಾಗುತ್ತಿದ್ದ ಹೊಸ ಗೂಡ್ಸ್ ಟೆಂಪೋ ರಸ್ತೆಯ ಡಿವೈಡರ್‌ದಾಟಿ ಸ್ಕೂಟರ್‌ಗೆ ಡಿಕ್ಕಿಯಾಗಿದೆ.. ಘಟನೆಯಲ್ಲಿ ನಝೀರ್‌ಅವರ ತಲೆ, ಎಡ ಕಾಲು ಮತ್ತು ಮುಖಕ್ಕೆ ರಕ್ತ ಗಾಯವಾಗಿದ್ದು, ಆಸ್ಪತ್ರೆಗೆ ದಾಖಲಾಗಿದ್ದಾರೆ.

ಮಹಿಳೆಯ ಕೊಲೆ ಪ್ರಕಣ: ತಲೆಮರೆಸಿದ್ದ ಆರೋಪಿ ಸೆರೆ

ಮಂಗಳೂರು: ಮಹಿಳೆಯ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ತಲೆಮರೆಸಿಕೊಂಡಿದ್ದ ಆರೋಪಿಯನ್ನು ಸುರತ್ಕಲ್ ಪೊಲೀಸರು ಬಂಧಿಸಿದ್ದಾರೆ.2014ರ ಫೆ.8ರಂದು ಕುಳಾಯಿ ಹೊಸಬೆಟ್ಟುವಿನ ಕೋರ್ದಬ್ಬು 'ಕಲ'ದ ಬಳಿಯ ನಿವಾಸಿ ಸುಮತಿ ಪ್ರಭು ಎಂಬವರನ್ನು ಕುತ್ತಿಗೆಗೆ ಚೂರಿಯಿಂದ ಕೊಯ್ದು ಕೊಲೆ ಮಾಡಿ ಮೈಮೇಲಿದ್ದ ಸುಮಾರು 3,80,000 ರು. ಬೆಲೆ ಬಾಳುವ 192 ಗ್ರಾಂ. ತೂಕದ ಬಂಗಾರದ ಒಡವೆಗಳನ್ನು ದೋಚಿಕೊಂಡು ಹೋದ ಬಗ್ಗೆ ಸುರತ್ಕಲ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಪ್ರಕರಣಕ್ಕೆ ಸಂಬಂಧಿಸಂತೆ ಆರೋಪಿಗಳಾದ ರಾಜಸ್ಥಾನದ ಶಿವರಾಮ್, ರಾಜಸ್ಥಾನದ ಬಹುದ್ದೂರ್‌ಸಿಂಗ್ ಃ ಬಹುದ್ದರ ಃ ಬುಯ್ಯ ಉತ್ತರ ಪ್ರದೇಶದ ಶಹನ್ವಾಜ್ ಃಶಾನು ಎಂಬವರನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿತ್ತು. ಆರೋಪಿತರ ವಿರುದ್ಧ ದೋಷಾರೋಪಣಾ ಪತ್ರವನ್ನು ಸಲ್ಲಿಸಿದಂತೆ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುತ್ತದೆ. ಪ್ರಕರಣದ ಆರೋಪಿತನಾದ ಬಹದ್ದೂರ್‌ಸಿಂಗ್ ಃ ಬಹದ್ದೂರ್ಃ ಬುಯ್ಯ ಕಳೆದ 6 ವರ್ಷಗಳಿಂದ ನ್ಯಾಯಾಲಯಕ್ಕೆ ವಿಚಾರಣೆಗೆ ಹಾಜರಾಗದೇ ತಲೆಮರೆಸಿಕೊಂಡಿದ್ದು, ನ್ಯಾಯಾಲಯ ಆರೋಪಿತನ ಮೇಲೆ ಬಂಧನ ವಾರಂಟ್ ಹೊರಡಿಸಿದ್ದು ಆರೋಪಿ ರಾಜಸ್ಥಾನ ರಾಜ್ಯದ ವಿಳಾಸದಲ್ಲಿ ವಾಸವಿರದೇ ಇದ್ದು, ಬಂಧಿಸಲು ಅನಾನುಕೂಲವಾದ್ದರಿಂದ ಈತನ ಮೇಲೆ ನ್ಯಾಯಾಲಯ ಉದ್ಘೋಷಣೆ ಹೊರಡಿಸಿರುತ್ತದೆ. ಈ ಬಗ್ಗೆ ಆರೋಪಿತನನ್ನು ಪತ್ತೆ ಮಾಡಿ ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸುವಂತೆ ಠಾಣಾ ಹೆಚ್.ಸಿ. ಅಜಿತ್ ಮ್ಯಾಥ್ಯು, ಸಿಪಿಸಿ ಸುನೀಲ್ ಕುಸನಾಳ, ಸಿಪಿಸಿ ಮೋಹನ್ ಎಂಬವರನ್ನು ವಿಶೇಷ ಕರ್ತವ್ಯದಲ್ಲಿ ನೇಮಿಸಲಾಗಿತ್ತು. ಆತನ ಬಗ್ಗೆ ಮಾಹಿತಿ ಪಡೆದು ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲೂಕಿನ ಗುರುಮಾರನಹಳ್ಳಿಗೆ ತೆರಳಿ 2ನೇ ಆರೋಪಿಯಾದ ಬಹುದ್ದೂರ್‌ಸಿಂಗ್ ಃ ಬಹುದ್ದರ ಃ ಬುಯ್ಯ ಎಂಬಾತನನ್ನು ಮೇ 3ರಂದು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ.



ಬೆಂಕಿ ದುರಂತ: ಮರ, ಗಿಡಗಳಿಗೆ ಹಾನಿ

ಮೂಡುಬಿದಿರೆ: ಇರುವೈಲು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೆಂಪುಗುಡ್ಡೆ ಎಂಬಲ್ಲಿ ಶಾರ್ಟ್‌ಸರ್ಕ್ಯೂಟ್‌ನಿಂದಾಗಿ ಬೆಂಕಿ ಕಾಣಿಸಿಕೊಂಡು, ತೋಟದಲ್ಲಿದ್ದ ತೆಂಗು ಹಾಗೂ ವಿವಿಧ ಮರಗಿಡಗಳು ಸುಟ್ಟು ಹೋಗಿವೆ.

ಕಾಳೂರು ರಾಜೇಶ್ ಪೂಜಾರಿ ಎಂಬುವವರಿಗೆ ಸೇರಿದ ಜಾಗದಲ್ಲಿ ಈ ಅವಘಡ ಸಂಭವಿಸಿದ್ದು, ತಕ್ಷಣವೇ ಸ್ಥಳೀಯರು ಅಗ್ನಿಶಾಮಕ ದಳಕ್ಕೆ ಮಾಹಿತಿ ನೀಡಿದರು. ಸ್ಥಳಕ್ಕೆ ಧಾವಿಸಿದ ಅಗ್ನಿಶಾಮಕ ದಳದವರು ಬೆಂಕಿಯನ್ನು ನಂದಿಸುವಲ್ಲಿ ಯಶಸ್ವಿಯಾದರು.

CHANGE OF NAME

I, **RAKSHITHA** (old name), W/o Roshan R Moily, residing at D.No. 2-1-96A1, Benaka, Kudre Kalsanka, Gundibail, Post Kunjibettu, Udupi, have changed my name as **RAKSHITHA ROSHAN MOILY** (new name) for all purposes vide affidavit dated 02-05-2026 sworn before Notary Swarnalatha, Udupi.

IN THE COURT OF PRINCIPAL DISTRICT AND SESSIONS JUDGE, D.K., AT MANGALURU.
O.S. No. 5/2026
IN THE MATTER OF SARAH S. KASIM CHARITABLE TRUST

MR. Mohammad Shahabuddin S/o C. Abdul Wajid, aged about 75 years, Residing at #17-23-1618-1 D' Silva Lane, Falnir Road, Mangaluru, Mangaluru Taluk, D.K. District - 575002. ...Plaintiff
And
NIL ...Defendant

PUBLIC NOTICE TO ALL NON-AGRICULTURAL LAND/OWNED IN THE NAME OF SARAH S. KASIM CHARITABLE TRUST

Notice is hereby given to the members of general public that plaintiff has filed O.S. No.5/2026 under section 92(1)(F) of Civil Procedure Code before the Principal District Judge of Dakshina Kannada at Mangalore, to authorize and permit the Plaintiff to sell the Suit Schedule Property for the benefit of the beneficiary and to permit the plaintiff to execute the sale deed on behalf of SARAH S. KASIM CHARITABLE TRUST in respect of Suit Schedule Property situated at Someshwar Village of Ullal Taluk (Former Mangaluru Taluk), within the limits of Someshwar Municipality and comprised in Survey No.80-34A1(P1), 80-34A1(P2), converted, total extent of 10 cents.

The Plaintiff having been permitted to file this suit in a property relating to SARAH S. KASIM CHARITABLE TRUST and also been permitted to cause the publication of this notice vide orders passed by the Hon'ble Court on 30-04-2026.

Therefore, whoever is interested to take part in the above suit by impleading themselves either personally or through their counsel are hereby required to take notice that the above case has been posted on **05-06-2026** for hearing at **11.00 A.M.** before this Court, failing the matter will be heard and decided exparte.

Given under my hand and seal of the Court on this 2nd day of May 2026.

(By order of the court)
Sd/- **Chief Ministerial Officer**
Principal District and Sessions Judge, D.K. Mangalore.
Sd/- **Sarfraz,** Advocate for Plaintiff

CHANGE OF NAME

I, **BIBI KHATHOON** (Old Name), Wife of Sheikh Ameer Jaan Saheb, Residing at 4-156-A Bismilla Manzil Pakirana Katte Mallar kaup Udupi District, 574106, KARNATAKA, have changed my name to **BIBI KHATOON** (New Name) for all purposes vide affidavit dated 04/05/2026 sworn before Notary ASHEEDULLA UDUPI.

PUBLIC NOTICE

My client Viz Rafiq Marzuk residing at "Vishwas Venus" Flat No.506, Morgangate Kankanady, Mangalore - 575002, intend to purchase schedule property, I hereby Notice is given to the general public that any person or persons having any manner of right, title interest or claim/stake or objection including litigation/arbitration of whatsoever nature over the schedule properties may lodge the same in writing duly substantiated by documentary evidence within seven working days from the date of publication hereof to the undersigned, failing which it will be presumed that no person/s, banks, institutions etc., have got any kind of objection or claim or litigation / dispute over the schedule properties.

SCHEDULE DESCRIPTION OF PROPERTIES

Non-agricultural immovable property held on WARG rights situated in Manjanady Village of Ullal Taluk (formerly Mangalore Taluk) and within the registration sub-district of Mangalore Taluk and being comprised in

Sl.No.	R.S. No.	Extent [A-c]	Kissam	Owners name
1.	109(P)	0.20 cents	Converted	Khathija Mahasar and Others

Together with all contents, mamool and easementary rights appurtenant thereto and the right of roadway and is bound by :
Boundaries :
North : Remaining Portion of same Sy.No.
South : Remaining Portion of same Sy.No.
East : Survey Line
West : Approach Road

Sign/- **A.I. KAREEM,** Advocate & Notary
#20-7-435/12, Hamilton Complex, Near State Bank of India, Mangalore - 575001.

Place : Mangalore
Date : 05-05-2026

CHANGE OF NAME

I, **KRITI NAHATA** (old name), W/O SAMBHAV KUMAR BAID, RESIDING ATDOOR NO. 2/4A, 3RD STREET, GANESAN NAGAR, THOOTHUKKUDI, CHIDAMBARANAGAR, TAMILNADU-628008, have changed my name as **KRITHY BAID** (new name) for all purposes vide affidavit dated 05-05-2026 sworn before Notary A. I. Kareem, Mangalore.

PASSPORT LOST

I, **RAJESH**, S/o. Sadananda, residing at Mt 2-134(10), Yashonandan House, Agali Mutt, Behind Canara Bank Mattu, Katpadi, Mattu, Udupi Karnataka- 574105, Karnataka, vide affidavit dated 05-05-2026 sworn before Notary Murahari K., Udupi, hereby say that **I LOST my Indian Passport bearing No. N8951878** while travelling my residence in Mattu on 05-05-2026, could not be traced & is beyond recovery.

CHANGE OF NAME

I, **KARTHIK V** (old name), son of Vasu Poojary, residing at Door No: 8-1094, Sharadha Kalyana Mantapa Road, Paniyadi, Kunjibettu, Udupi Taluk and District 576102, Karnataka, have changed my name as **KARTHIK VASU POOJARY** (new name) for all purposes vide affidavit dated 05-05-2026 sworn before Notary Shekara Bovi, Udupi.

CHANGE OF NAME

SUSHITH KUBANOOR, aged about 36 years, S/o. K.G.Suresh, residing at 2-53(4), Sai leela, Bolluru, Vasudeva Road, Koikude Post, D.K. I say that in my driving licence my name entered as SUSHITH K. instead of SUSHITH KUBANOOR. My correct name is **SUSHITH KUBANOOR**. for all purpose vide affidavit dated 05/05/2026. sworn before Notary by A.I Kareem, Mangalore.

ಹೆಸರು ಬದಲಾವಣೆ

ಉಡುಪಿ ಜಿಲ್ಲೆ, ಕುಂದಾಪುರ ತಾಲೂಕು, ಕುಂಭಾಶಿ ಗ್ರಾಮದಲ್ಲಿ ವಾಸವಾಗಿರುವ, ಮಂಜುನಾಥ ಆಚಾರ್ ಇವರ ಮಗಳು, **ಮಹಿಮಾ ಆಚಾರ್ಯ** ಆದ ನಾನು ಹೇಳುವುದೇನೆಂದರೆ, **ಮಹಿಮಾ** ಮತ್ತು **ಮಹಿಮಾ ಆಚಾರ್ಯ** ಎಂಬ ಎರಡು ಹೆಸರುಗಳು ನನ್ನದೇ ಆಗಿರುತ್ತದೆ ಎಂದು ನೋಟರಿ ಎಚ್. ಉದಯ ಕುಮರ ಶೆಟ್ಟಿ, ಕುಂದಾಪುರ ಇವರ ಮೂಲಕ ಮಾಡಿರುವ ಅಫಿದಾವಿತ್‌ನಲ್ಲಿ ಪ್ರಮಾಣೀಕರಿಸುತ್ತೇನೆ.

ಮಾನ್ಯ 3ನೇ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಉಡುಪಿ.
ಕ್ರಿಮಿನಲ್ ಮಿಸ್ ಕೇಸ್ ನಂಬ್ರ : 71/2026

ಇವರೊಳಗೆ,
ಜ್ಯೋತಿ ...ಅರ್ಜಿದಾರರು
ಮತ್ತು
ಜನನ ಮತ್ತು ಮರಣ ನೊಂದಣಿಯ ಆಯುಕ್ತರು ...ಎದ್ರಿದಾರರು

ನೋಟೀಸು

ಉಡುಪಿ ಜಿಲ್ಲೆ, ಬ್ರಹ್ಮಾವರ ತಾಲೂಕು, ಮಣೂರು ಗ್ರಾಮದ, ಕೋಟತಟ್ಟು ಎಂಬಲ್ಲಿ ವಾಸವಾಗಿರುವ ಅರ್ಜಿದಾರರ ಅಪ್ಪ ಶೇಖರ ಮೈಂದನ್ ಇವರು ದಿನಾಂಕ : 27-05-2014 ರಂದು ಉಡುಪಿ ತಾಲೂಕು, ಮಲ್ಪೆ ಗ್ರಾಮದಲ್ಲಿ ಮೃತಪಟ್ಟಿರುತ್ತಾರೆ. ಇವರ ಮರಣ ದಾಖಲೆಯ ಆದೇಶಕ್ಕಾಗಿ ಮಾನ್ಯ ನ್ಯಾಯಾಲಯದಲ್ಲಿ ಅರ್ಜಿ ದಾಖಲಿಸಲಾಗಿದೆ. ಸದ್ರಿ ಪ್ರಕರಣವು ದಿನಾಂಕ : 22-05-2026 ರಂದು ಪೂರ್ವಾಹ್ನ 11-00 ಗಂಟೆಗೆ ಈ ಮೇಲಿನ ನ್ಯಾಯಾಲಯದಲ್ಲಿ ವಿಚಾರಣೆಗೆ ಇಡಲಾಗಿದೆ. ಸದ್ರಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ಆಕ್ಷೇಪವಿದ್ದಲ್ಲಿ ಸದ್ರಿ ದಿವಸ ಸ್ವತಹ ವ ವಕೀಲರ ಮೂಲಕ ಈ ಮೇಲಿನ ನ್ಯಾಯಾಲಯದಲ್ಲಿ ಹಾಜರಾಗಿ ಆಕ್ಷೇಪವನ್ನು ಸಲ್ಲಿಸಬಹುದು. ಇಲ್ಲವಾದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ಇತ್ಯರ್ಥಗೊಳಿಸಲಾಗುವುದು.

ಈ ದಿನಾಂಕ : 30-04-2026ರಂದು ನೀಡಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೆದಾರರು, 3ನೇ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ. ಉಡುಪಿ.
ಅರ್ಜಿದಾರರ ಪರ ವಕೀಲರು
ಸಹಿ/- ಗಣೇಶ ಜೆ. ಕುಲಾಲ್, ವಕೀಲರು, ಉಡುಪಿ.

CHANGE OF NAME

I, **SHANKAR**, S/o KITTY MOOLYA, R/at 4-115-1 Golikatte Janthra Road Nandalike Village, Nandalike Post Karkala, Taluk, Udupi District-576111 have changed my name as **SHANKARA MOOLYA**, vide affidavit dated 05-05-2026 sworn before notary H Udaya Kumar Shetty, Kundapura.

CHANGE OF NAME

I, **RONALD MICHAEL DCOSTA** (old name), S/o. Janet Mariet Wilma Dcosta, residing at 3-120(1) Kurmbil house Talipady D. K. Dist- 574150, Karnataka, have changed my name as **RONALD DCOSTA** (new name) for all purposes vide affidavit dated 10-03-2026 sworn before Notary Anil Kumar K., Mangalore.

CHANGE OF NAME

I, **RAHUL SHETTY** (old name), S/o Ravindra M Shetty, residing at 2-4-36, "Ravi Nivas", Matada Bettu, Bannanje, Udupi Taluk, Udupi District- 576101, Karnataka, have changed my name as **RAHUL RAVINDRA SHETTY** (new name) for all purposes vide affidavit dated 05-05-2026 sworn before Notary Murahari K., Udupi.

ਪੰਜਾਬ ਨੈਸ਼ਨਲ ਬੈਂਕ ...भरोसे का प्रतीक ! punjab national bank ...the name you can BANK upon !

ಪಂಜಾಬ್ ನ್ಯಾಷನಲ್ ಬ್ಯಾಂಕ್ - ಮಂಗಳೂರು ವೃತ್ತ
ಕ್ಯಾಂಪ್ : ಕ್ಯಾಂಡೆಲ್ ಗಾರ್ಡನ್ ಶಾಖೆ, ಟ್ರೇಡ್ ಸೆಂಟರ್, ಬಂಟ್ಸ್ ಹಾಸ್ಟೆಲ್ ರಸ್ತೆ, ಮಂಗಳೂರು – 575003.
ದೂರವಾಣಿ : 9544331699, ಇ–ಮೇಲ್ ಐಡಿ : comnggad@pnb.bank.in,

ಸ್ಥಳಾವಕಾಶ ಬೇಕಾಗಿದೆ

ಪಂಜಾಬ್ ನ್ಯಾಷನಲ್ ಬ್ಯಾಂಕ್‌ಗೆ ಈ ಕೆಳಗಿನ ಸ್ಥಳಗಳಲ್ಲಿ ಗುತ್ತಿಗೆ / ಬಾಡಿಗೆ ಆಧಾರದ ಮೇಲೆ **ಎಟಿಎಂ ಹೊಂದಿರುವ ಶಾಖೆಯನ್ನು** ತೆರೆಯಲು ಸೂಕ್ತವಾದ ಸಿದ್ಧ–ನಿರ್ಮಿತ ಮತ್ತು ಉತ್ತಮವಾಗಿ ನಿರ್ಮಿಸಲಾದ ಹಾಲ್ ಮಾದರಿಯ ಕಟ್ಟಡದಲ್ಲಿ ಸ್ಥಳಾವಕಾಶದ ಅಗತ್ಯವಿದೆ. ಆವರಣವು ನೆಲ ಮಹಡಿಯಲ್ಲಿರಬೇಕು ಮತ್ತು ಮೊದಲ ಮಹಡಿಯಲ್ಲಿದ್ದರೆ ಲಿಫ್ಟ್ ಸೌಲಭ್ಯ ಲಭ್ಯವಿರಬೇಕು.

ಕ್ರ.ಸಂ.	ಸ್ಥಳ	ಕಾರ್ಪೆಟ್ ಪ್ರದೇಶ (ಚ. ಅಡಿಗಳಲ್ಲಿ)
01.	ಪುತ್ತೂರು ಟೌನ್	1200 ರಿಂದ 1600
02.	ಮಂಗಳೂರು ನಗರ ಬಿಜೈ	1400 ರಿಂದ 1800
03.	ಉಲ್ಲಾಳ ಟೌನ್, ಮಂಗಳೂರು	1200 ರಿಂದ 1600

ನೀಡಲಾಗುವ ಆವರಣಗಳು ಶಾಸನಬದ್ಧ ಅಧಿಕಾರಿಗಳಿಂದ ಎಲ್ಲಾ ಕ್ಲಿಯರೆನ್ಸ್ ಪ್ರಮಾಣಪತ್ರಗಳನ್ನು ಹೊಂದಿರಬೇಕು. ಅಪೇಕ್ಷಿತ ಪ್ರದೇಶದಲ್ಲಿ ಅಂತಹ ಆವರಣದ ಆಸಕ್ತ ಮಾಲೀಕರು / ನೋಂದಾಯಿತ ಪವರ್ ಆಫ್ ಅಟಾರ್ನಿ ಹೊಂದಿರುವವರು, ದೀರ್ಘಾವಧಿಯ ಗುತ್ತಿಗೆ ಆಧಾರದ ಮೇಲೆ ತಮ್ಮ ಸುಲಭವಾಗಿ ಲಭ್ಯವಿರುವ ಆವರಣವನ್ನು 15 ವರ್ಷಗಳು ಅಥವಾ ಅದಕ್ಕಿಂತ ಹೆಚ್ಚಿನ ಅವಧಿಗೆ ಗುತ್ತಿಗೆ ನೀಡಲು ಸಿದ್ಧರಿದ್ದರೆ, ಬ್ಯಾಂಕಿನ **ವೆಬ್‌ಸೈಟ್ :** www.pnb.bank.in ನಲ್ಲಿ ಲಭ್ಯವಿರುವ ನಿಗದಿತ ಸ್ವರೂಪದಲ್ಲಿ ತಮ್ಮ ಕೊಡುಗೆಗಳನ್ನು ಕಳುಹಿಸಬಹುದು ಅಥವಾ ಅದನ್ನು ಮೇಲಿನ ವಿಳಾಸದಿಂದ ಕಚೇರಿ ಸಮಯದಲ್ಲಿ ಪಡೆಯಬಹುದು. ಸರಿಯಾಗಿ ಮೊಹರು ಮಾಡಿ ಸಹಿ ಮಾಡಿದ ಸಂಪೂರ್ಣ ಕೊಡುಗೆಯನ್ನು ಮೇಲಿನ ವಿಳಾಸದಲ್ಲಿ (**ದಿನಾಂಕ : 25-05-2026 ರಂದು ಅಥವಾ ಅದಕ್ಕೂ ಮೊದಲು**) **ಸಂಜೆ 05.00 ರವರೆಗೆ** ತಲುಪಬೇಕು.

ಬ್ಯಾಂಕ್ ಯಾವುದೇ ಬ್ರೋಕರೇಜ್ ಅನ್ನು ಪಾವತಿಸುವುದಿಲ್ಲ. ಯಾವುದೇ ಕಾರಣಗಳನ್ನು ನೀಡದೆ ಯಾವುದೇ ಅಥವಾ ಎಲ್ಲಾ ಕೊಡುಗೆಗಳನ್ನು ತನ್ನ ಸ್ವಂತ ವಿವೇಚನೆಯಿಂದ ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿದೆ.

ಜಾಹೀರಾತು ದಿನಾಂಕ : 06-05-2026 **ಸರ್ಕಲ್ ಮುಖ್ಯಸ್ಥರು, ಮಂಗಳೂರು ವೃತ್ತ**

ಕನ್ನಡಪ್ರಭ ಸಂಪಾದಕೀಯ

ತಮಿಳ್ನಾಡಲ್ಲಿ ಟಿವಿಕೆ ಪಕ್ಷದ ಮುಂದಿದೆ ಹಲವು ಸವಾಲು


60 ವರ್ಷಗಳ ದ್ರಾವಿಡ ಪಕ್ಷಗಳ ಆಡಳಿತ ಕೊನೆಗೊಳಿಸುವಲ್ಲಿ ಯಶಸ್ವಿಯಾಗಿ ಮಾಡ್ರನ್ ದ್ರಾವಿಡ ಪಕ್ಷ ಎಂದೇ ಕರೆದುಕೊಳ್ಳುವ ಟಿವಿಕೆ ಪಕ್ಷದ ವಿಜಯ್, ತಮಿಳುನಾಡಿನಲ್ಲಿ ಅಧಿಕಾರದ ಚುಕ್ಕಾಣಿ ಹಿಡಿಯುವ ಅವಕಾಶ ಪಡೆದುಕೊಂಡಿದ್ದಾರೆ. ಬದಲಾವಣೆ ಬಯಸಿದ್ದ ಜನರ ಪ್ರತೀಕವಾಗಿ ಅವರ ಪಕ್ಷ 107 ಸ್ಥಾನ ಪಡೆದು ಅಧಿಕಾರಕ್ಕೆ ಬಂದಿದೆ. ಆದರೆ ಬಹುಮತಕ್ಕೆ ಅಗತ್ಯವಾದ 118 ಸ್ಥಾನಗಳು ದೊರೆತಿಲ್ಲದಿರುವುದು ಅವರನ್ನು ಕಾಡುತ್ತಿದೆ. ಹೀಗಾಗಿ ಅವರ ಮೊದಲ ಸವಾಲು, ಯಾರೊಂದಿಗಾದರೂ ಸೇರಿಕೊಂಡು ಮೈತ್ರಿ ಸರ್ಕಾರ ರಚಿಸಬೇಕೋ? ಅಥವಾ ಬಾಹ್ಯ ಬೆಂಬಲ ಪಡೆದುಕೊಂಡು ಅಲ್ಪಮತದ ಸರ್ಕಾರ ರಚಿಸಬೇಕೋ ಎಂಬುದನ್ನು ನಿರ್ಧರಿಸುವುದು. ತಾತ್ವಿಕವಾಗಿ ವಿರುದ್ಧವಾಗಿರುವ ಡಿಎಂಕೆ, ಈಗಾಗಲೇ ತಾನು ವಿಪಕ್ಷದಲ್ಲಿ ಕುಳಿತುಕೊಳ್ಳುವುದಾಗಿ ಘೋಷಿಸಿದೆ. ಮತ್ತೊಂದೆಡೆ 52 ಪಕ್ಷ ಪಡೆದ ಎಐಎಡಿಎಂಕೆ, 5 ಸ್ಥಾನ ಪಡೆದ ಕಾಂಗ್ರೆಸ್, ಎಡಪಕ್ಷಗಳು ಹಾಗೂ ಇತರೆ ಸಣ್ಣಪುಟ್ಟ ಪಕ್ಷಗಳು, ವಿಜಯ್ ಮುಂದಿನ ಆಯ್ಕೆಗಳು.

> ರಾಜಕೀಯ ಬಲಿಷ್ಠ ವಿಪಕ್ಷಗಳ ಎದುರಿಸುವ ಜೊತೆಗೆ, ಸಂಕಷ್ಟದಲ್ಲಿರುವ ರಾಜ್ಯದ ಆರ್ಥಿಕತೆ ನಡುವೆ ಗ್ಯಾರಂಟಿಗಳ ಜಾರಿ, ವಿಜಯ್ ನೇತೃತ್ವದ ಹೊಸ ತಂಡದ ದೊಡ್ಡ ಸವಾಲು

ಇದು ಸರ್ಕಾರ ರಚಿಸುವಹಂತದವರೆಗಿನ ಸವಾಲಾದರೆ, ಮುಂದೆ ಇನ್ನೂ ದೊಡ್ಡ ಸವಾಲುಗಳು ಅವರನ್ನು ಕಾದು ಕುಳಿತಿವೆ. ಈಗಾಗಲೇ ಹಿಂದಿನ ಸರ್ಕಾರಗಳು, ಉಚಿತ ಕೊಡುಗೆ ಸೇರಿ ನಾನಾ ಹೆಸರಿನಲ್ಲಿ ಮಾಡಿಟ್ಟಿರುವ 10 ಲಕ್ಷ ಕೋಟಿ ರು. ಸಾಲ ರಾಜ್ಯದ ಮೇಲಿದೆ. ಇದು ಕಳವಳಕಾರಿ ಪ್ರಮಾಣದಲ್ಲಿದೆ. ಇದರ ಜೊತೆಗೆ ಅಧಿಕಾರಕ್ಕೆ ಏರುವಾಗ ಸ್ವತಃ ವಿಜಯ್ ಪಕ್ಷ ಘೋಷಿಸಿದ್ದ ಮಹಿಳೆಯರಿಗೆ ಆರ್ಥಿಕ ನೆರವು, ಉಚಿತ ಎಲ್‌ಪಿಜಿ, ನವವಧುಗೆ 8 ಗ್ರಾಂ ಚಿನ್ನ, ಮಹಿಳೆಯರಿಗೆ ಉಚಿತ ಪ್ರಯಾಣ, ಬೆಳೆ ಸಾಲ ಮನ್ನಾ, ಮಾಸಿಕ 200 ಯುನಿಟ್ ಉಚಿತ ವಿದ್ಯುತ್‌ನಂಥ ಆರ್ಥಿಕವಾಗಿ ಸರ್ಕಾರಕ್ಕೆ ಹೊರೆ ತರುವ ಹಲವು ಯೋಜನೆಗಳನ್ನು ಜಾರಿಗೆ ತರುವ ಹೊಣೆ ಅವರ ಮೇಲಿದೆ.

ಸದ್ಯದ ರಾಜ್ಯದ ಆರ್ಥಿಕ ಪರಿಸ್ಥಿತಿಯಲ್ಲಿ ಮತ್ತಷ್ಟು ಸಾಲ ಮಾಡಿಕೊಂಡು ಭರವಸೆಗಳನ್ನು ವಿಜಯ್ ಹೇಗೆ ಈಡೇರಿಸ್ತಾರೆ ಎಂಬುದು ಮಹತ್ವದ್ದು. ಮೇಲಾಗಿ ರಾಜಕೀಯಕ್ಕೆ ವಿಜಯ್ ಹೊಸಬರು. ಅವರ ಇಡೀ ತಂಡ ಕೂಡಾ ರಾಜಕೀಯವಾಗಿ ಹೆಚ್ಚಿನ ಅನುಭವ ಹೊಂದಿಲ್ಲದವರು. ಇದು ಸಹಜವಾಗಿ ಅವರ ಮೇಲಿನ ಒತ್ತಡ ಹೆಚ್ಚಿಸಬಹುದು. ಆದರೆ ಹಲವು ಸ್ಟಾರ್ಟಪ್ ರಾಜಕೀಯ ಪಕ್ಷಗಳು ಮೊದಲ ಸಲವೇ ಗಮನಾರ್ಹ ಆಡಳಿತ ನೀಡಿದ ಉದಾಹರಣೆ ಎಲ್ಲರ ಮುಂದಿದೆ. ಹೀಗಾಗಿ ವಿಜಯ್ ಅವರಿಂದ ಉತ್ತಮ ಆಡಳಿತ ಸಾಧ್ಯವಾಗದು ಎಂದಲ್ಲ. ಅವರ ಮುಂದಿರುವುದು ರಾಜಕೀಯವಾಗಿ ಬಲಿಷ್ಠ ವಿಪಕ್ಷಗಳನ್ನು ಎದುರಿಸುವುದು, ಆರ್ಥಿಕವಾಗಿ ರಾಜ್ಯವನ್ನು ಕಾಪಾಡುವ ದೊಡ್ಡ ಹೊಣೆ. ಹೀಗಾಗಿ ಸರ್ಕಾರದ ಬಗ್ಗೆ ಎಲ್ಲರಲ್ಲಿ ದೊಡ್ಡ ಕುತೂಹಲವಿದೆ.

ಗೂಫ — ಸಂಭ್ರಮಾಚರಣೆ




ನಿತ್ಯಫಲ

- **ಮೇಷ:** ನಿಮ್ಮನ್ನು ನಿರ್ಲಕ್ಷ್ಯ ಮಾಡಿದವರಿಗೆ ಸರಿಯಾದ ಶಿಕ್ಷೆ ನೀಡಲು ಇದು ಸಕಾಲ. ಶುಭದಿನ.
- **ವೃಷಭ:** ಯಾರದ್ದೋ ಮಾತು ಕೇಳಿ ನಿಮ್ಮ ಆತ್ಮೀಯರನ್ನು ದೂರ ಮಾಡಿಕೊಳ್ಳದಿರಿ. ಎಚ್ಚರಿಕೆ.
- **ಮಿಥುನ:** ಸಮಾಧಾನದಿಂದ ಕಾರ್ಯ ನಿರ್ವಹಿಸಿದರೆ ನಿಮಗೆ ಜಯ ಕಟ್ಟಿಟ್ಟ ಬುತ್ತಿ ಎಂಬ ಅರಿವಿರಲಿ.
- **ಕಟಕ:** ಹೊಸ ಕೆಲಸ ಆರಂಭಿಸಿರುವ ನಿಮಗೆ ಕಷ್ಟವೆನಿಸಿದರೂ ಸುಖಾಂತ್ಯಗೊಳ್ಳಲಿದೆ.
- **ಸಿಂಹ:** ದೂರದ ಬಂಧುಗಳ ಆಗಮನದಿಂದ ಮನೆಯಲ್ಲಿ ಸಂತಸದ ವಾತಾವರಣ.
- **ಕನ್ಯಾ:** ಅವಿವಾಹಿತರಿಗೆ ವಿವಾಹ ಯೋಗ ಕೂಡಿ ಬಂದಿದ್ದು, ಬಹು ದಿನದ ಕನಸು ನನಸು.
- **ತುಲಾ:** ಅನವಶ್ಯಕ ಚಿಂತೆಯಿಂದ ಮಾನಸಿಕ ಕಿರಿಕಿರಿ ಅನುಭವಿಸುವಿರಿ. ಅತ್ಯಂತ ಎಚ್ಚರಿಕೆ.
- **ವೃಶ್ಚಿಕ:** ಹೊಸ ಕೆಲಸ ನಿಮ್ಮ ಕೈ ಹಿಡಿಯಲಿದ್ದು, ಮೊದಲಿಗಿಂತ ಹೆಚ್ಚಿನ ಆದಾಯ ಸಿಗಲಿದೆ.
- **ಧನುಸ್ಸು:** ನಿಮ್ಮ ಹೊಟ್ಟೆಯ ಮೇಲೆ ಹೊಡೆಯುವ ಕಾರ್ಯ ನಡೆಯಲಿದೆ. ಅನಿವಾರ್ಯ ಸಹಿಸಲೇಬೇಕು.
- **ಮಕರ:** ನಿಮ್ಮಂತೆಯೇ ಹಲವರು ಕಷ್ಟಪಟ್ಟು ಜೀವನ ಸಾಗಿಸುತ್ತಿದ್ದಾರೆ ಎಂಬ ಅರಿವಿರಲಿ.
- **ಕುಂಭ:** ಷೇರು ವ್ಯವಹಾರದಲ್ಲಿ ತೊಡಗಿಸಿಕೊಂಡವರಿಗೆ ಅಲ್ಪ ಪ್ರಮಾಣದ ಲಾಭವಾಗಲಿದೆ.
- **ಮೀನ:** ಹವಾಮಾನ ವೈಪರೀತ್ಯದಿಂದ ದೂರ ಪ್ರಯಾಣ ಮುಂದಕ್ಕೆ ಹಾಕುವುದು ಅನಿವಾರ್ಯ.

ಪಂಚಾಂಗ

ಸಂವತ್ಸರ: ಪರಾಭವ, ಉತ್ತರಾಯಣ, ಋತು: ವಸಂತ, ಮಾಸ: ವೈಶಾಖ
ಪಕ್ಷ: ಕೃಷ್ಣ, ತಿಥಿ: ಪಂಚಮಿ, ನಕ್ಷತ್ರ: ಮೂಲ, ರಾಹುಕಾಲ 12:00-01:30
ಯಮಗಂಡಕಾಲ 07:30-09:00 **ಗುಳಿಕಕಾಲ** 10:30-12:00

ಪದಯಾತ್ರೆ 2550 • ಜಯಕೃಷ್ಣ



2549 ರ ಉತ್ತರ

ಎಡದಿಂದ ಬಲಕ್ಕೆ
1. ಜೀರ್ಣೋದ್ಧಾರ, 3. ಗ್ರಹಚಾರ, 5. ಗಟ್ಟಿಗ , 6. ಕಣ, 7. ತಿಲ, 10. ಶತ, 12. ಮಣ, 14. ಯಾಚನೆ, 15. ಮರೀಚಿಕೆ, 16. ನಕ್ಷತ್ರಕ.

ಮೇಲಿನಿಂದ ಕೆಳಕ್ಕೆ
1. ಜೀವಸತ್ವ, 2. ರಣಾಂಗಣ, 3. ಗ್ರಹಗತಿ, 4. ರಕ್ತಸ್ರಾವ, 6. ಕಲಶ, 8. ಲವಣ, 9. ಪರಾಕ್ರಮ, 11. ತಯಾರಿಕೆ, 12. ಮನೆತನ, 13. ನಾಗರಿಕ.

ಎಡದಿಂದ ಬಲಕ್ಕೆ
1. ಲಕ್ವ ಎಂಬ ಕಾಯಿಲೆ (4)
3. ವಿರಾಮ ಕೊಡುವ ಆಸನ (4)
5. ಪತ್ರಿಕೆಗೆ ಕಳಿಸಿದ ಸುದ್ದಿ (3)
6. ಬುದ್ಧಿಯನ್ನು ಹೀಗೂ ಹೇಳುವರು (2)
7. ಸ್ವಲ್ಪವೇ ಸ್ವಲ್ಪ, ತುಸು (2)
11. ವಿಶೇಷವಾಗಿ ಗಮನಿಸಬೇಕಾದ ಟಿಪ್ಪಣಿ (2)
13. ವಯಸ್ಸು- ಇನ್ನೊಂದು ಪದ (2)
14. ಇದು ಸತ್ಯವಾದದ್ದು (3)
15. ತದ್ವಿರುದ್ಧವಾದುದು (4)
16. ನೆಲದ ಮಟ್ಟಕ್ಕೆ ನಾಶ (4)

ಮೇಲಿನಿಂದ ಕೆಳಕ್ಕೆ
1. ನಡೆದುಕೊಂಡು ಹೋಗುವವನು (4)
2. ಬಾಲಕಿಯಲ್ಲ, ತರುಣಿ (3)
3. ತುಂಬಾ ಒಳ್ಳೆಯ ದಿನ (3)
4. ನವಿರಾದ ಕಂಪು (4)
6. ಘನವಂತ ಈ ಪುರುಷ (5)
8. ಸುಲಭವಾದ ಮಾರ್ಗ (5)
9. ಬಹುಕಾಲ ಬದುಕುವವನು (4)
10. ಹೋಲಿಕೆ ಇಲ್ಲದವಳು (4)
12. ರಾಜನು ಕಳುಹಿಸಿದ ಪತ್ರ (3)
13. ದೇವರ ಸ್ತುತಿ (3)

ಕನ್ನಡಪ್ರಭ KANNADAPRABHA

ಪ್ರಧಾನ ಸಂಪಾದಕ: **ರವಿ ಹೆಗಡೆ** EDITOR IN CHIEF: **RAVI HEGDE**

ನಮ್ಮ ವಿಳಾಸ: ಸಂಪಾದಕರು, ಕನ್ನಡಪ್ರಭ, ನಂ.36, ಕ್ರೆಸೆಂಟ್ ರಸ್ತೆ, ಮಲ್ಲಿಗೆ ಆಸ್ಪತ್ರೆ ಎದುರು, ಶಿವಾನಂದ ವೃತ್ತ, ಬೆಂಗಳೂರು-560 001
PHONE: 080-68416300 FAX:080-68416354
email: editor@kannadaprabha.in epaper.kannadaprabha.in
facebook: SuvarnaNews twitter: @suvarnanewstv

ಬಡ ಕುಟುಂಬದಲ್ಲಿ ಹುಟ್ಟಿ ತರಕಾರಿ ಮಾರಿ ಬದುಕು ರೂಪಿಸಿಕೊಂಡು ಛಲ, ಜನಪರ ಕಾಳಜಿಯಿಂದ ಬೆಳೆದ ಬಿಎಸ್‌ವೈ

ಜನಪರ ಯೋಜನೆಗಳ ಹರಿಕಾರ ಯಡಿಯೂರಪ್ಪ



ಛಲವಾದಿ ನಾರಾಯಣಸ್ವಾಮಿ
ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕರು

> ಮಠ-ಮಾನ್ಯಗಳಿಗೆ ಅನುದಾನ ನೀಡುವ ಮೂಲಕ ಸಂಸ್ಕೃತಿ ಮತ್ತು ಶಿಕ್ಷಣದ ಬೆಳವಣಿಗೆಗೆ ಸಹಕರಿಸಿದರು. ದೇವರಾಜ ಅರಸು ಅವರ ನಂತರ ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಇಷ್ಟೊಂದು ಬದ್ಧತೆ ತೋರಿದ ಮತ್ತೊಬ್ಬ ನಾಯಕ ಸಿಗುವುದು ವಿರಳ.

ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆಯ ಬೂಕನಕೆರೆಯಲ್ಲಿ ಜನಿಸಿದ ಯಡಿಯೂರಪ್ಪ ಎಂಬ ಹೆಸರಿನ ಕಮಲ, ಶಿಕಾರಿಪುರದಲ್ಲಿ ಅರಳಿ ಕರ್ನಾಟಕದ ಉದ್ದಗಲಕ್ಕೂ ತನ್ನ ಸುಗಂಧವನ್ನು ಹರಡಿದ್ದು ಒಂದು ಸಾಹಸಮಯ ಗಾಥೆ. ಬಡ ರೈತ ಕುಟುಂಬದಲ್ಲಿ ಜನಿಸಿ, ಬದುಕಿಗಾಗಿ ತರಕಾರಿ ಮಾರಿ, ಜೀವನವನ್ನು ರೂಪಿಸಿಕೊಂಡ ಈ ವ್ಯಕ್ತಿಯ ಏಳಿಗೆಯ ಹಿಂದೆ ಯಾವುದೇ ರಾಜಕೀಯ ವಂಶ ಪಾರಂಪರ್ಯದ ಬಲವಿರಲಿಲ್ಲ; ಇದ್ದದ್ದು ಕೇವಲ ಛಲ ಮತ್ತು ಜನಪರ ಕಾಳಜಿ.

ಸಂಘದ ಶಿಸ್ತು ಮತ್ತು ರಾಜಕೀಯ ಪಾದಾರ್ಪಣೆ

ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಶಿಸ್ತಿನಲ್ಲಿ ತಮ್ಮ ಜೀವನವನ್ನು ರೂಪಿಸಿಕೊಂಡ ಯಡಿಯೂರಪ್ಪನವರು, ಸಂಘದ ಪ್ರೇರಣೆಯಿಂದಲೇ ತಮ್ಮ 22ನೇ ವಯಸ್ಸಿನಲ್ಲಿ ಶಿಕಾರಿಪುರಕ್ಕೆ ಬಂದರು. 1975ರಲ್ಲಿ ಶಿಕಾರಿಪುರ ಪುರಸಭೆಯ ಸದಸ್ಯರಾಗಿ ಆಯ್ಕೆಯಾಗುವ ಮೂಲಕ ಸಾರ್ವಜನಿಕ ಜೀವನ ಪ್ರವೇಶಿಸಿದರು. ತುರ್ತು ಪರಿಸ್ಥಿತಿಯ ವಿರುದ್ಧ ಧ್ವನಿ ಎತ್ತಿ ಜೈಲುವಾಸ ಅನುಭವಿಸಿದ ಅವರು, ಅಲ್ಲಿಂದಾಚೆಗೆ ಎಂದೂ ಹಿಂತಿರುಗಿ ನೋಡಲಿಲ್ಲ.

ಸೋಲೇ ಜಯದ ಸೋಪಾನ

ಯಡಿಯೂರಪ್ಪನವರ ಜೀವನದ ರಹಸ್ಯ ಇರುವುದೇ ''ಹೋರಾಟ'' ದಲ್ಲಿ. ಶಿಕಾರಿಪುರದ ಪುರಸಭಾಧ್ಯಕ್ಷರಿಂದ ರಾಜ್ಯದ ಮುಖ್ಯಮಂತ್ರಿ ಪದವಿಯವರೆಗೆ ಅವರು ಕ್ರಮಿಸಿದ ಹಾದಿ ಕಲ್ಲು-ಮುಳ್ಳುಗಳಿಂದ ಕೂಡಿತ್ತು.

ಕೃಷಿಕರ ಧ್ವನಿ: ಕಾಗೋಡು ಸತ್ಯಾಗ್ರಹದಲ್ಲಿ ಭಾಗವಹಿಸಿ ಗೇಣಿದಾರರ ಹಿತರಕ್ಷಣೆಗಾಗಿ ಹೋರಾಡಿದರು.


ರೈತ ಪರ ಕಾಳಜಿ: ಬಗರ್‌ಹುಕುಂ ಸಾಗುವಳಿ ಮಾಡುವ ರೈತರ ಪರವಾಗಿ ನಡೆಸಿದ ಹೋರಾಟ ಇಂದಿಗೂ ಸ್ಮರಣೀಯ.

ಸದನದ ಶಕ್ತಿ: 1983ರಲ್ಲಿ ಮೊದಲ ಬಾರಿಗೆ ವಿಧಾನಸಭೆ ಪ್ರವೇಶಿಸಿದಾಗ ಅವರು ಬಿಜೆಪಿಯ ಕೆಲವೇ ಸದಸ್ಯರಲ್ಲಿ ಒಬ್ಬರಾಗಿದ್ದರು. ಆದರೆ ವಿರೋಧ ಪಕ್ಷದ ನಾಯಕರಾಗಿ ಅವರ ಸಿಡಿಗುಂಡಿನ ಮಾತುಗಳು ವಿಧಾನಸೌಧದ ಗೋಡೆಗಳನ್ನು ನಡುಗಿಸುತ್ತಿದ್ದವು.



ದಕ್ಷಿಣದಲ್ಲಿ ಕಮಲ ಅರಳಿಸಿದ ಪವಾಡ

ಭರತಖಂಡಕ್ಕೆ ಸ್ವಾತಂತ್ರ್ಯ ಬಂದು ದಶಕಗಳಾದರೂ ದಕ್ಷಿಣ ಭಾರತದಲ್ಲಿ ಬಿಜೆಪಿಗೆ ಪ್ರವೇಶ ದೊರೆಯುವುದಿಲ್ಲ ಎಂಬ ಸಂಶಯವಿತ್ತು. ಆದರೆ



ಯಡಿಯೂರಪ್ಪನವರು ಆ ಸಂಶಯವನ್ನು ಹುಸಿಗೊಳಿಸಿ ಕರ್ನಾಟಕದಲ್ಲಿ ಮೊದಲ ಬಾರಿಗೆ ಬಿಜೆಪಿ ಸರ್ಕಾರವನ್ನು ರಚಿಸಿದ ಪವಾಡ ಮಾಡಿದರು. ಬಿಜೆಪಿ ಪಕ್ಷವನ್ನು ನಗರ ಕೇಂದ್ರಿತ ಅಥವಾ ಮಧ್ಯಮ ವರ್ಗದ ಪಕ್ಷವಾಗಿ ಉಳಿಸದೆ, ಅದನ್ನು ಬಡವರ, ದೀನದಲಿತರ ಮತ್ತು ಹಳ್ಳಿಗಳ ಪಕ್ಷವಾಗಿ ಬೆಳೆಸಿದ ಕೀರ್ತಿ ಅವರಿಗೆ ಸಲ್ಲುತ್ತದೆ.

ಜನಪರ ಯೋಜನೆಗಳ ಹರಿಕಾರ

ಮುಖ್ಯಮಂತ್ರಿಯಾಗಿ ಮತ್ತು ಉಪಮುಖ್ಯಮಂತ್ರಿಯಾಗಿ ಯಡಿಯೂರಪ್ಪನವರು ನೀಡಿದ ಬಜೆಟ್‌ಗಳು ಇಡೀ ದೇಶಕ್ಕೆ ಮಾದರಿಯಾದವು. ಅವರ ಕೆಲವು ಪ್ರಮುಖ ಯೋಜನೆಗಳು ಇಲ್ಲಿವೆ:

ಭಾಗ್ಯಲಕ್ಷ್ಮಿ ಯೋಜನೆ: ಬಡ ಕುಟುಂಬದ ಹೆಣ್ಣುಮಕ್ಕಳ ಭವಿಷ್ಯಕ್ಕಾಗಿ ತಂದ ಕ್ರಾಂತಿಕಾರಿ ಯೋಜನೆ.

ರೈತ ಬಂಧು ಮತ್ತು ಸಾಲ ಮನ್ನಾ: ರೈತರ ಕಷ್ಟಕ್ಕೆ ಸ್ಪಂದಿಸಿ ಶೂನ್ಯ ಬಡ್ಡಿ ದರದಲ್ಲಿ ಸಾಲ ಮತ್ತು ಸಾಲ ಮನ್ನಾ ಸೌಲಭ್ಯ ನೀಡಿದರು.

ಸೈಕಲ್ ವಿತರಣೆ: ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಉತ್ತೇಜನ ನೀಡಲು ಸೈಕಲ್ ವಿತರಣೆ ಮಾಡಿದರು.

ಸಂಧ್ಯಾ ಸುರಕ್ಷಾ: ಹಿರಿಯ ನಾಗರಿಕರಿಗೆ ಮಾಸಿಕ ಪಿಂಚಣಿ ಒದಗಿಸುವ ಮೂಲಕ ಅವರಿಗೆ ನೆರಳಾದರು.

ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ: ಕನ್ನಡ ಭಾಷೆಗೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ದೊರಕಿಸಿಕೊಡುವಲ್ಲಿ ದೆಹಲಿಯ ಮಟ್ಟದಲ್ಲಿ ನಿಯೋಗ ಕರೆದೊಯ್ದು ಧರಣಿ ಹೂಡುವ ಎಚ್ಚರಿಕೆ ನೀಡಿ ಯಶಸ್ವಿಯಾದರು.

ವ್ಯಕ್ತಿತ್ವದ ವೈವಿಧ್ಯತೆ: ಭಾವುಕತೆ, ಸೌಜನ್ಯ

ಯಡಿಯೂರಪ್ಪನವರು ಹೊರನೋಟಕ್ಕೆ ಸಿಡಿಮಿಡಿಗೊಳ್ಳುವ ಸಿಟ್ಟಿನ ಮನುಷ್ಯನಂತೆ ಕಂಡರೂ, ಅಂತರಂಗದಲ್ಲಿ ಅವರು ತೀರಾ ಭಾವುಕರು. ಹಾವೇರಿಯಲ್ಲಿ ರೈತನ ಮಗ ಪೊಲೀಸ್ ಗುಂಡೇಟಿಗೆ ಬಲಿಯಾದಾಗ ಆ ತಾಯಿಯನ್ನು ಕಂಡು ಕಣ್ಣೀರಿಟ್ಟ ಅವರ ಹೃದಯವಂತಿಕೆ ಅಪಾರ. ರಾಜಕೀಯವಾಗಿ ಎಷ್ಟೇ ದೊಡ್ಡ ಸ್ಥಾನದಲ್ಲಿದ್ದರೂ, ಸಾಮಾನ್ಯ ಕಾರ್ಯಕರ್ತರನ್ನು ಕಂಡು ಕುಶಲೋಪರಿ ವಿಚಾರಿಸುವ ಅವರ ವಿನಯ ಮತ್ತು ಸಜ್ಜನಿಕೆ ಎಲ್ಲರಿಗೂ ಮಾದರಿಯಾಗಿದೆ.

ಜಾತ್ಯತೀತ ಬದ್ಧತೆ ಮತ್ತು ಸಾಮಾಜಿಕ ನ್ಯಾಯ

ಯಡಿಯೂರಪ್ಪನವರು ಕೇವಲ ಒಂದು ಸಮುದಾಯಕ್ಕೆ ಸೀಮಿತವಾಗಲಿಲ್ಲ. ಮಡಿವಾಳ, ಗಾಣಿಗ, ನೇಕಾರ, ಕುರುಬ ಸೇರಿದಂತೆ ಹತ್ತಾರು ಸಣ್ಣ ಸಣ್ಣ ಸಮುದಾಯಗಳಿಗೆ ರಾಜಕೀಯ ಪ್ರಾತಿನಿಧ್ಯ ನೀಡಿದರು. ಮಠ-ಮಾನ್ಯಗಳಿಗೆ ಅನುದಾನ ನೀಡುವ ಮೂಲಕ ಸಂಸ್ಕೃತಿ ಮತ್ತು ಶಿಕ್ಷಣದ ಬೆಳವಣಿಗೆಗೆ ಸಹಕರಿಸಿದರು. ದೇವರಾಜ ಅರಸು ಅವರ ನಂತರ ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಇಷ್ಟೊಂದು ಬದ್ಧತೆ ತೋರಿದ ಮತ್ತೊಬ್ಬ ನಾಯಕ ಸಿಗುವುದು ವಿರಳ.

ರಾಜಕೀಯ ಷಡ್ಯಂತ್ರ ಮತ್ತು ದಿಟ್ಟತನ

ತಮ್ಮ ರಾಜಕೀಯ ಜೀವನದಲ್ಲಿ ಅನೇಕ ಷಡ್ಯಂತ್ರಗಳಿಗೆ ಬಲಿಯಾದರೂ, ಯಡಿಯೂರಪ್ಪನವರು ಎಂದಿಗೂ ಎದೆಗುಂದಲಿಲ್ಲ. ತಮ್ಮ ಆತ್ಮಗೌರವಕ್ಕೆ ಧಕ್ಕೆ ಬಂದಾಗ ಹೊಸ ಪಕ್ಷ ಕಟ್ಟುವ ಸಾಹಸವನ್ನೂ ಮಾಡಿದರು. ಸೋಲನ್ನೇ ಗೆಲುವಿನ ಸೋಪಾನವನ್ನಾಗಿಸಿಕೊಂಡ ಅವರು, 'ಬಾರದು ಬಪ್ಪದು, ಬಪ್ಪದು ತಪ್ಪದು' ಎಂಬ ಮಾತಿನಂತೆ ತಮ್ಮ ಛಲದಿಂದ ಅಧಿಕಾರವನ್ನು ಮರಳಿ ಪಡೆದರು.

ಬಿ.ಎಸ್. ಯಡಿಯೂರಪ್ಪನವರು ಇಂದು ಕೇವಲ ಒಬ್ಬ ವ್ಯಕ್ತಿಯಲ್ಲ, ಅದೊಂದು ಶಕ್ತಿ. ಬಸವಣ್ಣನವರ 'ನುಡಿದಂತೆ ನಡೆ' ಎಂಬ ತತ್ವವನ್ನು ಪಾಲಿಸುತ್ತಾ, ಅಖಂಡ ಕರ್ನಾಟಕದ ಅಭಿವೃದ್ಧಿಯೇ ಪಂಚಾಕ್ಷರಿ ಮಂತ್ರವೆಂದು ನಂಬಿರುವ ಧೀಮಂತ ನಾಯಕ. ಅವರು ಹಾಕಿಕೊಟ್ಟ ಹಾದಿ ಹೊಸ ತಲೆಮಾರಿನ ರಾಜಕಾರಣಿಗಳಿಗೆ ಒಂದು ಮಾರ್ಗದರ್ಶಿಯಾಗಿದೆ. ಅವರ 50 ವರ್ಷಗಳ ಸಾರ್ವಜನಿಕ ಜೀವನದ ಈ ಸುದೀರ್ಘ ಪಯಣ ಕರ್ನಾಟಕದ ಜನಮಾನಸದಲ್ಲಿ ಅಜರಾಮರವಾಗಿ ಉಳಿಯಲಿದೆ.

'ಕನ್ನಡವೇ ಸತ್ಯ, ಕನ್ನಡವೇ ನಿತ್ಯ' ಎಂಬ ಕುವೆಂಪು ಅವರ ವಾಣಿಯಂತೆ ಬದುಕುತ್ತಿರುವ ಬಿ.ಎಸ್.ವೈ ಅವರಿಗೆ ದೀರ್ಘಾಯುಷ್ಯ ಮತ್ತು ಉತ್ತಮ ಆರೋಗ್ಯ ಲಭಿಸಲಿ ಎಂದು ಹಾರೈಸುತ್ತೇನೆ.

ನಾವು ಸೋತಿಲ್ಲ, ಸಿಎಂ ಸ್ಥಾನ ಬಿಡಲ್ಲ: ಮಮತಾ

ಮೊದಲ ಪುಟದಿಂದ

ಆದರೆ ಈ ಸಂಪ್ರದಾಯಕ್ಕೆ ತಿಲಾಂಜಲಿ ನೀಡುವ ಬೆದರಿಕೆಯನ್ನು ಅವರು ಹಾಕಿದ್ದಾರೆ. ಮಮತಾ ಹೇಳಿಕೆಯನ್ನು ಬಿಜೆಪಿ ತೀವ್ರವಾಗಿ ಖಂಡಿಸಿದೆ. ಆದರೆ ಸಂವಿಧಾನತಜ್ಞರು ಪ್ರತಿಕ್ರಿಯಿಸಿ, 'ಮಮತಾ ರಾಜೀನಾಮೆ ನೀಡದೇ ಹೋದರೆ ಹೊಸ ಸರ್ಕಾರ ರಚನೆಗೂ ಮುನ್ನ ಅವರನ್ನು ವಜಾ ಮಾಡುವ ಅಧಿಕಾರ ರಾಜ್ಯಪಾಲರಿಗೆ ಇದೆ. ಏಕೆಂದರೆ ಒಂದು ಚುನಾಯಿತ ಸರ್ಕಾರದ ಅವಧಿ 5 ವರ್ಷ ಮಾತ್ರ' ಎಂದಿದ್ದಾರೆ.



ಮಮತಾ ಹೇಳಿದ್ದೇನು?: ಚುನಾವಣೆಯಲ್ಲಿ ಘೋರ ಪರಾಭವ ಅನುಭವಿಸಿದ ಬಳಿಕ ಮಂಗಳವಾರ ಪತ್ರಿಕಾಗೋಷ್ಠಿ ನಡೆಸಿದ ಅವರು, 'ನನ್ನ ರಾಜೀನಾಮೆಯ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಏಕೆಂದರೆ ನಾವು ಸೋತಿದ್ದು ಜನಾದೇಶದಿಂದಲ್ಲ, ಬದಲಾಗಿ ಪಿತೂರಿಯಿಂದ. ನಾನು ಸೋತಿಲ್ಲ, ನಾನು ಲೋಕಭವನಕ್ಕೆ ಹೋಗುವುದಿಲ್ಲ. ಅವರು ಸಾಂವಿಧಾನಿಕ ಮಾನದಂಡಗಳ ಪ್ರಕಾರ ಕ್ರಮಕ್ಕೆ ಗೊಳ್ಳಬಹುದು' ಎಂದು ಹೇಳಿದರು.

100 ಸ್ಥಾನ ಲೂಟಿ: 'ಮತ ಎಣಿಕೆ ಪ್ರಕ್ರಿಯೆಯಲ್ಲಿ ದೊಡ್ಡ ಪ್ರಮಾಣದ ಅಕ್ರಮಗಳು ನಡೆದಿವೆ. ಸುಮಾರು 100 ಸ್ಥಾನಗಳಲ್ಲಿ ಜನಾದೇಶವನ್ನು ಲೂಟಿ ಮಾಡಲಾಯಿತು. ನಮ್ಮ ಪಕ್ಷದ ಸ್ಥೈರ್ಯ ಕುಗ್ಗಿಸಲು ಮತ ಎಣಿಕೆಯನ್ನು ಉದ್ದೇಶಪೂರ್ವಕವಾಗಿ ನಿಧಾನಗೊಳಿಸಲಾಯಿತು. ಇತಿಹಾಸದಲ್ಲಿ ಒಂದು ಕರಾಳ ಅಧ್ಯಾಯ ಸೃಷ್ಟಿಯಾಗಿದೆ. ಚುನಾವಣಾ ಆಯುಕ್ತ ಓರ್ವ ಖಳನಾಯಕ' ಎಂದು ಆರೋಪಿಸಿದರು.

'ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಜನರ ಪ್ರಜಾಪ್ರಭುತ್ವ ಹಕ್ಕುಗಳನ್ನು ದುರ್ಬಲಗೊಳಿಸುತ್ತಿದ್ದಾರೆ. ಚುನಾವಣೆಯಲ್ಲಿ ಟಿಎಂಸಿಯ ಸ್ಪರ್ಧೆಯು ಬಿಜೆಪಿ ವಿರುದ್ಧವಾಗಿರಲಿಲ್ಲ, ಬದಲಾಗಿ ಬಿಜೆಪಿಗಾಗಿ ಕೆಲಸ ಮಾಡಿದ ಚುನಾವಣಾ ಆಯೋಗದ ವಿರುದ್ಧವಾಗಿತ್ತು' ಎಂದು ಮಮತಾ ತಿಳಿಸಿದರು.

'ಇಂಡಿಯಾ ಬ್ಲಾಕ್ ನಾಯಕರು ಒಗ್ಗಟ್ಟನ್ನು ವ್ಯಕ್ತಪಡಿಸಲು ನನಗೆ ಕರೆ ಮಾಡಿದರು. ಸೋನಿಯಾ ಮತ್ತು ರಾಹುಲ್ ಗಾಂಧಿ ನನ್ನೊಂದಿಗೆ ಮಾತನಾಡಿದ್ದಾರೆ. ಅರವಿಂದ್ ಕೇಜ್ರಿವಾಲ್, ಉದ್ಧವ್ ಠಾಕ್ರೆ, ಅಖಿಲೇಶ್ ಯಾದವ್ ಮತ್ತು ಹೇಮಂತ್ ಸೊರೇನ್ ಅವರಂತಹ ನಾಯಕರಿಂದಲೂ ಕರೆಗಳು ಬಂದಿವೆ' ಎಂದರು. 'ನಾನು ಕುರ್ಚಿಯಲ್ಲಿ ಇರುವವರೆಗೂ, ಅನೇಕ ವಿಷಯಗಳನ್ನು ಸಹಿಸಿಕೊಂಡಿದ್ದೆ. ಈಗ ಸ್ವತಂತ್ರ ಹಕ್ಕಿ, ಸಾಮಾನ್ಯ ವ್ಯಕ್ತಿ. ನಾನು ಬೀದಿ ಹೋರಾಟಗಾರ್ತಿ. ಬೀದಿಗಳಲ್ಲಿಯೇ ಇದ್ದು ಎಲ್ಲಾ ದೌರ್ಜನ್ಯಗಳ ವಿರುದ್ಧ ಹೋರಾಡುತ್ತೇನೆ. ಇಂಡಿಯಾ ಕೂಟ ಬಲಪಡಿಸಲಿದ್ದೇನೆ' ಎಂದರು.

4 ರಾಜ್ಯಗಳಲ್ಲಿ ಕಾಂಗ್ರೆಸ್‌ಗೆ ಮುಸ್ಲಿಂ ಶಾಸಕರದ್ದೇ ಬಲ

ಮೊದಲ ಪುಟದಿಂದ

ಬಂಗಾಳ: ಪಶ್ಚಿಮ ಬಂಗಾಳದಲ್ಲಿ, ಕಾಂಗ್ರೆಸ್ 2 ಸ್ಥಾನಗಳನ್ನು ಗೆದ್ದಿದೆ. ಇವರಿಬ್ಬರೂ ಮುಸ್ಲಿಮರಾಗಿದ್ದು, ಮುಸ್ಲಿಂ ಬಹುಸಂಖ್ಯಾತ ಕ್ಷೇತ್ರಗಳಿಂದಲೇ ಗೆದ್ದಿದ್ದಾರೆ. ಪಕ್ಷವು ರಾಜ್ಯದಲ್ಲಿ 63 ಮುಸ್ಲಿಂ ಅಭ್ಯರ್ಥಿಗಳನ್ನು ಕಣಕ್ಕಿಳಿಸಿತ್ತು. ಇದು ಟಿಎಂಸಿಗಿಂತ ಕಣಕ್ಕಿಳಿಸಿದ್ದ ಮುಸ್ಲಿಮರಿಗಿಂತ (47) ಹೆಚ್ಚು.

ತಮಿಳುನಾಡು: ಇಲ್ಲಿ ಕಾಂಗ್ರೆಸ್ ಇಬ್ಬರು ಮುಸ್ಲಿಂ ಅಭ್ಯರ್ಥಿಗಳನ್ನು ಕಣಕ್ಕಿಳಿಸಿತ್ತು. ಇವರಲ್ಲಿ ಒಬ್ಬರು ಗೆಲುವು ಸಾಧಿಸಿದ್ದಾರೆ. ಅಸ್ಸಾಂ ಮತ್ತು ಕೇರಳದಾದ್ಯಂತ, ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳಿಂದ ಕಣಕ್ಕಿಳಿಸಲಾದ ಮುಸ್ಲಿಂ ಅಭ್ಯರ್ಥಿಗಳು ಶೇ.80ಕ್ಕಿಂತ ಹೆಚ್ಚಿನ ಗೆಲುವಿನ ದರ ದಾಖಲಿಸಿದ್ದಾರೆ.

ಜೀವನಕ್ಕಾಗಿ 4 ಮನೆಗಳಲ್ಲಿ ಮುಸುರೆ ತಿಕ್ಕುತ್ತಿದ್ದ ಕಲಿತಾ ಈಗ ಬಿಜೆಪಿ ಶಾಸಕಿ!

ಮೊದಲ ಪುಟದಿಂದ

ಯಾರೀಕೆ?: ಗುಸ್ಕಾರ ಪುರಸಭೆಯ ನಿವಾಸಿಯಾದ ಮಾಝಿ, ರಾಜಕೀಯಕ್ಕೆ ಪ್ರವೇಶಿಸುವ ಮೊದಲು 4 ಮನೆಗಳಲ್ಲಿ ಪಾತ್ರೆ ತಿಕ್ಕುವ ಕೆಲಸ ಮಾಡುತ್ತಿದ್ದರು. 2021 ರಲ್ಲಿ ಬಿಜೆಪಿ ಇವರಿಗೆ ವಿಧಾನಸಭಾ ಚುನಾವಣೆಯಲ್ಲಿ ಟಿಕೆಟ್ ನೀಡಿತ್ತು. ಆದರೆ ತೃಣಮೂಲ ಕಾಂಗ್ರೆಸ್‌ನ ಅಭೇದಾನಂದ ಥಂಡರ್ ವಿರುದ್ಧ 11,815 ಮತಗಳಿಂದ ಸೋತಿದ್ದರು. ಆಗಿನಿಂದಲೂ ಸ್ವಲ್ಪ ರಾಜಕೀಯದ ನಂಟು ಉಳಿಸಿಕೊಂಡಿದ್ದ ಕಲಿತಾಗೆ ಬಿಜೆಪಿ ಈ ಬಾರಿ ಮತ್ತೆ ಟಿಕೆಟ್ ನೀಡಿತ್ತು. ಈ ಬಾರಿ ಲಲಿತಾಗೆ ಅದೃಷ್ಟ ಒಲಿದು ಬಂದಿದ್ದು ಅವರನ್ನು ನೇರವಾಗಿ ವಿಧಾನಸಭೆಗೆ ಕಳುಹಿಸಿಕೊಟ್ಟಿದೆ.

ಮೋದಿಗೆ ಅರ್ಪಣೆ: ನನ್ನ ಮೇಲೆ ವಿಶ್ವಾಸವಿಟ್ಟು ಎರಡನೇ ಬಾರಿ ಸ್ಪರ್ಧಿಸಲು ಬಿಜೆಪಿ ಅವಕಾಶ ಮಾಡಿಕೊಟ್ಟಿತ್ತು. ಹೀಗಾಗಿ ಈ ಗೆಲುವನ್ನು ನಾನು ಪ್ರಧಾನಿ ಮೋದಿಗೆ ಅರ್ಪಿಸುತ್ತೇನೆ ಎಂದು ಕಲಿತಾ ಹೇಳಿದ್ದಾರೆ.

ರಾಜ್ಯದ ಪಿಯು ಪಠ್ಯದ ಭಾಗವಾದ ಬಾಬರ್ ಬಂಗಾಳ ಟಿಎಂಸಿ ಶಾಸಕ!

ಮೊದಲ ಪುಟದಿಂದ

ಚಿತ್ರದುರ್ಗ ಜಿಲ್ಲೆಯ ಹಿರಿಯೂರು, ಚಿತ್ರದುರ್ಗ, ರಾಯಚೂರು, ಕೊಪ್ಪಳ ಸೇರಿ ಕರ್ನಾಟಕದ ಹಲವೆಡೆ ಕಾಲೇಜುಗಳಿಗೆ, ಶಾಲೆಗಳಿಗೆ ಭೇಟಿ ನೀಡಿ, ಉಪನ್ಯಾಸದ ಮೂಲಕ ವಿದ್ಯಾರ್ಥಿಗಳಿಗೆ ಉತ್ತೇಜನ ನೀಡಿದ್ದಾರೆ. ಭಾರತದ ಹಲವು ರಾಜ್ಯಗಳು, ಅಮೆರಿಕ, ಇಂಗ್ಲೆಂಡ್, ಜಪಾನ್, ಸಿಂಗಾಪುರ, ಬ್ರೆಜಿಲ್ ಸೇರಿ ವಿದೇಶಗಳಿಗೆ ಭೇಟಿ ನೀಡಿ, ಯುವಜನರಿಗೆ ಸ್ಫೂರ್ತಿ ತುಂಬುವ ಕೆಲಸವನ್ನು ಮಾಡಿದ್ದಾರೆ. 2002ರಲ್ಲಿ ಇವರು ತೆರೆದ 'ಆನಂದ್ ಶಿಕ್ಷಾ ನಿಕೇತನ್' ಪಾಠಶಾಲೆಗೆ ಈಗ 24 ವರ್ಷ.

ಸಾಧನೆಗಳು: ಕರ್ನಾಟಕ ಸರ್ಕಾರ 2013ರಲ್ಲಿ ಇವರ ಶೈಕ್ಷಣಿಕ ಸಾಧನೆ ಕುರಿತು ಪ್ರಥಮ ಪಿಯುಸಿ ಇಂಗ್ಲಿಷ್ ಪಠ್ಯದಲ್ಲಿ ಪರಿಚಯಾತ್ಮಕ ಲೇಖನ ಅಳವಡಿಸಿದೆ. 2009ರ ಅಕ್ಟೋಬರ್‌ನಲ್ಲಿ ಬಿಬಿಸಿ ಸುದ್ದಿ ಸಂಸ್ಥೆ ಇವರ ಬಗ್ಗೆ 'ವಿಶ್ವದ ಅತಿ ಕಿರಿಯ ಮುಖ್ಯ ಶಿಕ್ಷಕ' ಎಂಬ ನುಡಿಚಿತ್ರ ಪ್ರಸಾರ ಮಾಡಿದೆ. 2020ರಲ್ಲಿ ಅಂದಿನ ರಾಷ್ಟ್ರಪತಿ ರಾಮನಾಥ್ ಕೋವಿಂದ್ ತಮ್ಮ ಗಣರಾಜ್ಯೋತ್ಸವ ಮುನ್ನಾದಿನದ ಭಾಷಣದಲ್ಲಿ ಬಾಬರ್ ಸಾಧನೆ ಪ್ರಸ್ತಾಪಿಸಿದ್ದರು.

ಮುರ್ಷಿದಾಬಾದ್‌ನಲ್ಲಿ ಜನನ: ಬಾಬರ್ ಅಲಿ, 1993ರ ಮಾರ್ಚ್ 18ರಂದು ಪಶ್ಚಿಮ ಬಂಗಾಳದ ಮುರ್ಷಿದಾಬಾದ್ ಜಿಲ್ಲೆಯ ಭಾಪ್ಪ ಗ್ರಾಮದಲ್ಲಿ ಜನಿಸಿದರು. ತಂದೆ ನಾಸಿರುದ್ದಿನ್, ತಾಯಿ ಬನೌರಾ ಬೀಬಿ. ಈ ದಂಪತಿಗೆ ಬಾಬರ್‌ಅಲಿ ಸೇರಿ ಮೂವರು ಗಂಡು ಮಕ್ಕಳು ಹಾಗೂ ಒಬ್ಬಳು ಮಗಳು. ಇವರದು ಸಣ್ಣ ಪ್ರಮಾಣದ ಸೆಣಬು ಮಾರಾಟಗಾರರ ಕುಟುಂಬ.

ಸ್ವಗ್ರಾಮದಲ್ಲಿ ಪ್ರಾಥಮಿಕ ಶಿಕ್ಷಣ ಪಡೆದ ಬಾಬರ್‌ಅಲಿ, ಸಿಆರ್‌ಜಿಎಸ್ ಪ್ರೌಢಶಾಲೆ ಬೆಲ್ಲಂಗಾದಲ್ಲಿ ಪ್ರೌಢಶಾಲಾ ಶಿಕ್ಷಣ ಪಡೆದರು. ಕಾಸಿಂಬಜಾರ್‌ರಾಜ್ ಗೋವಿಂದ್ ಸುಂದರಿ ವಿದ್ಯಾಪೀಠದಲ್ಲಿ ಪದವಿ ಶಿಕ್ಷಣ ಪೂರೈಸಿದರು. ಆಗ ನಿತ್ಯ ಐದಾರು ಕಿ.ಮೀ.ದೂರ ಕಾಲ್ನಡಿಗೆಯಲ್ಲೇ ಸಾಗಿ ಕಾಲೇಜು ತಲುಪಬೇಕಿತ್ತು. ನಂತರ, ಕಲ್ಯಾಣಿ ವಿಶ್ವವಿದ್ಯಾಲಯದಿಂದ ಆಂಗ್ಲಭಾಷೆ ಮತ್ತು ಇತಿಹಾಸ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದರು.

ಇವರ ಸಾಧನೆ ಗುರುತಿಸಿ, ಟಿಎಂಸಿ ಟಿಕೆಟ್ ನೀಡಿತ್ತು. ಅವಿವಾಹಿತರಾಗಿರುವ ಇವರು ಮೊದಲ ಯತ್ನದಲ್ಲೇ ಶಾಸಕರಾಗಿದ್ದಾರೆ.

ಬಾಬರ್ ಅಲಿಯವರ ಬಾಲ್ಯ ರೋಚಕ, ವಿದ್ಯಾರ್ಥಿಗಳಿಗೆ ದಾರಿ ದೀಪ: ರಂಗಸ್ವಾಮಿ


ಬಾಬರ್‌ಅಲಿಯವರ ಬಾಲ್ಯವೇ ಬಲು ರೋಚಕ. ವಿದ್ಯಾರ್ಥಿಗಳಿಗೆ ಅವರು ರೋಲ್ ಮಾಡೆಲ್. ಸಾಧಿಸುವ ಹಠ ಇರುವವರಿಗೆ ದಾರಿದೀಪ. ಅವರೊಂದಿಗೆ ತುಂಬಾ ಸಮಯ ಕಳೆದಿದ್ದೇನೆ. ಸರಳ ವ್ಯಕ್ತಿತ್ವದ ಅವರನ್ನು ವಿವಿ ಸಾಗರಕ್ಕೂ (ಮಾರಿಕಣಿವೆ) ಕರೆದೊಯ್ದು, ಅಲ್ಲಿಯ ಸೊಬಗನ್ನು ತೋರಿಸಿದ್ದೇನೆ. ಸಾವಿರಾರು ಮಕ್ಕಳ ಬಾಳಿಗೆ ಅವರು ಬೆಳಕಾಗಿದ್ದಾರೆ ಎನ್ನುತ್ತಾರೆ ಹಿರಿಯೂರಿನ ಸಾಹಿತಿ, ನಿವೃತ್ತ ಉಪನ್ಯಾಸಕ ಎಂ.ಜಿ.ರಂಗಸ್ವಾಮಿ. ಅಲಿಯವರು ಈ ಭಾಗದ ಪ್ರವಾಸಕ್ಕೆ ಬಂದಾಗಲೆಲ್ಲಾ ರಂಗಸ್ವಾಮಿಯವರನ್ನು ಭೇಟಿ ಮಾಡುತ್ತಾರೆ. ಕೆಲವೆಡೆ ಇಬ್ಬರೂ ಒಟ್ಟಾಗಿ ಪ್ರವಾಸ ಮಾಡಿದ್ದಾರೆ.

ಕಬ್ಬು ಎಫ್‌ಆರ್‌ಪಿ ಬೆಲೆ ಇನ್ನು ಕ್ವಿಂಟಲ್‌ಗೆ ₹365

ಕ್ವಿಂಟಲ್‌ಗೆ ₹10 ಹೆಚ್ಚಳಕ್ಕೆ ಕೇಂದ್ರ ಸಂಪುಟ ಸಭೆ ನಿರ್ಧಾರ | ರೈತರಿಗೆ ₹1 ಲಕ್ಷ ಕೋಟಿಗೂ ಅಧಿಕ ಮೊತ್ತ

ನವದೆಹಲಿ: ಕಬ್ಬುಗಳನ್ನು ಪೂರೈಸುವ ರೈತರಿಗೆ ಮಿಲ್‌ಗಳು ಪಾವತಿಸಬೇಕಾದ ಮೊತ್ತದಲ್ಲಿ 10 ರು. ಹೆಚ್ಚಳ ಮಾಡಲಾಗಿದ್ದು, ಕ್ವಿಂಟಾಲ್‌ಗೆ 365 ರು. ಆಗಲಿದೆ.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಈ ನಿರ್ಧಾರ ಮಾಡಲಾಗಿದೆ. 2026-27ರ ಅವಧಿಗೆ ಅನ್ವಯಿಸಲ್ಪಡುವ ಇದು ಅಕ್ಟೋಬರ್‌ನಿಂದ ಜಾರಿಗೆ ಬರಲಿದೆ.



ನ್ಯಾಯಯುತ ಮತ್ತು ಲಾಭದಾಯಕ ಬೆಲೆಯಲ್ಲಿ ಮಾಡಲಾಗಿರುವ ಈ ಬದಲಾವಣೆ ಬಗ್ಗೆ (ಎಫ್‌ಆರ್‌ಪಿ) ಮಾಹಿತಿ ಸಚಿವ ಅಶ್ವಿನಿ ವೈಷ್ಣವ್ ಮಾಹಿತಿ ನೀಡಿದ್ದು, 'ರೈತರಿಗೆ 1 ಲಕ್ಷ ಕೋಟಿ ರು.ಗೂ ಅಧಿಕ ಮೊತ್ತ ಸಿಗಲಿದೆ' ಎಂದರು.

ಈಗಾಗಿರುವ ಬದಲಾವಣೆಯ ಪ್ರಕಾರ, ಕಬ್ಬಿನ ತೂಕದೊಂದಿಗೆ ಅದರಿಂದ ತಯಾರಿಸಬಹುದಾದ ಸಕ್ಕರೆಯ ಪ್ರಮಾಣವನ್ನು ಹೋಲಿಸಿದಾಗ ಶೇ.10.25 ರಷ್ಟಿದ್ದರೆ (100 ಕೆ.ಜಿ. ಕಬ್ಬಿಂದ 10.25 ಕೆ.ಜಿ. ಸಕ್ಕರೆ ಉತ್ಪಾದನೆಯಾದರೆ) ಕ್ವಿಂಟಾಲ್‌ಗೆ 365 ರು. ನೀಡಲಾಗುವುದು. ಈ ಪ್ರಮಾಣಕ್ಕಿಂತ ಶೇ.0.1ರಷ್ಟು ಹೆಚ್ಚಿದ್ದರೆ ಪ್ರತಿ ಕ್ವಿಂಟಾಲ್‌ಗೆ ಹೆಚ್ಚುವರಿ 3.56 ರು. ನೀಡಲಾಗುವುದು.


ಏರ್ಲೈನ್ಸ್, ಎಂಎಸ್‌ಎಂಇಗೆ 18,100 ಕೋಟಿ ರು. 'ಕ್ರೆಡಿಟ್ ಗ್ಯಾರಂಟಿ'

ನವದೆಹಲಿ: ಪಶ್ಚಿಮ ಏಷ್ಯಾ ಸಂಘರ್ಷದಿಂದ ಉಂಟಾಗುವ ಸವಾಲುಗಳ ಹಿನ್ನೆಲೆಯಲ್ಲಿ ಎಂಎಸ್‌ಎಂಇಗಳು, ವಿಮಾನಯಾನ ಸಂಸ್ಥೆಗಳು ಮತ್ತು ಇತರ ಕಂಪನಿಗಳಿಗೆ 18,100 ಕೋಟಿ ರು..ಗಳ ತುರ್ತು ಕ್ರೆಡಿಟ್ ಲೈನ್ ಗ್ಯಾರಂಟಿ ಯೋಜನೆ (ಇಸಿಎಲ್‌ಜಿಎಸ್) ಅನ್ನು ಸರ್ಕಾರ ಮಂಗಳವಾರ ಪ್ರಕಟಿಸಿದೆ. ಇದರಿಂದಾಗಿ 18,100 ಕೋಟಿ ರು. ನೆರವಿನೊಂದಿಗೆ 2.55 ಲಕ್ಷ ಕೋಟಿ ರು.ಗಳ ಹೆಚ್ಚುವರಿ ಸಾಲವೂ ಉದ್ಯಮಗಳಿಗೆ ಸಿಗಲಿದೆ. ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

ಹತ್ತಿಗೆ 5,659 ಕೋಟಿ ರು.: ಹತ್ತಿ ಬೆಳೆ ಇಳುವರಿ ಹೆಚ್ಚಿಸುವ 5 ವರ್ಷಗಳ ಮಿಷನ್‌ಗಾಗಿ 5,659 ಕೋಟಿ ರು.ಗಳಿಗೆ ಸಂಪುಟ ಅನುಮೋದನೆ ನೀಡಿದೆ.

ಸುಪ್ರೀಂ ಜಡ್ಜ್‌ಗಳ ಸಂಖ್ಯೆ 38ಕ್ಕೆ ಹೆಚ್ಚಿಸಲು ಕೇಂದ್ರ ಸಚಿವ ಸಂಪುಟ ಒಪ್ಪಿಗೆ

ನವದೆಹಲಿ: ಸದ್ಯ ಸುಪ್ರೀಂ ಕೋರ್ಟ್‌ನಲ್ಲಿರುವ 34 ಜಡ್ಜ್‌ಗಳ ಸಂಖ್ಯೆಯನ್ನು 38ಕ್ಕೆ ಏರಿಸಲು ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ. ಈ ಬಗ್ಗೆ ಸಚಿವ ಅಶ್ವಿನಿ ವೈಷ್ಣವ್ ಮಾಹಿತಿ ನೀಡಿದ್ದು, 'ಸಿಜೆಐ ಸೇರಿದಂತೆ ಸುಪ್ರೀಂ ಕೋರ್ಟ್‌ನಲ್ಲಿ 34 ನ್ಯಾಯಾಧೀಶರಿದ್ದಾರೆ. ಇನ್ನೂ 4 ಜಡ್ಜ್‌ಗಳನ್ನು ಸೇರಿಸಲು ನಿರ್ಧರಿಸಲಾಗಿದ್ದು, ಈ ಬಗೆಗಿನ ಮಸೂದೆಯನ್ನು ಮುಂದಿನ ಸಂಸತ್ ಅಧಿವೇಶನದಲ್ಲಿ ಮಂಡಿಸಲಾಗುವುದು' ಎಂದಿದ್ದಾರೆ. 1956ರ ಸುಪ್ರೀಂ ಕೋರ್ಟ್ (ಜಡ್ಜ್ ಸಂಖ್ಯೆ) ಕಾಯ್ದೆಯ ಅನ್ವಯ ಗರಿಷ್ಠ 10 ಇದ್ದ ಜಡ್ಜ್‌ಗಳ ಸಂಖ್ಯೆಯನ್ನು 1960ರಲ್ಲಿ ತಿದ್ದುಪಡಿಯ ಮೂಲಕ 13ಕ್ಕೆ, ಬಳಿಕ 17ಕ್ಕೇರಿಸಲಾಗಿತ್ತು. 1986ರಲ್ಲಿ ಇದು 25, 2009ರಲ್ಲಿ 30, 2019ರಲ್ಲಿ 33 ಆಗಿತ್ತು. ಈಗ ಇನ್ನೂ 4 ಸೇರ್ಪಡೆಯಾಗಲಿದೆ.



ಬಿಜೆಪಿ ಸೇರಿದ 6 ಆಪ್ ಸಂಸದರ ಅನರ್ಹತೆಗೆ ರಾಷ್ಟ್ರಪತಿಗೆ ಮನವಿ

ಚಂಡೀಗಢ: ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ನೇತೃತ್ವದಲ್ಲಿ ಆಪ್ ಶಾಸಕರ ನಿಯೋಗ ಮಂಗಳವಾರ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿಯಾಗಿ ಬಿಜೆಪಿಗೆ ಪಕ್ಷಾಂತರ ಮಾಡಿದ ಆಮ್ ಆದ್ಮಿ ಪಕ್ಷದ ಪಂಜಾಬ್‌ನ ಆರು ರಾಜ್ಯಸಭಾ ಸದಸ್ಯರ ಅನರ್ಹತೆಗೆ ಮನವಿ ಮಾಡಿದೆ.

> ಮುರ್ಮು ಭೇಟಿಯಾದ ಪಂಜಾಬ್ ಸಿಎಂ ಮಾನ್ ನಿಯೋಗ

ಇದೇ ವೇಳೆ, ಜನಪ್ರತಿನಿಧಿಗಳನ್ನು ವಾಪಸ್ ಕರೆಸಿಕೊಳ್ಳುವ ಸಂಬಂಧ ಸಂವಿಧಾನದಲ್ಲಿ ಅವಕಾಶ ಕಲ್ಪಿಸುವಂತೆ ಮನವಿಯನ್ನೂ ಮಾಡಿದೆ. ಆಮ್ ಆದ್ಮಿ ಪಕ್ಷದ 10 ರಾಜ್ಯಸಭಾ ಸದಸ್ಯರಲ್ಲಿ ರಾಘವ್ ಚಡ್ಡಾ, ಹರ್ಭಜನ್ ಸಿಂಗ್ ಸೇರಿ ಪಂಜಾಬ್‌ನ ಆರು ಸೇರಿ ಒಟ್ಟು ಏಳು ಮಂದಿ ಬಿಜೆಪಿ ಸೇರ್ಪಡೆಯಾಗಿದ್ದಾರೆ. ಇವರಲ್ಲಿ ಆರು ಮಂದಿ ಪಂಜಾಬ್‌ನಿಂದ ರಾಜ್ಯಸಭೆಗೆ ಆಯ್ಕೆಯಾದವರು. ನಮ್ಮ ಏಳು ರಾಜ್ಯಸಭಾ ಸದಸ್ಯರು ಪಕ್ಷ ತೊರೆದು ಬಿಜೆಪಿ ಸೇರ್ಪಡೆಯಾಗಿರುವುದು ಪ್ರಜಾಪ್ರಭುತ್ವದ ಹತ್ಯೆ. ಒಂದು ಪಕ್ಷದ ಇನ್ನೊಂದು ಸಂಸದರು ಇನ್ನೊಂದು ಪಕ್ಷಕ್ಕೆ ಸೇರ್ಪಡೆಯಾಗುವುದು ಸಂಪೂರ್ಣ ಅಸಾಂವಿಧಾನಿಕ. ಈ ಬಗ್ಗೆ ರಾಷ್ಟ್ರಪತಿ ಜತೆ ವಿಸ್ತೃತವಾಗಿ ಮಾತನಾಡಿದ್ದೇವೆ ಎಂದರು.

Editor: RAVI HEGDE, Printed and Published by **B.V. MALLIKARJUNAIAH** on behalf of Kannada Prabha Publications Ltd., No. 4-6-548/3, Pramod Towers, 1st floor, Karangalapady, Mangalore-575 003,
Printed at Manipal Media Network Ltd., Udayavani Building, Press Corner, Manipal-576 104. **Registered No. KA/BGGPO/2559/10-12**

Mangalore
Vol.26, No. 125
RNI Reg.No.KARKAN/2001/4073

ಸುದ್ದಿ ಸಿಂಚನ

ಬಯೋಕಾನ್‌ಗೆ ಕ್ಲೇರ್ ಮಜುಂದಾರ್ ಉತ್ತರಾಧಿಕಾರಿ




ನವದೆಹಲಿ: ಬೆಂಗಳೂರು ಮೂಲದ ಬಹುರಾಷ್ಟ್ರೀಯ ಬಯೋಟೆಕ್ ದಿಗ್ಗಜ ಕಂಪನಿ ಬಯೋಕಾನ್‌ನ ಸಂಸ್ಥಾಪಕಿ ಕಿರಣ್ ಮಜುಂದಾರ್ ಅವರು ತಮ್ಮ ಉತ್ತರಾಧಿಕಾರಿಯಾಗಿ ಸಂಬಂಧದಲ್ಲಿ ಸೋದರ ಸೊಸೆಯಾಗಿರುವ **ಕ್ಲೇರ್ ಮಜುಂದಾರ್** (37) ಅವರ ಹೆಸರು ಘೋಷಿಸಿದ್ದಾರೆ. ಕಿರಣ್ ಮಜುಂದಾರ್ (73) ಅವರಿಗೆ ಮಕ್ಕಳಿಲ್ಲದ ಹಿನ್ನೆಲೆಯಲ್ಲಿ ಸೊಸೆಯನ್ನೇ ಉತ್ತರಾಧಿಕಾರಿಯಾಗಿ ಘೋಷಿಸಿದ್ದಾರೆ. ಕ್ಲೇರ್ ಅವರ ನಾಯಕತ್ವ ಮತ್ತು ಅಂತಾರಾಷ್ಟ್ರೀಯ ಬಯೋಟೆಕ್ ವ್ಯವಹಾರ ಮುನ್ನಡೆಸುವ ಸಾಮರ್ಥ್ಯ ಮನಗಂಡು ಈ ನಿರ್ಧಾರ ತೆಗೆದುಕೊಂಡಿರುವುದಾಗಿ ತಿಳಿಸಿದ್ದಾರೆ.

ಪಿಐಎಲ್‌ಗಳು ಪ್ರಚಾರ ಹಿತಾಸಕ್ತಿ ಅರ್ಜಿಗಳಾಗಿ ಬದಲು: ಸುಪ್ರೀಂ ಕಿಡಿ

ನವದೆಹಲಿ: 'ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳು ಈಗ ಖಾಸಗಿ ಹಿತಾಸಕ್ತಿ , ಪ್ರಚಾರ ಹಿತಾಸಕ್ತಿ, ಪೈಸಾ ಹಿತಾಸಕ್ತಿ ಮತ್ತು ರಾಜಕೀಯ ಹಿತಾಸಕ್ತಿ ಅರ್ಜಿಗಳಾಗಿ ಮಾರ್ಪಟ್ಟಿವೆ' ಎಂದು ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ (ಪಿಐಎಲ್) ದುರುಪಯೋಗದ ಕುರಿತು ಸುಪ್ರೀಂ ಕೋರ್ಟ್ ಮಂಗಳವಾರ ಕಟುವಾಗಿ ಟೀಕಿಸಿದೆ. ಶಬರಿಮಲೆ ಅಯ್ಯಪ್ಪಸ್ವಾಮಿ ದೇಗುಲದಲ್ಲಿ ಮಹಿಳೆಯರಿಗೆ ಪ್ರವೇಶ ನಿರ್ಬಂಧವನ್ನು ಪ್ರಶ್ನಿಸಿ, ಭಾರತೀಯ ಯುವ ವಕೀಲರ ಸಂಘ ಪಿಐಎಲ್ ಸಲ್ಲಿಸಿತ್ತು. ಇದರ ವಿಚಾರಣೆ ಕೈಗೆತ್ತಿಕೊಂಡ ಮುಖ್ಯ ನ್ಯಾ. ಸೂರ್ಯಕಾಂತ್ ಹಾಗೂ ಇತರ 8 ನ್ಯಾಯಾಧೀಶರನ್ನೊಳಗೊಂಡ ಪೀಠ, 'ನೀವು ಈ ಪಿಐಎಲ್ ಅನ್ನು ಏಕೆ ಸಲ್ಲಿಸಿದ್ದೀರಿ? ನೀವು ದೇಶದ ಪ್ರಧಾನ ಅರ್ಚಕರೇ? ನಿಮ್ಮ ಸಂಘಕ್ಕೆ ಬೇರೆ ಕೆಲಸವಿಲ್ಲವೇ?' ಎಂದು ಕಟುವಾಗಿ ಪ್ರಶ್ನಿಸಿದೆ. 'ಕೋರ್ಟ್‌ಗಳು ಜನಸಾಮಾನ್ಯರ ಅಗತ್ಯ ಪೂರೈಸುವುದಕ್ಕಾಗಿ ಪಿಐಎಲ್ ವಿಚಾರಣೆ ನಡೆಸುತ್ತವೆ. ಇಂಥವುಗಳಿಗಾಗಿ ಅಲ್ಲ. ಪಿಐಎಲ್‌ಗಳು ಈಗ ಖಾಸಗಿ, ಪ್ರಚಾರ, ಹಣ ಮತ್ತು ರಾಜಕೀಯ ಹಿತಾಸಕ್ತಿ ಅರ್ಜಿಗಳಾಗಿ ಮಾರ್ಪಟ್ಟಿವೆ' ಎಂದು ಗರಂ ಆಗಿದೆ.

ಕೇರಳ ನಟ ನಾಯರ್ ರಸ್ತೆ ಅಪಘಾತದಲ್ಲಿ ಸಾವು



ಪಟ್ಟಣಂತಿಟ್ಟ: ಮಲಯಾಳಂ ಚಿತ್ರರಂಗದ ಖ್ಯಾತ ನಟ **ಸಂತೋಷ್ ನಾಯರ್** ಮಂಗಳವಾರ ಮುಂಜಾನೆ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಸಾವನ್ನಪ್ಪಿದ್ದಾರೆ. ಸಂತೋಷ್ ಹಾಗೂ ಅವರ ಪತ್ನಿ ಇದ್ದ ಕಾರು ಮಂಗಳವಾರ ಬೆಳಿಗ್ಗೆ 6.30ರ ಸುಮಾರಿಗೆ ಪಟ್ಟಣಂತಿಟ್ಟ ಜಿಲ್ಲೆಯ ಎನಾಥುವಿನಲ್ಲಿ ಅಪಘಾತಕ್ಕೀಡಾಗಿದೆ. ಈ ವೇಳೆ ಇಬ್ಬರೂ ಗಾಯಗೊಂಡಿದ್ದಾರೆ. ವಾಹನದ ಸ್ಟೇರಿಂಗ್‌ಗೆ ಸಂತೋಷ್ ಅವರ ಎದೆ ಬಡಿದ ಪರಿಣಾಮ ಗಂಭೀರವಾಗಿ ಗಾಯಗೊಂಡಿದ್ದ ಅವರು ಚಿಕಿತ್ಸೆ ಫಲಿಸದೇ ಸಾವನ್ನಪ್ಪಿದ್ದಾರೆ. 1982ರಲ್ಲಿ ಚಿತ್ರರಂಗ ಪ್ರವೇಶಿಸಿದ ನಾಯರ್ ನಾಯಕ, ಖಳನಾಯಕ ಮತ್ತು ಪೋಷಕ ಪಾತ್ರಗಳು ಸೇರಿದಂತೆ 100 ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ್ದಾರೆ.

ಇಂಡಿಗೋ ವಿಮಾನದಲ್ಲಿ ಪವರ್ ಬ್ಯಾಂಕ್‌ಗೆ ಬೆಂಕಿ

ಚಂಡೀಗಢ: ಚಂಡೀಗಢ ವಿಮಾನ ನಿಲ್ದಾಣದಲ್ಲಿ ಹೈದರಾಬಾದ್‌ಗೆ ಹೊರಡಲು ನಿಂತಿದ್ದ ಇಂಡಿಗೋ ವಿಮಾನದಲ್ಲಿ ಪ್ರಯಾಣಿಕರೊಬ್ಬರ ಪವರ್ ಬ್ಯಾಂಕ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಮುಂಜಾಗ್ರತಾ ಕ್ರಮವಾಗಿ ಪ್ರಯಾಣಿಕರನ್ನು ಅಲ್ಲಿಂದ ತೆರವುಗೊಳಿಸಲಾಯಿತು. ಪವರ್ ಬ್ಯಾಂಕ್‌ನಲ್ಲಿ ಬೆಂಕಿ ಹತ್ತಿಕೊಳ್ಳುತ್ತಿದ್ದಂತೆ ಓವರ್ ಹೆಡ್‌ಬಿನ್‌ಗಳಲ್ಲಿ ಹೊಗೆ ಕಾಣಿಸಿಕೊಂಡಿದೆ. ಆದರೆ ಘಟನೆಯಲ್ಲಿ ಯಾವುದೇ ಪ್ರಯಾಣಿಕರಿಗೆ ಗಾಯವಾಗಿಲ್ಲ.

ವಾಣಿಜ್ಯ ಎಲ್ಪಿಜಿ ದರ ಏರಿಕೆ ಖಂಡಿಸಿ ಇಂದು ಕೇರಳದಲ್ಲಿ ಹೋಟೆಲ್, ಬೇಕರಿ ಬಂದ್

ತಿರುವನಂತಪುರ: ಕೇಂದ್ರ ಸರ್ಕಾರ ವಾಣಿಜ್ಯ ಅಡುಗೆ ಅನಿಲ ದರವನ್ನು 993 ರು.ನಷ್ಟು ಏರಿಕೆ ಮಾಡಿರುವುದನ್ನು ಖಂಡಿಸಿ ಮೇ 6ಕ್ಕೆ ಕೇರಳ ರಾಜ್ಯಾದ್ಯಂತ ಹೋಟೆಲ್‌ಗಳು, ರೆಸ್ಟೋರೆಂಟ್‌ಗಳು, ಬೇಕರಿ ಮತ್ತು ಕ್ಯಾಂಟೀನ್‌ಗಳು ಬಂದ್ ಆಚರಿಸಲಿವೆ. ಈ ಕುರಿತು ಮಂಗಳವಾರ ಮಾಹಿತಿ ನೀಡಿರುವ ಕೇರಳ ಹೋಟೆಲ್ ಮತ್ತು ರೆಸ್ಟೋರೆಂಟ್ ಸಂಘ (ಕೆಎಚ್‌ಆರ್‌ಎ), ದಿನದ ಮಟ್ಟಿಗೆ ಆನ್‌ಲೈನ್ ಆಹಾರ ವಿತರಣಾ ಸೇವೆಯೂ ಸ್ಥಗಿತಗೊಳ್ಳಲಿದೆ. ಬೆಲೆ ಏರಿಕೆ ವಿರೋಧಿಸಿ ರಾಜ್ಯಾದ್ಯಂತ ಎಲ್ಲ ಸರ್ಕಾರಿ ಕಚೇರಿಗಳು ಮತ್ತು ಪೆಟ್ರೋಲಿಯಂ ಕಂಪನಿಗಳ ಕಚೇರಿಗಳ ಮುಂದೆ ಧರಣಿ ಹಾಗೂ ಪ್ರತಿಭಟನಾ ಮೆರವಣಿಗೆ ನಡೆಸಲಾಗುವುದು ಎಂದು ಹೇಳಿದೆ. ಎರ್ನಾಕುಲಂನ ತೈಲ ನಿಗಮ ಕಚೇರಿ ಸೇರಿ ನಿಗಮದ ಎಲ್ಲಾ ಜಿಲ್ಲಾ ಕೇಂದ್ರ ಕಚೇರಿಗಳ ಮುಂದೆ ಪ್ರತಿಭಟಿಸಲಾಗುತ್ತದೆ.

ಇಂಡಿಯಾ ಮೈತ್ರಿಕೂಟದ ಸ್ಥಿತಿ ಇದೀಗ ಡೋಲಾಯಮಾನ!


ಮಮತಾ ಬ್ಯಾನರ್ಜಿ, ಸ್ಟಾಲಿನ್ ಪರಾಜಯದ ಹಿನ್ನೆಲೆ | ವಿಪಕ್ಷಗಳ ಕೂಟವನ್ನು ಮುನ್ನಡೆಸುವ ಪ್ರಬಲ ನಾಯಕರಿಲ್ಲದೆ ಪರದಾಟ

ನವದೆಹಲಿ: ಪಂಚರಾಜ್ಯ ಚುನಾವಣೆಯಲ್ಲಿ ಡಿಎಂಕೆ ಹಾಗೂ ಟಿಎಂಸಿ ಸೋಲಿನೊಂದಿಗೆ ಪ್ರತಿಪಕ್ಷಗಳ ಇಂಡಿಯಾ ಕೂಟದ ಸ್ಥಿತಿ ಡೋಲಾಯಮಾನವಾಗಿದೆ. ಈವರೆಗೆ ಡಿಎಂಕೆ ನಾಯಕ ಹಾಗೂ ತಮಿಳುನಾಡು ಸಿಎಂ ಎಂ.ಕೆ. ಸ್ಟಾಲಿನ್ ಮತ್ತು ಟಿಎಂಸಿ ನಾಯಕಿಯೂ ಆದ ಪ.ಬಂಗಾಳ ಸಿಎಂ ಮಮತಾ ಬ್ಯಾನರ್ಜಿ ಕೂಟದ ಮುಂದಾಳು ಎನ್ನಿಸಿಕೊಂಡಿದ್ದರು. ಪ್ರಮುಖ ವಿಷಯಗಳಲ್ಲಿ ಖುದ್ದು ಕೇಂದ್ರ ಸರ್ಕಾರ ಮತ್ತು ಬಿಜೆಪಿ ವಿರುದ್ಧ ಹೋರಾಡುತ್ತಿದ್ದರು. ಅತ್ತ ಕೇರಳದ ಎಡರಂಗ ಸಿಎಂ ಪಿಣರಾಯಿ ವಿಜಯನ್ ಅವರೂ ಕೇಂದ್ರದ ವಿರುದ್ಧ ದನಿ ಎತ್ತುತ್ತಿದ್ದರು. ಅವರ ಪರಾಜಯವು ಇಂಡಿಯಾ ಕೂಟಕ್ಕೆ ಮರ್ಮಾಘಾತ ತರಿಸಿದೆ.

ಈಗಾಗಲೇ ಆಪ್ ಸೇರಿ ಕೆಲವು ಪಕ್ಷಗಳು ಇಂಡಿಯಾ ಕೂಟದಿಂದ ದೂರ ಉಳಿದಿವೆ. ಎನ್‌ಸಿ ಅಧ್ಯಕ್ಷ ಹಾಗೂ ಕಾಶ್ಮೀರ ಸಿಎಂ ಒಮರ್ ಅಬ್ದುಲ್ಲಾ ಆಗಾಗ ಇಂಡಿಯಾ ಕೂಟದ ವಿರುದ್ಧ ದನಿ ಎತ್ತುತ್ತಿರುತ್ತಾರೆ.

ಟಿಎಂಸಿ ಸೋಲಿಗೆ ಸಂಭ್ರಮ ಬೇಡ: ರಾಗಾ

ಸಂಭ್ರಮಿಸುತ್ತಿದ್ದ ಕಾಂಗ್ರೆಸ್ ನಾಯಕರಿಗೆ ವಿಪಕ್ಷ ನಾಯಕನ ಕ್ಲಾಸ್



ನವದೆಹಲಿ: ಪಶ್ಚಿಮ ಬಂಗಾಳದಲ್ಲಿ 15 ವರ್ಷಗಳ ದೀದಿ ಆಡಳಿತಕ್ಕೆ ತೆರೆ ಎಳೆದು, ಇತ್ತ ಅಸ್ಸಾಂನಲ್ಲಿ ಮತ್ತೆ ಸರ್ಕಾರ ರಚಿಸುವ ಹುಮ್ಮಸ್ಸಿನಲ್ಲಿರುವ ಬಿಜೆಪಿ ವಿರುದ್ಧ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ತೀವ್ರ ವಾಗ್ದಾಳಿ ನಡೆಸಿದ್ದಾರೆ. ಇದೇ ವೇಳೆ ಟಿಎಂಸಿ ಗೆಲುವಿಗೆ ಸಂಭ್ರಮಿಸುತ್ತಿರುವ ತಮ್ಮದೇ ಕಾಂಗ್ರೆಸ್ಸಿಗರಿಗೆ ಬುದ್ಧಿಮಾತು ಹೇಳಿದ್ದಾರೆ.

'ಬಂಗಾಳದಲ್ಲಿ ಟಿಎಂಸಿ ಸೋಲಿಗೆ ಕಾಂಗ್ರೆಸ್‌ನವರು ಸೇರಿದಂತೆ ಕೆಲವರು ಸಂಭ್ರಮಿಸುತ್ತಿದ್ದಾರೆ. ಅಸಲಿಯತ್ತೇನೆಂದರೆ, ಎರಡೂ ರಾಜ್ಯಗಳಲ್ಲಿ ಬಿಜೆಪಿ ಜನಾದೇಶದ ಕಳ್ಳತನ ಮಾಡಿದೆ. ಇದು ದೇಶದ ಪ್ರಜಾಪ್ರಭುತ್ವವನ್ನು ನಾಶ ಮಾಡುವ ಕಡೆಗಿನ ಅವರ ದೊಡ್ಡ ಹೆಜ್ಜೆ' ಎಂದು ಆರೋಪಿಸಿದ್ದಾರೆ. ಜತೆಗೆ, 'ರಾಜಕೀಯವನ್ನು ಬದಿಗಿಟ್ಟು ನೋಡಿ, ಇದು ಒಂದು ಪಕ್ಷದ ವಿಷಯವಲ್ಲ, ಇಡೀ ದೇಶದ ವಿಷಯ' ಎಂದಿದ್ದಾರೆ. ಇದೇ ವೇಳೆ ತಮಿಳುನಾಡಿನಲ್ಲಿ ಹೀನಾಯಕ ಸೋಲುಂಡಿರುವ ಡಿಎಂಕೆಗೆ ರಾಹುಲ್ ಬೆಂಬಲ ವ್ಯಕ್ತಪಡಿಸಿದ್ದಾರೆ.

ಪುನಃ ಟಿಎಂಸಿ ಕಚೇರಿಗಳ ಮೇಲೆ ಭಾರಿ ದಾಳಿ



ಕೋಲ್ಕತಾ: ಒಂದು ಕಡೆ ಬಿಜೆಪಿ ಪಶ್ಚಿಮ ಬಂಗಾಳದಲ್ಲಿನ ತನ್ನ ಭರ್ಜರಿ ಗೆಲುವನ್ನು ಸಂಭ್ರಮಿಸುತ್ತಿದ್ದರೆ, ಇನ್ನೊಂದು ಕಡೆ ಅಧಿಕಾರದಿಂದ ನಿರ್ಗಮಿಸುತ್ತಿರುವ ಟಿಎಂಸಿಯ ಕಚೇರಿಗಳನ್ನು ಧ್ವಂಸಗೊಳಿಸಲಾದ ಘಟನೆಗಳು ಹಲವು ಕಡೆ ಮಂಗಳವಾರವೂ ವರದಿಯಾಗಿವೆ. ಮರುಮತದಾನ ನಡೆಯಬೇಕಿರುವ ಫಾಲ್ಟಾದಲ್ಲಿರುವ ಟಿಎಂಸಿ ನಾಯಕ ಜಹಾಂಗಿರ್ ಖಾನ್‌ರ ಕಚೇರಿಯನ್ನೂ ಧ್ವಂಸ ಮಾಡಲಾಗಿದೆ. ಕೆಲಕಡೆಗಳಲ್ಲಿ ಕಚೇರಿಗಳೊಳಗೆ ನುಗ್ಗಿದ ಗುಂಪುಗಳು ಅಲ್ಲಿರುವ ವಸ್ತುಗಳನ್ನು ಹಾಳುಗೆಡವಿದರೆ, ಇನ್ನೂ ಕೆಲವೆಡೆ ಕಟ್ಟಡಕ್ಕೆ ಬೆಂಕಿ ಹಚ್ಚಿದ್ದಾರೆ.

ಮತ ಎಣಿಕೆ ನಡೆಯುತ್ತಿದ್ದ ಸೋಮವಾರ ಮಧ್ಯಾಹ್ನವೇ ಟಾಲಿಗಂಜ್, ಕಸ್ಬಾ, ಬಾರುಯ್ಪುರ್, ಕಮರಹಾಟಿ, ಬಾರಾನಗರ, ಹೌರಾ, ಬಹರಾಂಪುರ್‌ನಲ್ಲಿರುವ ಟಿಎಂಸಿ ಕಚೇರಿಗಳಲ್ಲಿ ಇಂತಹ ಘಟನೆಗಳಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ.


ಟೀಕೆ, ನಿಂದನೆ, ಅಪಹಾಸ್ಯ ಎದುರಿಸಿ ಗೆದ್ದೆ: ವಿಜಯ್

ಜನರು ಹಣದ ಶಕ್ತಿ ತಿರಸ್ಕರಿಸಿದ್ದಾರೆ | ಜಯದ ಬಳಿಕ ಟಿವಿಕೆ ನಾಯಕನ ಮೊದಲ ನುಡಿ | ಅಭಿನಂದಿಸಿದ ಮೋದಿಗೂ ಕೃತಜ್ಞತೆ

ಚೆನ್ನೈ: 'ಆರಂಭದಿಂದಲೂ ಅಪಹಾಸ್ಯ ಮತ್ತು ಟೀಕೆಗಳನ್ನು ಎದುರಿಸುತ್ತಿದ್ದರೂ, ಟಿವಿಕೆ ಪಕ್ಷವು ಜನರನ್ನು ಮಾತ್ರ ಅವಲಂಬಿಸಿ ಸ್ಥಿರವಾಗಿ ಉಳಿಯಿತು' ಎಂದು ಟಿವಿಕೆ ನಾಯಕ ಹಾಗೂ ನಟ ವಿಜಯ್ ಹೇಳಿದ್ದಾರೆ. ಈ ಮೂಲಕ ಚುನಾವಣೆ ಗೆದ್ದ ಬಳಿಕ ಜನತೆಗೆ ಮೊದಲ ಬಾರಿ ಧನ್ಯವಾದ ಸಲ್ಲಿಸಿದ್ದಾರೆ.

ಟ್ವೀಟ್ ಮಾಡಿರುವ ಅವರು, 'ಟೀಕೆ, ಅವಮಾನ ಮತ್ತು ನಿಂದೆಗಳ ಹೊರತಾಗಿಯೂ, ತಮಿಳುನಾಡಿನ ಜನರು ಅಚಲವಾದ ಪ್ರೀತಿಯಿಂದ ಪಕ್ಷದ ಪರವಾಗಿ ನಿಂತರು. ಈ ಜನಾದೇಶವು ಮತದಾರರ ಆಳವಾದ ಭಾವನಾತ್ಮಕ ವಿಶ್ವಾಸವನ್ನು ತೋರಿಸಿದೆ. ರಾಜ್ಯ ರಾಜಕೀಯ ಸಂಸ್ಕೃತಿಯ ಮೇಲೆ ದೀರ್ಘಕಾಲ ಪ್ರಭಾವ ಬೀರಿರುವ ಹಣದ ಶಕ್ತಿಯನ್ನು ಜನ ತಿರಸ್ಕರಿಸುವುದನ್ನು ಇದು ಸೂಚಿಸುತ್ತದೆ' ಎಂದಿದ್ದಾರೆ.

ಅಭಿನಂದಿಸಿದ ಮೋದಿಗೆ ಧನ್ಯವಾದ: ವಿಜಯ್ ನೇತೃತ್ವದ ಟಿವಿ ಪಕ್ಷಕ್ಕೆ ಪ್ರಧಾನಿ ನರೇಂದ್ರ ಮೋದಿ ಸೋಮವಾರ ಅಭಿನಂದನೆ ಸಲ್ಲಿಸಿದ್ದಾರೆ. ಇದಕ್ಕೆ ವಿಜಯ್ ಕೂಡ ಧನ್ಯವಾದ ಸಮರ್ಪಿಸಿದ್ದಾರೆ.



ಚೆನ್ನೈನಲ್ಲಿ ಮಹನೀಯರ ಪುತ್ಥಳಿಗೆ ವಿಜಯ್ ಗೌರವಾರ್ಪಣೆ.

ಕೇವಲ 1 ಮತದಿಂದ ಡಿಎಂಕೆಯ ಪೆರಿಯಕಾರುಪ್ಪನ್ ಸೋಲು


ತಿರುಪ್ಪತ್ತೂರು (ತಮಿಳುನಾಡು): ತಮಿಳುನಾಡಿನ ತಿರುಪ್ಪತ್ತೂರು ಕ್ಷೇತ್ರದ ಡಿಎಂಕೆ ಅಭ್ಯರ್ಥಿ, ಸಚಿವ ಕೆ.ಆರ್. ಪೆರಿಯಕರುಪ್ಪನ್ ಟಿವಿಕೆಯ ಶ್ರೀನಿವಾಸ ಸೇತುಪತಿ ವಿರುದ್ಧ ಕೇವಲ 1 ಮತದಿಂದ ಸೋತಿದ್ದಾರೆ. ಪೆರಿಯಕರುಪ್ಪನ್ ಅಂತಿಮ ಸುತ್ತಿನ ವರೆಗೂ 30 ಮತದ ಮುನ್ನಡೆಯಲ್ಲಿದ್ದರು. ಆದರೆ ಕೊನೆಗೆ ಸೇತುಪತಿ 83,375, ಪೆರಿಯಕರುಪ್ಪನ್ 83,374 ಮತ ಪಡೆದಿದ್ದಾರೆ.

ಸಿನಿಮಾದಲ್ಲಿ ವಿಜಯ್ ಕಾರಿನ ನಂಬರ್ ಪ್ಲೇಟ್ ಸಿಎಂ 2026!



ಚೆನ್ನೈ: ತಮಿಳುನಾಡು ಸಿಎಂ ಆಗಲು ಕಾತರರಾಗಿರುವ ನಟ ವಿಜಯ್ 2024ರಲ್ಲೇ ಈ ಕನಸು ಹೊಂದಿದ್ದರು. ಚಿತ್ರವೊಂದರಲ್ಲಿ ಅವರ ಕಾರಿನ ನಂಬರ್‌ಪ್ಲೇಟ್ ಟಿಎನ್ 07 ಸಿಎಂ 2026 ಎಂದು ಇತ್ತು ಎಂಬ ವಿಡಿಯೋ ವೈರಲ್ ಆಗಿದೆ. ಅರ್ಥಾತ್ 2026ರಲ್ಲಿ ತಾವು ಸಿಎಂ ಆಗಬೇಕು ಎಂದು ಟಿಎಂಕೆ ಪಕ್ಷದ ಸ್ಥಾಪಕ ಕನಸು ಹೊತ್ತಿದ್ದರು ಎಂಬ ವಿಶ್ಲೇಷಣೆಗಳು ಕೇಳಿಬಂದಿವೆ.

ಬಂಗಾಳ ಬಿಜೆಪಿ ಗೆಲುವಿಗಾಗಿ ಮೋದಿಗೆ ಟ್ರಂಪ್ ಅಭಿನಂದನೆ




ವಾಷಿಂಗ್ಟನ್: 'ಪ.ಬಂಗಾಳ ಸೇರಿ 3 ಕಡೆ ಬಿಜೆಪಿ ವಿಧಾನಸಭೆ ಚುನಾವಣೆ ಗೆದ್ದಿದೆ. ಹೀಗಾಗಿ ಪ್ರಧಾನಿ ನರೇಂದ್ರ ಮೋದಿಯವರ ಐತಿಹಾಸಿಕ ಮತ್ತು ನಿರ್ಣಾಯಕ ಚುನಾವಣಾ ಗೆಲುವಿಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅಭಿನಂದನೆ ಸಲ್ಲಿಸಿದ್ದಾರೆ' ಎಂದು ಶ್ವೇತಭವನದ ವಕ್ತಾರರು ಮಂಗಳವಾರ ತಿಳಿಸಿದ್ದಾರೆ.

'ಕಳೆದ ತಿಂಗಳು ಅವರ ದೂರವಾಣಿ ಕರೆಯಲ್ಲಿ, ಅಧ್ಯಕ್ಷ ಟ್ರಂಪ್ ಪ್ರಧಾನಿ ಮೋದಿಯವರಿಗೆ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದ್ದರು ಮತ್ತು ಅವರನ್ನು ನಾಯಕರನ್ನಾಗಿ ಪಡೆದಿರುವುದು ಭಾರತ ಎಷ್ಟು ಅದೃಷ್ಟ ಮಾಡಿದೆ ಎಂದಿದ್ದರು. ಇದೀಗ ಐತಿಹಾಸಿಕ ಮತ್ತು ನಿರ್ಣಾಯಕ ಚುನಾವಣಾ ಗೆಲುವಿಗಾಗಿ ರಾಷ್ಟ್ರಪತಿಗಳು ಪ್ರಧಾನಿ ಮೋದಿಯವರನ್ನು ಅಭಿನಂದಿಸಿದ್ದಾರೆ' ಎಂದು ಶ್ವೇತಭವನದ ವಕ್ತಾರ ಕುಶ್ ದೇಸಾಯಿ ಪಿಟಿಐಗೆ ತಿಳಿಸಿದ್ದಾರೆ.

ಕೇರಳ: 6 ಕ್ಷೇತ್ರಗಳಲ್ಲಿ ಬಿಜೆಪಿ 2ನೇ ಸ್ಥಾನಕ್ಕೆ ಜಿಗಿತ

ಈ ಕ್ಷೇತ್ರಗಳಲ್ಲಿ ಕಳೆದ ಬಾರಿಗಿಂತ ಬಲವರ್ಧನೆ | ಶೇಕಡಾವಾರು ಮತಗಳಿಕೆ ಕೂಡ ಹೆಚ್ಚಳ!



ತಿರುವನಂತಪುರಂ: ಪಕ್ಷದ ರಾಜ್ಯಾಧ್ಯಕ್ಷ **ರಾಜೀವ್ ಚಂದ್ರಶೇಖರ್** ನೇತೃತ್ವದಲ್ಲಿ ಕೇರಳದಲ್ಲಿ 3 ಸ್ಥಾನಗಳನ್ನು ತನ್ನದಾಗಿಸಿಕೊಳ್ಳುವ ಮೂಲಕ ಐತಿಹಾಸಿಕ ಜಯವನ್ನು ಗಳಿಸಿರುವ ಬಿಜೆಪಿ, 6 ಕ್ಷೇತ್ರಗಳಲ್ಲಿ 2ನೇ ಸ್ಥಾನ ಪಡೆಯುವಲ್ಲಿ ಯಶಸ್ವಿಯಾಗಿದೆ. ಈ ಮೂಲಕ, ದಶಕದ ಹಿಂದಷ್ಟೇ ರಾಜ್ಯದಲ್ಲಿ ಖಾತೆ ತೆರೆದಿದ್ದ ಪಕ್ಷ ಈ ಬಾರಿ ಉತ್ತಮ ಪ್ರದರ್ಶನ ನೀಡಿದೆ.

ತಿರುವಳ್ಳ, ಪಾಲಕ್ಕಾಡ್, ಮಲಂಪುಳ, ಅಟ್ಟಿಂಗಲ್, ಕಾಸರಗೋಡು ಮತ್ತು ಮಂಜೇಶ್ವರದಲ್ಲಿ 2ನೇ ಸ್ಥಾನ ಪಡೆದಿರುವ ಬಿಜೆಪಿ, ಕಳೆದ ಬಾರಿಯ ಚುನಾವಣೆಗೆ ಹೋಲಿಸಿದರೆ ಎಲ್ಲಾ ಕ್ಷೇತ್ರಗಳಲ್ಲಿ ಶೇಕಡವಾರು ಮತದಲ್ಲಿ ಭಾರೀ ಸುಧಾರಣೆ ಕಂಡಿದೆ.

ನೇಮಂನಿಂದ ಪಕ್ಷದ ರಾಜ್ಯಾಧ್ಯಕ್ಷ ರಾಜೀವ್ ಚಂದ್ರಶೇಖರ್, ಚಾತನ್ನೂರ್‌ನಿಂದ ಬಿ.ಬಿ. ಗೋಪಕುಮಾರ್, ಕಳಕ್ಕೂಟ್ಟಂನಿಂದ ವಿ. ಮುರಳೀಧರನ್ ಜಯಗಳಿಸಿ ಶಾಸಕರಾಗಿದ್ದಾರೆ.

ಸರ್ಕಾರ ರಚನೆ ಕಸರತ್ತು

ತಿರುವನಂತಪುರ: ಕೇರಳದಲ್ಲಿ ಯುಡಿಎಫ್ ಗೆದ್ದಿರುವ ಕಾರಣ ಸರ್ಕಾರ ರಚನೆ ಪ್ರಕ್ರಿಯೆ ಬಿರುಸು ಪಡೆದಿದೆ. ಕಾಂಗ್ರೆಸ್ ನಾಯಕರಾದ ವಿ.ಡಿ. ಸತೀಶನ್, ಕೆ.ಸಿ. ವೇಣುಗೋಪಾಲ್ ಹಾಗೂ ರಮೇಶ್ ಚೆನ್ನಿತ್ತಲ ಸ್ಪರ್ಧೆಯಲ್ಲಿದ್ದಾರೆ. ಈ ನಡುವೆ ಸಿಎಂ ಪಿಣರಾಯಿ ರಾಜೀನಾಮೆ ನೀಡಿದ್ದಾರೆ.

ಬಲ ವರ್ಧನೆ: ತಿರುವಳ್ಳದಲ್ಲಿ ಬಿಜೆಪಿಯ ರಾಜ್ಯ ಪ್ರಧಾನ ಕಾರ್ಯದರ್ಶಿ ಅನೂಪ್ ಆಂಟೋನಿ 43,078 ಮತಗಳೊಂದಿಗೆ ಎರಡನೇ ಸ್ಥಾನ ಪಡೆದರು ಮತ್ತು ಕೇರಳ ಕಾಂಗ್ರೆಸ್ (ಕೆಇಸಿ) ನ ವಕೀಲ ವರ್ಗೀಸ್ ಮಾಮೆನ್ ವಿರುದ್ಧ 10,146 ಮತಗಳ ಅಂತರದಿಂದ ಸೋತರು. 2021 ರಲ್ಲಿ, ಬಿಜೆಪಿ ಶೇಕಡಾ 16.25 ಮತಗಳನ್ನು ಪಡೆದು ಮೂರನೇ ಸ್ಥಾನದಲ್ಲಿತ್ತು, ಆದರೆ ಈ ಬಾರಿ ಅದು ಶೇಕಡಾ 30.61 ರಷ್ಟು ಮತಗಳನ್ನು ಪಡೆದುಕೊಂಡಿದೆ.

ಪಾಲಕ್ಕಾಡ್‌ನಲ್ಲಿ, ಪಕ್ಷದ ಹಿರಿಯ ಫೈರ್‌ಬ್ರ್ಯಾಂಡ್ ನಾಯಕಿ ಶೋಭಾ ಸುರೇಂದ್ರನ್, ಯುಡಿಎಫ್‌ನ ರಮೇಶ್ ಪಿಶಾರಡಿ ವಿರುದ್ಧ 13,147 ಮತಗಳಿಂದ ಸೋತರು. ಅವರು 49,052 ಮತಗಳನ್ನು ಪಡೆದರೆ, ಪಿಶಾರಡಿ 62,199 ಮತಗಳನ್ನು ಪಡೆದರು. 2024 ರಲ್ಲಿ, ಬಿಜೆಪಿ ಶೇ.28.80 ರಷ್ಟು ಮತ ಪಾಲನ್ನು ಹೊಂದಿತ್ತು, ಆದರೆ ಈ ಬಾರಿ ಪಕ್ಷವು ಶೇ.33.33ರಷ್ಟು ಮತ ಗಳಿಸಿದೆ

ಅಟ್ಟಿಂಗಲ್‌ನಲ್ಲಿ ವಕೀಲ ಪಿ.ಸುಧೀರ್ 45,788 ಮತ ಪಡೆದು 13,375 ಮತಗಳ ಅಂತರದಿಂದ ಸಿಪಿಎಂ ಎದುರು 2ನೇ ಸ್ಥಾನ ಪಡೆದರು. 2021ರಲ್ಲಿ ಇಲ್ಲಿ ಬಿಜೆಪಿಗೆ 25.92 ಮತ ಬಂದಿತ್ತು. ಈ ಬಾರಿ ಶೇ 30.54 ರಷ್ಟು ಮತಗಳನ್ನು ಪಡೆದುಕೊಂಡಿದೆ.

ಸಿ ಕೃಷ್ಣಕುಮಾರ್, ಅಶ್ವಿನಿ ಎಂಎಲ್ ಮತ್ತು ಕೆ ಸುರೇಂದ್ರನ್ ಕ್ರಮವಾಗಿ ಮಲಂಪುಳ, ಕಾಸರಗೋಡು ಮತ್ತು ಮಂಜೇಶ್ವರದಲ್ಲಿ 2ನೇ ಸ್ಥಾನ ಪಡೆದರೂ ವಿಜೇತರಿಗಿಂತ ಸುಮಾರು 20,000 ಮತಗಳ ಅಂತರದಿಂದ ಹಿಂದೆ ಬಿದ್ದಿದ್ದಾರೆ. ಆದಾಗ್ಯೂ, 2021ರ ಚುನಾವಣೆಗೆ ಹೋಲಿಸಿದರೆ ಮತದ ಪಾಲು ಹೆಚ್ಚಿಸಲು ಸಾಧ್ಯವಾಗಿಲ್ಲ.

ಪ. ಬಂಗಾಳ ಬಿಜೆಪಿ ಗೆಲುವು ವಿದೇಶಿ ಮಾಧ್ಯಮದಲ್ಲೂ ಸುದ್ದಿ

ನಟ ವಿಜಯ್ ಪಕ್ಷದ ಜಯಭೇರಿ ಬಗ್ಗೆಯೂ ಉಲ್ಲೇಖ

ನವದೆಹಲಿ: ಬಂಗಾಳ ಸೇರಿ 3 ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿಯ ಅಭೂತಪೂರ್ವ ಗೆಲುವು ಭಾರತ ಮಾತ್ರವಲ್ಲದೆ ಅಂತಾರಾಷ್ಟ್ರೀಯ ಮಾಧ್ಯಮಗಳಲ್ಲೂ ವರದಿಯಾಗಿದೆ. ಮುಖ್ಯವಾಗಿ ಪಶ್ಚಿಮ ಬಂಗಾಳದಲ್ಲಿ 15 ವರ್ಷಗಳ ಮಮತಾ ಬ್ಯಾನರ್ಜಿ ಆಡಳಿತವನ್ನು ಕೊನೆಗೊಳಿಸಿದ ಬಿಜೆಪಿ ಸಾಧನೆ ಕುರಿತು ವಿಶೇಷ ಒತ್ತು ನೀಡಿ ವರದಿ ಪ್ರಕಟಿಸಲಾಗಿದೆ.

ಲಂಡನ್‌ನಿಂದ ನ್ಯೂಯಾರ್ಕ್, ಇಸ್ಲಾಮಾಬಾದ್‌ನಿಂದ ಢಾಕಾ ವರೆಗೆ ಹಲವು ಪತ್ರಿಕೆಗಳು ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಸಾಧನೆ ಹಾಗೂ ತಮಿಳು ನಟ ವಿಜಯ್ ಪಕ್ಷ ಕಟ್ಟಿ 2 ವರ್ಷದೊಳಗೆ ಆಡಳಿತಾರೂಢ ಡಿಎಂಕೆ ಪಕ್ಷವನ್ನು ಕೆಡವಿದ ಕುರಿತು ವರದಿ ಪ್ರಕಟಿಸಿವೆ.



'ಮೋದಿ ಅವರ ಬಿಜೆಪಿಯು ಭಾರತದ ಕಠಿಣ ರಾಜಕೀಯ ಕ್ಷೇತ್ರವಾದ ಬಂಗಾಳವನ್ನು ಗೆದ್ದಿದೆ' ಎಂಬ ಹೆಡ್‌ಲೈನ್‌ನಲ್ಲಿ ಬಿಬಿಸಿ, ಬಂಗಾಳದ ಬಿಜೆಪಿ ಗೆಲುವಿನ ವರದಿ ಮಾಡಿದೆ. ನ್ಯೂಯಾರ್ಕ್ ಟೈಮ್ಸ್, 'ಮೋದಿ ಅವರ ಹಿಂದೂ ರಾಷ್ಟ್ರೀಯವಾದಿಗಳು ಭಾರತದ ಪ್ರತಿಪಕ್ಷಗಳ ಭದ್ರಕೋಟೆಯನ್ನು ಗೆದ್ದಿದ್ದಾರೆ' ಎಂಬ ಹೆಡ್‌ಲೈನ್‌ನಡಿ ವರದಿ ಪ್ರಕಟಿಸಿದೆ. ದಿ ವಾಷಿಂಗ್ಟನ್ ಪೋಸ್ಟ್ ಪತ್ರಿಕೆ, ಪಾಕ್‌ನ ಡಾನ್, ಬಾಂಗ್ಲಾದ ಢಾಕಾ ಟ್ರಿಬ್ಯೂನ್ ಇಂಥದ್ದೇ ವರದಿ ಪ್ರಕಟಿಸಿವೆ.

ಯುರೋಪ್ ಟು ಆಫ್ರಿಕಾ ಈಜಿ ಮಿಲಿಂದ್ ಸಾಧನೆ!

ಜಿಬ್ರಾಲ್ಟರ್ ಜಲಸಂಧಿ ಮೂಲಕ 15 ಕಿ.ಮೀ. ಈಜಿದ 60ರ ಹರೆಯದ ಸಾಧಕ ಸೋಮನ್!

ಮುಂಬೈ: ಜಿಬ್ರಾಲ್ಟರ್ ಜಲಸಂಧಿಯ ಮೂಲಕ ಯುರೋಪ್‌ನಿಂದ ಆಫ್ರಿಕಾದ ವರೆಗೆ 15 ಕಿ.ಮೀ. ಈಜುವ ಮೂಲಕ ನಟನೂ ಆಗಿರುವ 60 ವರ್ಷದ ಮಿಲಿಂದ್ ಸೋಮನ್ ಸಾಧನೆ ಮಾಡಿದ್ದಾರೆ. ಈ ಬಗ್ಗೆ ಅವರು ಇನ್‌ಸ್ಟಾಗ್ರಾಂನಲ್ಲಿ ಮಾಹಿತಿ ಹಂಚಿಕೊಂಡಿದ್ದು, ಭಾರೀ ಮೆಚ್ಚುಗೆ ಗಳಿಸುತ್ತಿದ್ದಾರೆ.

ಸ್ಪೇನ್‌ನ ತರಿಫಾ ಎಂಬಲ್ಲಿಂದ ಮೇ 1ರಂದು ಈಜನ್ನು ಆರಂಭಿಸಿದ ಮಿಲಿಂದ್, ಮೊರೊಕ್ಕೋದಲ್ಲಿ ತಮ್ಮ ಈ ಪಯಣವನ್ನು ಕೊನೆಗೊಳಿಸಿದ್ದಾರೆ. ಈ ಹಾದಿಯಲ್ಲಿ ಅಪಾಯಕಾರಿ ಅಲೆಗಳು ಏಳುವುದರ ಜತೆಗೆ ಹವಾಮಾನವೂ ಅನಿರೀಕ್ಷಿತವಾಗಿ ಬದಲಾಗುವ ಅಪಾಯವಿರುತ್ತದೆ. ಇದನ್ನು ದಾಟಿ ಬಂದಿರುವ ಮಿಲಿಂದ್, ತಮ್ಮ ಅನುಭವವನ್ನು ಅತ್ಯದ್ಭುತ ಎಂದು ವರ್ಣಿಸಿದ್ದಾರೆ.

ಸ್ಕಾಟ್‌ಲೆಂಡ್‌ನ ಗ್ಲಾಸ್‌ಗೋನಲ್ಲಿ ಜನಿಸಿದ್ದ ಸೋಮನ್, 7 ವರ್ಷದವರಿದ್ದಾಗ ಅವರ ಪರಿವಾರ ಮಹಾರಾಷ್ಟ್ರದ ಮುಂಬೈಗೆ ಬಂದು ನೆಲೆಯೂರಿತು. ಅವರ ವಿದ್ಯಾಭ್ಯಾಸವೂ ಮುಂಬೈನಲ್ಲೇ ಆಗಿದೆ. ಇವರು 10 ವರ್ಷದವರಿದ್ದಾಗಲೇ ಈಜು ಕಲಿತು ಅದನ್ನು ಹವ್ಯಾಸ ಹಾಗೂ ಸಾಧನೆಯ ಸಾಧನವಾಗಿ ಉಳಿಸಿಕೊಂಡು ಬಂದಿದ್ದಾರೆ.

ಇತ್ತೀಚೆಗಷ್ಟೇ ರಾಂಚಿಯ 7 ವರ್ಷದ ಹುಡುಗ ಇಶಾಂಕ್, ತಮಿಳುನಾಡು ಮತ್ತು ಶ್ರೀಲಂಕಾದ ನಡುವೆ ಇರುವ 29 ಕಿ.ಮೀ. ಉದ್ದದ ಪಾಲ್ಕ್ ಜಲಸಂಧಿಯನ್ನು 10 ತಾಸಲ್ಲಿ ದಾಟಿ ಸಾಧನೆ ಮಾಡಿದ್ದರು.



ಈಜಿದ ಬಳಿಕ ಮಿಲಿಂದ ಸೋಮನ್ ತ್ರಿವರ್ಣ ಧ್ವಜದೊಂದಿಗೆ ಸಂಭ್ರಮ.

₹142 ಕೋಟಿ ನೆಕ್ಲೇಸ್ ಧರಿಸಿದ ಉದ್ಯಮಿ ಸುಧಾ!

ವಿಶ್ವದ ಪ್ರತಿಷ್ಠಿತ ಫ್ಯಾಷನ್ ಶೋನಲ್ಲಿ ಮಿಂಚು




ನ್ಯೂಯಾರ್ಕ್: ಚಮೆಟ್ ಗಾಲಾ 2026ರಲ್ಲಿ ಹೈದರಾಬಾದ್ ಮೂಲದ ಉದ್ಯಮಿ ಮತ್ತು ಕೋಟ್ಯಧಿಪತಿ ಸುಧಾ ರೆಡ್ಡಿ ಸುಮಾರು 142 ಕೋಟಿ ರು. ಮೌಲ್ಯದ ನೆಕ್ಲೇಸ್ ಧರಿಸಿ, ದಕ್ಷಿಣ ಭಾರತೀಯ ಪಾರಂಪರಿಕ ವಸ್ತ್ರಭೂಷಣದೊಂದಿಗೆ ಎಲ್ಲರ ಗಮನ ಸೆಳೆದಿದ್ದಾರೆ.

ಈ ನೆಕ್ಲೇಸ್‌ನಲ್ಲಿ 'ಮೆರೆಲಾನಿಯ ರಾಣಿ' ಎಂದು ಕರೆಯಲ್ಪಡುವ 550 ಕ್ಯಾರಟ್‌ನ ನೇರಳೆ ಬಣ್ಣದ ಪದಕ ಪ್ರಮುಖ ಆಕರ್ಷಣೆಯಾಗಿತ್ತು. ನೆಕ್ಲೇಸ್‌ನಲ್ಲಿ ಅಪರೂಪದ ವಜ್ರ ಹಾಗೂ ಹರಳುಗಳನ್ನು ಅಳವಡಿಸಲಾಗಿದೆ.

'ಹೈದರಾಬಾದ್ ನನ್ನ ಮೂಲ ಮಾತ್ರವಲ್ಲ, ಅದು ಭಾಷೆ, ಲಯ ಮತ್ತು ಬದುಕುವ ವಿಧಾನ. ಈ ವಸ್ತ್ರಭೂಷಣದ ಮೂಲಕ ನಾನು ದಕ್ಷಿಣ ಭಾರತೀಯ ಕಲ್ಪನೆಯನ್ನು ಜಾಗತಿಕ ವೇದಿಕೆಗೆ ತಂದಿದ್ದೇನೆ. ಇದು ಕೇವಲ ಅಲಂಕಾರವಲ್ಲ, ಜೀವಂತ ಪರಂಪರೆಯ ಸಂಗ್ರಹ' ಎಂದು ಸುಧಾ ರೆಡ್ಡಿ ಇನ್‌ಸ್ಟಾಗ್ರಾಂನಲ್ಲಿ ಬರೆದುಕೊಂಡಿದ್ದಾರೆ.

ಪಾಕ್‌ನಲ್ಲಿ ಖ್ಯಾತ ಧರ್ಮಗುರುಗೆ ಗುಂಡಿಕ್ಕಿ ಹತ್ಯೆ




ಪೇಶಾವರ: ಪಾಕಿಸ್ತಾನದ ಖೈಬರ್ ಪಖ್ತುಂಖ್ವಾದಲ್ಲಿ ಪ್ರಾಂತ್ಯದಲ್ಲಿ ಖ್ಯಾತ ಧರ್ಮಗುರು ಶೇಖ್-ಉಲ್-ಹದೀತ್ ಮೌಲಾನಾ ಮುಹಮ್ಮದ್ ಇದ್ರೀಸ್ ಅವರನ್ನು ಕಿಡಿಗೇಡಿಗಳು ಗುಂಡಿಕ್ಕಿ ಹತ್ಯೆಗೈದ ಘಟನೆ ನಡೆದಿದೆ.

ಅಪರಿಚಿತ ದಾಳಿಕೋರ ಇಲ್ಲಿನ ಚರ್ಸದ್ದಾದಲ್ಲಿ ಇದ್ರೀಸ್ ಪ್ರಯಾಣಿಸುತ್ತಿದ್ದ ಕಾರಿನ ಮೇಲೆ ದಾಳಿ ನಡೆಸಿದ್ದಾನೆ. ಬಳಿಕ ಅವರು ಆಸ್ಪತ್ರೆಯಲ್ಲಿ ಅಸುನೀಗಿದರೆ, ಇಬ್ಬರು ಭದ್ರತಾ ಸಿಬ್ಬಂದಿ ಗಾಯಗೊಂಡಿದ್ದಾರೆ. ಪಾಕ್ ಹಿರಿಯ ಮತ್ತು ಧಾರ್ಮಿಕ ವಿದ್ವಾಂಸರಲ್ಲಿ ಒಬ್ಬರಾಗಿರುವ ಇವರು ಧಾರ್ಮಿಕ ಉಪನ್ಯಾಸ ನೀಡಲು ತೆರಳುತ್ತಿದ್ದಾಗ ದಾಳಿ ನಡೆದಿದೆ.

ಯುದ್ಧಕಾಲ | ನಾಗರಿಕರ ಮೇಲಿನ ದಾಳಿ ಒಪ್ಪಲು ಸಾಧ್ಯವಿಲ್ಲ | ಭಾರತವು ಯುಎಇ ಜತೆಗೆ ನಿಲ್ಲಲಿದೆ | 3 ಭಾರತೀಯರಿಗೆ ಗಾಯ ಕಾರಣ ಪಿಎಂ ಖಡಕ್ ನುಡಿ

ಯುಎಇ ಮೇಲಿನ ಇರಾನ್ ದಾಳಿಗೆ ಮೋದಿ ಗರಂ



ನವದೆಹಲಿ: ಮೂವರು ಭಾರತೀಯ ನಾಗರಿಕರು ಗಾಯಗೊಳ್ಳಲು ಕಾರಣವಾದ ಯುಎಇಯ ಪ್ರಮುಖ ಬಂದರು ಫುಜೈರಾ ಮೇಲಿನ ಇರಾನ್ ದಾಳಿಯನ್ನು ಪ್ರಧಾನಿ ನರೇಂದ್ರ ಮೋದಿ ತೀವ್ರವಾಗಿ ಖಂಡಿಸಿದ್ದಾರೆ. 'ನಾಗರಿಕರ ಮೇಲಿನ ದಾಳಿಯನ್ನು ಒಪ್ಪಲು ಸಾಧ್ಯವಿಲ್ಲ. ಭಾರತವು ಯುಎಇ ಜತೆಗೆ ನಿಲ್ಲಲಿದೆ' ಎಂದು ಖಡಕ್ಕಾಗಿ ಹೇಳಿದ್ದಾರೆ.

ಫುಜೈರಾ ಬಂದರಿನಲ್ಲಿರುವ ತೈಲ ಘಟಕದ ಮೇಲೆ ಸೋಮವಾರ ಇರಾನ್ ಅಪ್ರಚೋದಿತ ಡ್ರೋನ್ ದಾಳಿ ನಡೆಸಿತ್ತು. ಇದರಲ್ಲಿ 3 ಭಾರತೀಯರು ಗಾಯಗೊಂಡಿದ್ದರು. ಈ ದಾಳಿ ಹಿಂದೆ ಇರಾನ್ ಕೈವಾಡವಿದೆ ಎಂದು ಯುಎಇ ಆರೋಪಿಸಿತ್ತು.

'ಮೂವರು ಭಾರತೀಯರು ಗಾಯಗೊಳ್ಳಲು ಕಾರಣವಾದ ಯುಎಇ ಮೇಲಿನ ಈ ದಾಳಿಯನ್ನು ತೀವ್ರವಾಗಿ ಖಂಡಿಸುತ್ತೇನೆ. ನಾಗರಿಕರು ಮತ್ತು ನಾಗರಿಕ ಮೂಲಸೌಲಭ್ಯಗಳ ಮೇಲಿನ ದಾಳಿಯನ್ನು ಯಾವುದೇ ಕಾರಣಕ್ಕೂ ಒಪ್ಪಲು ಸಾಧ್ಯವಿಲ್ಲ' ಎಂದು ಮೋದಿ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಭಾರತವು ಯುಎಇ ಜತೆಗೆ ನಿಲ್ಲಲಿದೆ. ಮಾತುಕತೆ ಮತ್ತು ರಾಯಭಾರತ್ವದ ಮೂಲಕ ಎಲ್ಲಾ ಸಮಸ್ಯೆಗಳನ್ನು ಶಾಂತಿಯುತವಾಗಿ ಪರಿಹರಿಸಲು ಬೆಂಬಲ ನೀಡುತ್ತದೆ' ಎಂದು ತಿಳಿಸಿದ್ದಾರೆ. ಇದೇ ವೇಳೆ, 'ಹೋರ್ಮುಜ್ ಜಲಸಂಧಿಯಲ್ಲಿ ಸುರಕ್ಷಿತ ಮತ್ತು ಯಾವುದೇ ಅಡೆತಡೆ ಇಲ್ಲದ ಹಡಗು ಪ್ರಯಾಣವು ಪ್ರಾದೇಶಿಕ ಶಾಂತಿ, ಸ್ಥಿರತೆ ಹಾಗೂ ಅಂತಾರಾಷ್ಟ್ರೀಯ ಇಂಧನ ಭದ್ರತೆಗೆ ಅತ್ಯಗತ್ಯ' ಎಂದು ಹೇಳಿದ್ದಾರೆ.

ಇರಾನ್‌ನಿಂದ ಹಾರಿಸಲ್ಪಟ್ಟ 12 ಬ್ಯಾಲಿಸ್ಟಿಕ್ ಕ್ಷಿಪಣಿಗಳು, 3 ಕ್ರೂಸ್ ಕ್ಷಿಪಣಿಗಳು ಹಾಗೂ ನಾಲ್ಕು ಡ್ರೋನ್‌ಗಳನ್ನು ಹೊಡೆದುರುಳಿಸಿರುವುದಾಗಿ ಯುಎಇ ಹೇಳಿಕೊಂಡಿದೆ.

ಹೋರ್ಮುಜ್‌ನಲ್ಲಿ ಅಮೆರಿಕದಿಂದ ಇರಾನ್ 6 ಬೋಟುಗಳು ನಾಶ

ವಾಷಿಂಗ್ಟನ್: ಹೋರ್ಮುಜ್ ಜಲಸಂಧಿಯನ್ನು ವಾಣಿಜ್ಯ ಹಡಗು ಸಂಚಾರಕ್ಕೆ ಸುರಕ್ಷಿತಗೊಳಿಸುವ ಕಾರ್ಯಕ್ಕೆ ತಡೆ ಒಡ್ಡಿದ ಇರಾನ್‌ನ 6 ಸಣ್ಣ ಬೋಟ್‌ಗಳನ್ನು ಅಮೆರಿಕ ನಾಶ ಮಾಡಿದೆ. ಜತೆಗೆ, ತನ್ನ ಹಡಗುಗಳತ್ತ ಇರಾನ್ ಹಾರಿಸಿಬಿಟ್ಟ ಕ್ಷಿಪಣಿಗಳು ಹಾಗೂ ಡ್ರೋನ್‌ಗಳನ್ನೂ ಅಮೆರಿಕ ಸೇನೆ ಹೊಡೆದುರುಳಿಸಿದೆ.

ಅಮೆರಿಕದ ಹಾರುವ ಗ್ಯಾಸ್ ಸ್ಟೇಷನ್ ಕತಾರ್ ಬಳಿ ನಾಪತ್ತೆ

ವಾಷಿಂಗ್ಟನ್: ಅಮೆರಿಕದ ಸೇನಾ ವಿಮಾನಗಳಿಗೆ ಇಂಧನ ಪೂರೈಸುವ, 'ಹಾರುವ ಗ್ಯಾಸ್ ಸ್ಟೇಷನ್' ಬೋಯಿಂಗ್ ಕೆಸಿ- 135 ಸ್ಟ್ರಾಟೋ ಟ್ಯಾಂಕರ್ ವಿಮಾನ, ಇತ್ತೀಚೆಗೆ ಪರ್ಷಿಯನ್ ಕೊಲ್ಲಿಯ ಮೇಲೆ (ಕತಾರ್‌ಮೇಲೆ) ಹಾರುವಾಗ ನಾಪತ್ತೆಯಾಗಿದೆ.

ಇರಾನ್ ವಿರುದ್ಧದ ಯುದ್ಧದಲ್ಲಿ ಅಮೆರಿಕ ಸೇನೆಗೆ ಬೆಂಬಲವಾಗಿ ವಿಮಾನವು ಮಧ್ಯಪ್ರಾಚ್ಯದಲ್ಲಿ ಕಾರ್ಯನಿರ್ವಹಿಸುತ್ತಿತ್ತು. ನಾಪತ್ತೆ ಆಗುವ ಮುನ್ನ ಅದು ಎಮರ್ಜೆನ್ಸಿ (7700) ಸಂದೇಶ ರವಾನಿಸಿ ಕಾಣೆಯಾಗಿದೆ. ವಿಮಾನದೊಳಗೆ ತುರ್ತು ಪರಿಸ್ಥಿತಿ ಉಂಟಾಗಿದೆ ಎಂದು ಫ್ಲೈಟ್‌ರಾಡಾರ್ ದತ್ತಾಂಶದಲ್ಲಿ ದಾಖಲಾಗಿದೆ. ಇದರಲ್ಲಿ ಇರಾನ್ ಪಾತ್ರವಿದೆಯೇ ಎಂಬುದರ ಬಗ್ಗೆ ಅಮೆರಿಕ ಇದುವರೆಗೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಹೆಮ್ಮೆ | ಡಿಜಿಟಲ್ ಅರೆಸ್ಟ್ ಬಗ್ಗೆ ಜಾಗೃತಿಗೆ ಮನ್ನಣೆ

ಆನಂದ್, ಸುಪರ್ಣಾಗೆ ಪ್ರತಿಷ್ಠಿತ ಪುಲಿಟ್ಜರ್ ಪ್ರಶಸ್ತಿ



ಆನಂದ್ ಆರ್.ಕೆ.



ಸುಪರ್ಣಾ ಶರ್ಮಾ

ನ್ಯೂಯಾರ್ಕ್: ಡಿಜಿಟಲ್ ಕಣ್ಗಾವಲು ಮತ್ತು ಸೈಬರ್ ವಂಚನೆ ಕುರಿತು ಜಾಗೃತಿ ಮೂಡಿಸುವ ಕಾರ್ಯ ಮಾಡಿದ್ದಕ್ಕಾಗಿ ಭಾರತೀಯ ಪತ್ರಕರ್ತರಾದ **ಆನಂದ್ ಆರ್.ಕೆ.** ಮತ್ತು **ಸುಪರ್ಣಾ ಶರ್ಮಾ** ಪ್ರತಿಷ್ಠಿತ ಪುಲಿಟ್ಜರ್ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಸೋಮವಾರ ಪ್ರಶಸ್ತಿಯನ್ನು ಘೋಷಿಸಲಾಗಿದ್ದು, ಪ್ರಭಾವಿ ವರದಿಗಾರಿಕೆ ಮತ್ತು ವಿಮರ್ಶಾ ವಿಭಾಗದಲ್ಲಿ ಇವರನ್ನು ಆಯ್ಕೆ ಮಾಡಲಾಗಿದೆ. ಬ್ಲೂಮ್‌ಬರ್ಗ್‌ನ ನಟಾಲಿ ಒಬಿಕೊ ಪಿಯರ್ಸನ್ ಅವರೊಂದಿಗೆ ಈ ಪ್ರಶಸ್ತಿಯನ್ನು ಹಂಚಿಕೊಂಡಿದ್ದಾರೆ.

ಡಿಜಿಟಲ್ ಅರೆಸ್ಟ್ ಕುರಿತು ಬೆಳಕು ಚೆಲ್ಲಿದ್ದರು: ನರವಿಜ್ಞಾನಿಯೊಬ್ಬರ ಕಥೆಯನ್ನು ವಿವರಿಸುವ "trAPPed' ಎಂಬ ಕೃತಿಯನ್ನು ಬ್ಲೂಮ್‌ಬರ್ಗ್‌ಗಾಗಿ ಇವರು ರಚಿಸಿದ್ದರು. ಅದರಲ್ಲಿ ಜಾಗತಿಕ ಸವಾಲುಗಳಾದ ಕಣ್ಗಾವಲು ಮತ್ತು ಡಿಜಿಟಲ್ ಹಗರಣಗಳ ಕುರಿತು ಬೆಳಕು ಚೆಲ್ಲಿದ್ದರು. ಇದನ್ನು ಗುರುತಿಸಿ ಪ್ರಶಸ್ತಿ ನೀಡಲಾಗುತ್ತಿದೆ ಎಂದು ಪುಲಿಟ್ಜರ್ ವೆಬ್‌ಸೈಟ್‌ನಲ್ಲಿ ತಿಳಿಸಲಾಗಿದೆ.

ಐಪಿಎಲ್-2026 ಅಂಕಪಟ್ಟಿ

ತಂಡಗಳು	ಪಂದ್ಯ	ಗೆಲುವು	ಸೋಲು	ರದ್ದು	ನೆಟ್ ರನ್‌ರೇಟ್	ಅಂಕ
ಪಂಜಾಬ್	09	06	02	01	+0.855	13
ಆರ್‌ಸಿಬಿ	09	06	03	00	+1.420	12
ಹೈದ್ರಾಬಾದ್	10	06	04	00	+0.644	12
ರಾಜಸ್ಥಾನ	10	06	04	00	+0.510	12
ಗುಜರಾತ್	10	06	04	00	-0.147	12
ಚೆನ್ನೈ	10	05	05	00	+0.151	10
ಡೆಲ್ಲಿ	10	04	06	00	-0.949	08
ಕೋಲ್ಕತಾ	09	03	05	01	-0.539	07
ಮುಂಬೈ	10	03	07	00	-0.649	06
ಲಖನೌ	09	02	07	00	-1.076	04

ಸುದ್ದಿ ಸಿಂಚನ

ಶೂಟಿಂಗ್ ವಿಶ್ವಕಪ್‌ನಲ್ಲಿ ಭಾರತ ತಂಡಕ್ಕೆ ನಿರಾಸೆ

ಅಲ್ಮಾಟಿ(ಕಜಕಸ್ತಾನ): ಇಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ಶೂಟಿಂಗ್ ವಿಶ್ವಕಪ್‌ನಲ್ಲಿ ಭಾರತ ನೀರಸ ಪ್ರದರ್ಶನ ನೀಡಿದೆ. ಪುರುಷ, ಮಹಿಳಾ ಸ್ಕೀಟ್ ತಂಡಗಳು ಹೀನಾಯ ಸೋಲು ಕಂಡಿದ್ದು ಫೈನಲ್ ಪ್ರವೇಶಿಸಲು ವಿಫಲವಾಗಿವೆ. ಭಾರತೀಯ ಸ್ಪರ್ಧಿಗಳ ಪೈಕಿ ಮಿರಾಜ್ ಅಹ್ಮದ್ ಖಾನ್ ಮತ್ತು ರೈಜಾ ಧಿಲ್ಲೋನ್ ಉತ್ತಮ ಪ್ರದರ್ಶನ ನೀಡಿದರು. 26ನೇ ಸ್ಥಾನದಿಂದ ಆರಂಭಿಸಿದ ಮಿರಾಜ್, ಕೊನೆ ಎರಡು ಸರಣಿಗಳಲ್ಲಿ 23 ಮತ್ತು 25 ಅಂಕಗಳನ್ನು ಗಳಿಸಿ ಒಟ್ಟು 119 ಅಂಕಗಳೊಂದಿಗೆ 18ನೇ ಸ್ಥಾನದೊಂದಿಗೆ ಅಭಿಯಾನ ಕೊನೆಗೊಳಿಸಿದರು.

ಡೋಪಿಂಗ್ ಪರೀಕ್ಷೆಯನ್ನು ತಪ್ಪಿಸಿಕೊಂಡ ವಿನೇಶ್‌ಗೆ ಏಜೆನ್ಸಿಯಿಂದ ನೋಟಿಸ್

ನವದೆಹಲಿ: ಡೋಪಿಂಗ್ ಪರೀಕ್ಷೆಯನ್ನು ತಪ್ಪಿಸಿಕೊಂಡ ದಕ್ಷಿಣ ಕುಸ್ತಿಪಟು ವಿನೇಶ್ ಫೋಗಟ್‌ಗೆ ಅಂತಾರಾಷ್ಟ್ರೀಯ ಟೆಸ್ಟಿಂಗ್ ಏಜೆನ್ಸಿ(ಐಟಿಎ) ನೋಟಿಸ್ ಜಾರಿಗೊಳಿಸಿದೆ. ನಿಯಮ ಪ್ರಕಾರ ಅಥ್ಲೀಟ್‌ಗಳು ಕೂಟಗಳಲ್ಲಿ ಸ್ಪರ್ಧಿಸದಿದ್ದರೂ ಅವರನ್ನು ಯಾವ ಸಮಯದಲ್ಲಿ ಬೇಕಾದರೂ ಐಟಿಎ ಡೋಪಿಂಗ್ ಪರೀಕ್ಷೆ ಮಾಡಬಹುದು. ಅಲ್ಲದೆ, ತಮ್ಮ ಪ್ರಯಾಣದ ಬಗ್ಗೆಯೂ ಅಥ್ಲೀಟ್‌ಗಳು ಮಾಹಿತಿ ನೀಡಬೇಕು. ಆದರೆ 2025ರ ಡಿ.18ರಂದು ವಿನೇಶ್‌ರ ಡೋಪಿಂಗ್ ಪರೀಕ್ಷೆಗಾಗಿ ಐಟಿಎ ಪ್ರಯತ್ನಿಸಿದಾಗ ಅವರು ಅದನ್ನು ತಪ್ಪಿಸಿಕೊಂಡಿದ್ದರು ಎಂದು ಐಟಿಎ ತಿಳಿಸಿದೆ.

ತುಮಕೂರು ಓಪನ್‌ನಲ್ಲಿ ಮಧುರಿಮಾ 2ನೇ ಸುತ್ತಿಗೆ

ತುಮಕೂರು: ತುಮಕೂರು ಓಪನ್ ಮಹಿಳಾ ಟೆನಿಸ್ ಟೂರ್ನಿಯಲ್ಲಿ ಭಾರತದ ಮಧುರಿಮಾ ಸಾವಂತ್ 2ನೇ ಸುತ್ತಿಗೇರಿದ್ದಾರೆ. ಮಂಗಳವಾರ ಅವರು ಮೊದಲ ಸುತ್ತಿನಲ್ಲಿ ರಷ್ಯಾದ ಮರಿಯಾ ಮಿಖೈಲೋವಾ ವಿರುದ್ಧ ಗೆದ್ದರು. ಸಂದೀಪ್ತಿ ಸಿಂಗ್ ರಾವ್ ಮೊದಲ ಸುತ್ತಿನಲ್ಲಿ ಯಶಸ್ವಿ ಪನ್ವಾರ್ ವಿರುದ್ಧ ಜಯಗಳಿಸಿದರು. ಪೂಜಾ ಇಂಗಲೆ, ಸೋನಲ್ ಪಾಟೀಲ್ ಕೂಡಾ 2ನೇ ಸುತ್ತು ಪ್ರವೇಶಿಸಿದ್ದಾರೆ. ಡಬಲ್ಸ್‌ನಲ್ಲಿ ವೈದೇಹಿ ಚೌಧರಿ- ಪೋಲೆಂಡ್‌ನ ಜುಜನ್ನಾ ಪಾವ್ಲಿಕೊವ್‌ಸ್ಕಾ, ಶ್ರವ್ಯಾ ಶಿವಾನಿ-ಝೀಲ್ ದೇಸಾಯಿ, ಐಶ್ವರ್ಯಾ ಜಾಧವ್-ಆಕೃತಿ ನಾರಾಯಣ್ ಜೋಡಿ ಶುಭಾರಂಭ ಮಾಡಿದವು.

ವಿಶ್ವ ವಿಜೇತರು ಐಪಿಎಲ್‌ನಲ್ಲಿ ಫೇಲ್!

ಭಾರತಕ್ಕೆ ಟಿ20 ವಿಶ್ವಕಪ್ ಗೆಲ್ಲಿಸಿಕೊಟ್ಟಿದ್ದ ಸ್ಟಾರ್‌ಗಳಿಂದ ಐಪಿಎಲ್‌ನಲ್ಲಿ ನೀರಸ ಪ್ರದರ್ಶನ
ಬೂಮ್ರಾ, ಸೂರ್ಯಕುಮಾರ್, ಹಾರ್ದಿಕ್, ದುಬೆ, ಅಕ್ಷರ್, ತಿಲಕ್, ಅರ್ಶ್‌ದೀಪ್ ವೈಫಲ್ಯ
ಅಭಿ, ಕಿಶನ್, ಸಂಜು ಮಾತ್ರ ಮಿಂಚು | ಭಾರತ ಟಿ20 ತಂಡದಲ್ಲಿ ಇಲ್ಲದವರಿಂದಲೇ ಅಬ್ಬರ



ನವದೆಹಲಿ: ಮಾರ್ಚ್ ತಿಂಗಳಲ್ಲಿ ಭಾರತ 3ನೇ ಬಾರಿ ಟಿ20 ವಿಶ್ವಕಪ್ ಗೆದ್ದು ಹೊಸ ಇತಿಹಾಸ ಸೃಷ್ಟಿಸಿತ್ತು. ಸ್ಟಾರ್ ಕ್ರಿಕೆಟಿಗರ ನೆರವಿನೊಂದಿಗೆ ಟೀಂ ಇಂಡಿಯಾ ಇತರ 19 ತಂಡಗಳನ್ನು ಹಿಂದಿಕ್ಕಿ ವಿಶ್ವ ಚಾಂಪಿಯನ್ ಪಟ್ಟ ಅಲಂಕರಿಸಿತು. ಆದರೆ ಅದೇ ತಂಡದಲ್ಲಿದ್ದ ಆಟಗಾರರು ಈ ಬಾರಿ ಐಪಿಎಲ್‌ನಲ್ಲಿ ನೀಡುತ್ತಿರುವ ಪ್ರದರ್ಶನ ಮಾತ್ರ ಸಾಧಾರಣ ಮಟ್ಟದ್ದು. ವಿಶ್ವಕಪ್‌ನಲ್ಲಿ ಅಬ್ಬರಿಸಿದ್ದ ಬಹುತೇಕ ಎಲ್ಲಾ ಆಟಗಾರರು ಐಪಿಎಲ್‌ನಲ್ಲಿ ಮಂಕಾಗಿದ್ದಾರೆ. ಅದರಲ್ಲೂ ಬೂಮ್ರಾ, ಶಿವಂ ದುಬೆ, ಸೂರ್ಯಕುಮಾರ್, ಹಾರ್ದಿಕ್ ಪಾಂಡ್ಯ, ಅಕ್ಷರ್ ಪಟೇಲ್, ವರುಣ್ ಚಕ್ರವರ್ತಿ ಟಿ20 ವಿಶ್ವಕಪ್‌ನಲ್ಲಿ ಅಮೋಘ ಪ್ರದರ್ಶನ ನೀಡಿದ್ದರೆ, ಐಪಿಎಲ್‌ನಲ್ಲಿ ಮಾತ್ರ ತೀರಾ ಕಳಪೆ ಆಟವಾಡುತ್ತಿದ್ದಾರೆ.

ಬೂಮ್ರಾ ಡೆತ್ ಬೌಲಿಂಗ್ ಮಾಯ

ಟಿ20 ವಿಶ್ವಕಪ್‌ನಲ್ಲಿ ಬೂಮ್ರಾ ಡೆತ್ ಬೌಲಿಂಗ್ ಪ್ರದರ್ಶನ ನೀಡಿದ್ದರು. ಆಡಿದ 8 ಪಂದ್ಯಗಳಲ್ಲಿ ಕೇವಲ 6.21ರ ಎಕಾನಮಿಯಲ್ಲಿ ಬೌಲಿಂಗ್ ಮಾಡಿ, 14 ವಿಕೆಟ್ ಪಡೆದಿದ್ದರು. ಫೈನಲ್‌ನ ಪಂದ್ಯಶ್ರೇಷ್ಠ ಕೂಡಾ ಅವರೇ. ಆದರೆ ಐಪಿಎಲ್‌ನಲ್ಲಿಗ ಅವರು 10 ಪಂದ್ಯದಲ್ಲಿ ಕೇವಲ 3 ವಿಕೆಟ್ ಕಿತ್ತಿದ್ದಾರೆ.

ಮುಂಬೈಗೆ ಬೆಳಕಾಗದ ಸೂರ್ಯ

ವಿಶ್ವಕಪ್‌ನಲ್ಲಿ ಸೂರ್ಯಕುಮಾರ್ ಕೇವಲ 1 ಅರ್ಧಶತಕ ಬಾರಿಸಿದ್ದರೂ ಅವರ ಒಟ್ಟಾರೆ ಕೊಡುಗೆ ಭಾರತಕ್ಕೆ ಅತ್ಯಮೂಲ್ಯವಾಗಿತ್ತು. ಒಟ್ಟು 242 ರನ್ ಗಳಿಸಿ ಕಪ್ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಐಪಿಎಲ್‌ನಲ್ಲಿ 10 ಪಂದ್ಯಗಳಲ್ಲಿ 19.50ರ ಸರಾಸರಿಯಲ್ಲಿ 195 ರನ್ ಗಳಿಸಿದ್ದಾರೆ. ಭಾರತಕ್ಕೆ ಬೆಳಕಾಗಿದ್ದ ಸೂರ್ಯ ಐಪಿಎಲ್‌ನಲ್ಲಿ ಮಂಕಾಗಿದ್ದಾರೆ.

ಶಿವಂ ದುಬೆಯ ಆಟದ ಲಾಭ ಚೆನ್ನೈಗಿಲ್ಲ



ಶಿವಂ ದುಬೆ ವಿಶ್ವಕಪ್‌ನಲ್ಲಿ ಕೆಲ ನಿರ್ಣಾಯಕ ಘಟ್ಟಗಳಲ್ಲಿ ಸ್ಫೋಟಕ ಆಟವಾಡಿ ತಂಡ ಕೈಹಿಡಿದಿದ್ದರು. 9 ಪಂದ್ಯಗಳಲ್ಲಿ 235 ರನ್ ಗಳಿಸಿದ್ದ ಅವರು, 5 ವಿಕೆಟ್ ಕೂಡಾ ಪಡೆದಿದ್ದರು. ಈ ಐಪಿಎಲ್‌ನಲ್ಲಿ ಚೆನ್ನೈ ಪರ 9 ಪಂದ್ಯಗಳಲ್ಲಿ ಕೇವಲ 150 ರನ್ ಬಾರಿಸಿದ್ದಾರೆ.

ಆಲ್ರೌಂಡರ್ ಹಾರ್ದಿಕ್ ಎಲ್ಲರದಲ್ಲೂ ಫೇಲ್

ಸ್ಫೋಟಕ ಆಟ, ಪವರ್-ಪ್ಲೇನಲ್ಲೇ ಪ್ರಮುಖರ ವಿಕೆಟ್ ಪಡೆಯುವ ಮೂಲಕ ವಿಶ್ವಕಪ್‌ನಲ್ಲಿ ಹಾರ್ದಿಕ್ ಪಾಂಡ್ಯ ಮಿಂಚಿದ್ದರು. 217 ರನ್ ಗಳಿಸಿ 9 ವಿಕೆಟ್ ಪಡೆದಿದ್ದರು. ಆದರೆ ಐಪಿಎಲ್‌ನಲ್ಲಿ ಮುಂಬೈನ ನಾಯಕತ್ವ, ಬೌಲಿಂಗ್, ಬ್ಯಾಟಿಂಗ್ ಎಲ್ಲರದಲ್ಲೂ ವಿಫಲರಾಗುತ್ತಿದ್ದಾರೆ. 8 ಪಂದ್ಯದಲ್ಲಿ 146 ರನ್ ಗಳಿಸಿದ್ದು, ಪಡೆದ ವಿಕೆಟ್ ಕೇವಲ 4.

ಐಪಿಎಲ್‌ನಲ್ಲಿಲ್ಲ ಅಕ್ಷರ್ ಆಕರ್ಷಕ ಆಟ



ಅಕ್ಷರ್ ಪಟೇಲ್ ಐಪಿಎಲ್‌ನಲ್ಲಿ ಅಮೋಘ ಫೀಲ್ಡಿಂಗ್, ಆಕರ್ಷಕ ಕ್ಯಾಚ್ ಮೂಲಕ ಗಮನ ಸೆಳೆದಿದ್ದರು. ಆಡಿದ 7 ಪಂದ್ಯದಲ್ಲಿ 11 ವಿಕೆಟ್ ಪಡೆದಿದ್ದರು. ಆದರೆ ಡೆಲ್ಲಿ ಕ್ಯಾಪಿಟಲ್ಸ್ ಪರ ನಾಯಕನಾಗಿ ವಿಫಲರಾಗಿದ್ದಾರೆ. 9 ಪಂದ್ಯದಲ್ಲಿ ಕೇವಲ 33 ರನ್ ಗಳಿಸಿದ್ದು, 9 ವಿಕೆಟ್ ಪಡೆದಿದ್ದಾರೆ.

ಅರ್ಶ್, ತಿಲಕ್, ವರುಣ್ ನೀರಸ ಪ್ರದರ್ಶನ





ಭಾರತದ ಪರ ಟಿ20ಯಲ್ಲಿ 127 ವಿಕೆಟ್ ಪಡೆದ ವೇಗಿ ಅರ್ಶ್‌ದೀಪ್ ಸಿಂಗ್ ಈ ಐಪಿಎಲ್‌ನಲ್ಲಿ 9 ಪಂದ್ಯದಲ್ಲಿ ಕೇವಲ 10 ವಿಕೆಟ್ ಪಡೆದಿದ್ದು, 10.38ರ ಎಕಾನಮಿಯಲ್ಲಿ ರನ್ ಬಿಟ್ಟುಕೊಟ್ಟು ದುಬಾರಿಯಾಗಿದ್ದಾರೆ. ವಿಶ್ವಕಪ್‌ನಲ್ಲಿ ಮಿಂಚಿದ್ದ ಸ್ಪಿನ್ನರ್ ವರುಣ್ ಚಕ್ರವರ್ತಿ ಕೂಡಾ ಐಪಿಎಲ್‌ನಲ್ಲಿ ಕೋಲ್ಕತಾ ತಂಡದ ಪರ ಪಡೆದಿದ್ದು ಕೇವಲ 10 ವಿಕೆಟ್. ಇನ್ನು ಸ್ಫೋಟಕ ಬ್ಯಾಟರ್ ತಿಲಕ್ ವರ್ಮಾ ಈ ಐಪಿಎಲ್‌ನಲ್ಲಿ ಮುಂಬೈ ಪರ 1 ಶತಕ ಬಾರಿಸಿದ್ದರೂ, ಆಡಿದ ಇತರ 9 ಪಂದ್ಯಗಳಲ್ಲಿ ಕೇವಲ 103 ರನ್ ಬಾರಿಸಿದ್ದಾರೆ.


ಅಂ.ರಾ. ಟಿ20 ನಿವೃತ್ತರು, ಟೆಸ್ಟ್ ಆಟಗಾರರ ಅಬ್ಬರ





ಈ ಬಾರಿ ಐಪಿಎಲ್‌ನ ಮತ್ತೊಂದು ಗಮನಾರ್ಹ ಸಂಗತಿ ಏನೆಂದರೆ, ಭಾರತದ ಟಿ20 ತಂಡದಿಂದ ಹೊರಬಿದ್ದಿರುವ, ಅಂತಾರಾಷ್ಟ್ರೀಯ ಟಿ20ಗೆ ನಿವೃತ್ತಿ ಘೋಷಿಸಿರುವ, ಕೇವಲ ಟೆಸ್ಟ್, ಏಕದಿನ ಆಟಗಾರರಾಗಿ ಮಾತ್ರ ಗುರುತಿಸಿಕೊಳ್ಳುತ್ತಿರುವ ಆಟಗಾರರು ಅಬ್ಬರದ ಪ್ರದರ್ಶನ ನೀಡುತ್ತಿದ್ದಾರೆ. ವಿರಾಟ್ ಕೊಹ್ಲಿ 9 ಪಂದ್ಯಗಳಲ್ಲಿ 379 ರನ್ ಸಿಡಿಸಿದ್ದಾರೆ. ರೋಹಿತ್ ಆಡಿದ್ದು 5 ಪಂದ್ಯಗಳಲ್ಲಾದರೂ 221 ರನ್ ಗಳಿಸಿದ್ದಾರೆ. ಕಳೆದ 4 ವರ್ಷಗಳಿಂದ ಭಾರತ ಟಿ20 ತಂಡಕ್ಕೆ ಆಯ್ಕೆಯಾಗದಿರುವ ಕೆ.ಎಲ್.ರಾಹುಲ್ ಈ ಐಪಿಎಲ್‌ನಲ್ಲಿ 10 ಪಂದ್ಯಗಳಲ್ಲಿ 445 ರನ್ ಸಿಡಿಸಿದ್ದಾರೆ. ಭಾರತೀಯ ಟಿ20ಗೆ ಸದಾ ಅಪರಿಚಿತ ಎಂಬಂತಿರುವ ಶ್ರೇಯಸ್ ಅಯ್ಯರ್ ನಾಯಕತ್ವದ ಜೊತೆ ಬ್ಯಾಟಿಂಗ್‌ನಲ್ಲೂ ಅಬ್ಬರಿಸುತ್ತಿದ್ದು, 9 ಪಂದ್ಯದಲ್ಲಿ 328 ರನ್ ಬಾರಿಸಿದ್ದಾರೆ. ಇನ್ನು, 2022ರಿಂದ ಭಾರತ ತಂಡದಲ್ಲಿ ಸ್ಥಾನ ಪಡೆಯದ ವೇಗಿ ಭುವನೇಶ್ವರ್ 17 ವಿಕೆಟ್ ಕಿತ್ತಿದ್ದು, ಪರ್ಪಲ್ ಕ್ಯಾಪ್ ರೇಸ್‌ನಲ್ಲಿ ಮುಂಚೂಣಿಯಲ್ಲಿದ್ದಾರೆ.

ಆರಂಭಿಕ ತ್ರಿಮೂರ್ತಿಗಳು ಐಪಿಎಲ್‌ನಲ್ಲೂ ಕಮಾಲ್



ಟಿ20 ವಿಶ್ವಕಪ್‌ನಲ್ಲಿ ಆರಂಭಿಕ 3 ಬ್ಯಾಟರ್‌ಗಳಾಗಿ ಆಡಿದ್ದ ಸಂಜು, ಅಭಿಷೇಕ್, ಇಶಾನ್ ಕಿಶನ್ ಸ್ಫೋಟಕ ಪ್ರದರ್ಶನ ನೀಡಿದ್ದರು. ಫೈನಲ್ ಸೇರಿ ಕೆಲ ಪಂದ್ಯಗಳಲ್ಲಂತೂ ಈ ತ್ರಿಮೂರ್ತಿಗಳ ಆಟ ಅಮೋಘ. ಇವರು ಈ ಸಲ ಐಪಿಎಲ್‌ನಲ್ಲೂ ಆರ್ಭಟಿಸುತ್ತಿದ್ದಾರೆ. ಅಭಿಷೇಕ್ 10 ಪಂದ್ಯಗಳಲ್ಲಿ 440 ರನ್ ಗಳಿಸಿದ್ದಾರೆ. 10 ಪಂದ್ಯದಲ್ಲಿ 354 ರನ್ ಸಿಡಿಸಿರುವ ಇಶಾನ್ ಕಿಶನ್, ಸನ್‌ರೈಸರ್ಸ್‌ನ ಸಮರ್ಥ ನಾಯಕನಾಗಿಯೂ ಗುರುತಿಸಿಕೊಂಡಿದ್ದಾರೆ. ಸಂಜು ಚೆನ್ನೈ ಪರ 2 ಭರ್ಜರಿ ಶತಕದೊಂದಿಗೆ 315 ರನ್ ಕಲೆಹಾಕಿದ್ದಾರೆ.

ಸಂಜು ಮತ್ತೆ ಅಬ್ಬರ: ಚೆನ್ನೈಗೆ ಜಯ, ಪ್ಲೇ-ಆಫ್ ಕನಸು ಜೀವಂತ



ನವದೆಹಲಿ: ಸಂಜು ಸ್ಯಾಮ್ಸನ್ ಮತ್ತೆ ಅಬ್ಬರದ ಆಟವಾಡಿದ್ದು, ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಮಂಗಳವಾರದ ಪಂದ್ಯದಲ್ಲಿ ಚೆನ್ನೈಗೆ 8 ವಿಕೆಟ್ ಗೆಲುವು ತಂದುಕೊಟ್ಟಿದ್ದಾರೆ. 10 ಪಂದ್ಯದಲ್ಲಿ 5ರಲ್ಲಿ ಗೆದ್ದಿರುವ ಚೆನ್ನೈನ ಪ್ಲೇ-ಆಫ್ ಕನಸು ಜೀವಂತವಾಗಿದ್ದು, 10ರಲ್ಲಿ 6ನೇ ಸೋಲುಂಡ ಡೆಲ್ಲಿ ಪ್ಲೇ-ಆಫ್ ಹಾದಿ ಕಠಿಣಗೊಂಡಿದೆ.


ಮೊದಲು ಬ್ಯಾಟ್ ಮಾಡಿದ ಡೆಲ್ಲಿ 7 ವಿಕೆಟ್ ನಷ್ಟದಲ್ಲಿ 155 ರನ್ ಕಲೆಹಾಕಿತು. ಚೆನ್ನೈ ದಾಳಿ ಮುಂದೆ ಡೆಲ್ಲಿ ಬ್ಯಾಟರ್ಸ್ ರನ್ ಗಳಿಸಲು ಪರದಾಡಿದರು. ಆದರೆ ಸಮೀರ್ ರಿಜ್ವಿ(24 ಎಸೆತಕ್ಕೆ ಔಟಾಗದೆ 40) ಹಾಗೂ ಟ್ರಿಸ್ಟನ್ ಸ್ಟಬ್ಸ್(38) ಕೊನೆಯಲ್ಲಿ ಅಬ್ಬರಿಸಿ ತಂಡಕ್ಕೆ ಆಸರೆಯಾದರು.

ಸ್ಪರ್ಧಾತ್ಮಕ ಗುರಿ ಬೆನ್ನತ್ತಿದ ಚೆನ್ನೈ 17.3 ಓವರ್‌ನಲ್ಲಿ 2 ವಿಕೆಟ್ ನಷ್ಟದಲ್ಲಿ ಜಯಗಳಿಸಿತು. ಸಂಜು ಸ್ಯಾಮ್ಸನ್ 52 ಎಸೆತಕ್ಕೆ ಔಟಾಗದೆ 87 ರನ್ ಗಳಿಸಿ ಗೆಲುವಿನ ರೂವಾರಿಯಾದರು. ಕಾರ್ತಿಕ್ ಶರ್ಮಾ ಅಜೇಯ 41 ರನ್ ಕೊಡುಗೆ ನೀಡಿದರು.

ಸ್ಕೋರ್: ಡೆಲ್ಲಿ 20 ಓವರಲ್ಲಿ 155/7 (ರಿಜ್ವಿ ಔಟಾಗದೆ 40, ಸ್ಟಬ್ಸ್ 38, ನೂರ್ 2-22), ಚೆನ್ನೈ 17.4 ಓವರಲ್ಲಿ 159/2 (ಸಂಜು ಔಟಾಗದೆ 87, ಕಾರ್ತಿಕ್ ಔಟಾಗದೆ 41, ಅಕ್ಷರ್ 1-25)

ಪ್ರಶಸ್ತಿ ಮೊತ್ತ ಹೆಚ್ಚಿಸದಿದ್ರೆ ಗ್ರ್ಯಾನ್‌ಸ್ಲಾಂಗೆ ಬಹಿಷ್ಕಾರ: ಖ್ಯಾತ ಟೆನಿಸಿಗರ ಎಚ್ಚರಿಕೆ!

ಫ್ರೆಂಚ್ ಓಪನ್ ನಗದು ಮೊತ್ತ ಕಡಿಮೆ ಸಬಲೆಂಕಾ, ಸಿನ್ನರ್ ಸೇರಿ ಹಲವರ ಕಿಡಿ







ರೋಮ್: ಟೆನಿಸ್‌ನ ಅತ್ಯಂತ ಪ್ರತಿಷ್ಠಿತ ಟೂರ್ನಿಗಳಾಗಿರುವ ಗ್ರ್ಯಾನ್‌ಸ್ಲಾಂಗಳಲ್ಲಿ ಆಟಗಾರರ ಬಹುಮಾನ ಮೊತ್ತವನ್ನು ಹೆಚ್ಚಿಸಬೇಕೆಂದು ವಿಶ್ವದ ನಂ.1 ಟೆನಿಸಿಗರಾದ ಅರೈನಾ ಸಬಲೆಂಕಾ, ಯಾನಿಕ್ ಸಿನ್ನರ್ ಸೇರಿ ಹಲವು ಆಟಗಾರರು ಆಗ್ರಹಿಸಿದ್ದಾರೆ. ಇಲ್ಲದಿದ್ದರೆ ಟೂರ್ನಿ ಬಹಿಷ್ಕರಿಸುವ ಎಚ್ಚರಿಕೆ ನೀಡಿದ್ದಾರೆ.

ಫ್ರೆಂಚ್ ಓಪನ್ ಆಯೋಜಕರು ಇತ್ತೀಚೆಗಷ್ಟೇ ಬಹುಮಾನ ಮೊತ್ತವನ್ನು ಶೇ.10ರಷ್ಟು ಹೆಚ್ಚಿಸಿ, ಒಟ್ಟು ಮೊತ್ತ ₹685 ಕೋಟಿ ಇರಲಿದೆ ಎಂದು ಘೋಷಿಸಿದ್ದರು. ಆದರೆ ಇದರಲ್ಲಿ ಆಟಗಾರರ ಪಾಲು ಕಡಿಮೆ ಇದೆ ಎಂದು ಟೆನಿಸ್ ತಾರೆಯರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಸಬಲೆಂಕಾ, 'ನಾವು ಇಲ್ಲದಿದ್ದರೆ ಟೂರ್ನಿ ನಡೆಯಲ್ಲ. ಖಂಡಿತವಾಗಿಯೂ ನಮಗೆ ಶೇಕಡಾವಾರು ಹೆಚ್ಚಿನ ಸಂಭಾವನೆ ಸಿಗಬೇಕು. ಇಲ್ಲದಿದ್ದರೆ ನಾವು ಪಂದ್ಯ ಬಹಿಷ್ಕರಿಸಬೇಕು. ನಮ್ಮ ಹಕ್ಕುಗಳಿಗಾಗಿ ಹೋರಾಡಲು ಅದೇ ಏಕೈಕ ಮಾರ್ಗ ' ಎಂದಿದ್ದಾರೆ. ಇದಕ್ಕೆ ಕೊಕೊ ಗಾಫ್, ಎಲೆನಾ ರಬೈಕೆನಾ, ಜಾಸ್ಮಿನ್ ಪೌಲಿನಿ ಸೇರಿ ವಿಶ್ವದ ಅಗ್ರ ಟೆನಿಸಿಗರು ಧ್ವನಿಗೂಡಿಸಿದ್ದಾರೆ.

ಗೆಲುವಿನ ಹಳಿಗೆ ಮರಳಲು ಪಂಜಾಬ್ vs ಸನ್ ಫೈಟ್

ಈ ಪಂದ್ಯ ಗೆದ್ದರೆ ಹೈದರಾಬಾದ್ ನಂ.1

ಹೈದರಾಬಾದ್: ಈ ಬಾರಿ ಐಪಿಎಲ್‌ನಲ್ಲಿ ಸತತ ಗೆಲುವಿನಿಂದ ಅಂಕಪಟ್ಟಿಯಲ್ಲಿ ಮುಂಚೂಣಿಯಲ್ಲಿದ್ದ ಹೊರತಾಗಿಯೂ ಈಗ ಸೋಲಿನ ಸುಳಿಗೆ ಸಿಲುಕಿರುವ ಪಂಜಾಬ್ ಕಿಂಗ್ಸ್ ಹಾಗೂ ಸನ್‌ರೈಸರ್ಸ್ ಹೈದರಾಬಾದ್ ಬುಧವಾರ ಸೆಣಸಾಡಲಿವೆ.

ಪಂಜಾಬ್ 6 ಪಂದ್ಯಗಳ ಗೆಲುವಿನ ಬಳಿಕ ಕೊನೆ 2 ಪಂದ್ಯಗಳಲ್ಲಿ ಸೋತಿದೆ. ತಂಡ ಆಡಿರುವ 9 ಪಂದ್ಯಗಳಲ್ಲಿ 13 ಅಂಕಗಳಿಸಿದ್ದು, ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ. ಮತ್ತೊಂದೆಡೆ ಸತತ 5 ಗೆದ್ದಿದ್ದ ಸನ್‌ರೈಸರ್ಸ್ ಕೊನೆ ಪಂದ್ಯದಲ್ಲಿ ಕೋಲ್ಕತಾ ವಿರುದ್ಧ ಶರಣಾಗಿತ್ತು. ತಂಡ 12 ಅಂಕಗಳಿಸಿದ್ದು, 3ನೇ ಸ್ಥಾನದಲ್ಲಿದೆ. ಪಂಜಾಬ್ ವಿರುದ್ಧ ಪಂದ್ಯದಲ್ಲೂ ಗೆದ್ದರೆ ಅಗ್ರಸ್ಥಾನಕ್ಕೇರಲಿದೆ.

ಟಿ20 ರ‍್ಯಾಂಕಿಂಗ್: ನಂ.1 ಸ್ಥಾನದಲ್ಲೇ ಭಾರತ ಟೀಂ

ಪಟ್ಟಿಯಿಂದ ಫಿಜಿ, ಗ್ರೀಸ್, ಇಸ್ರೇಲ್ ಔಟ್

ದುಬೈ: ಹಾಲಿ ವಿಶ್ವ ಚಾಂಪಿಯನ್ ಭಾರತ ತಂಡ ಐಸಿಸಿ ಟಿ20 ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನ ಕಾಯ್ದುಕೊಂಡಿದೆ. ನೂತನ ರ‍್ಯಾಂಕಿಂಗ್ ಪಟ್ಟಿಯಲ್ಲಿ ಭಾರತ 275 ಅಂಕ ಹೊಂದಿದ್ದರೆ, ಇಂಗ್ಲೆಂಡ್ 2ನೇ ಹಾಗೂ ಆಸ್ಟ್ರೇಲಿಯಾ 3ನೇ ಸ್ಥಾನದಲ್ಲಿದೆ.

ಪಟ್ಟಿಯಲ್ಲಿ 98 ದೇಶ: ಕಳೆದ 3 ವರ್ಷಗಳಲ್ಲಿ ಕನಿಷ್ಠ 8 ಟಿ20 ಪಂದ್ಯ ಆಡದಿರುವ 4 ದೇಶಗಳಾದ ಫಿಜಿ, ಗಾಂಬಿಯಾ, ಗ್ರೀಸ್, ಇಸ್ರೇಲ್ ರ‍್ಯಾಂಕಿಂಗ್ ಪಟ್ಟಿಯಿಂದ ಹೊರಬಿದ್ದಿವೆ . ಈಗ 102 ಬದಲು 98 ದೇಶಗಳಿವೆ ಎಂದು ಐಸಿಸಿ ತಿಳಿಸಿದೆ.

ಸುದ್ದಿ ಸಿಂಚನ

ನೀಟ್ ಫಲಿತಾಂಶ ಆತಂಕ: ಮನೆ ಬಿಟ್ಟು ತೆರಳಿದ ವಿದ್ಯಾರ್ಥಿ ಪತ್ತೆ

ಉಡುಪಿ: ನೀಟ್ ಪರೀಕ್ಷೆಯಲ್ಲಿ ಕಡಿಮೆ ಅಂಕ ಬರಬಹುದೆಂಬ ಆತಂಕದಿಂದ ಮನೆ ಬಿಟ್ಟು ತೆರಳಿದ್ದ ವಿದ್ಯಾರ್ಥಿಯನ್ನು ಕೋಟ ಪೊಲೀಸರು ಕ್ಷಿಪ್ರ ಕಾರ್ಯಾಚರಣೆ ನಡೆಸಿ ಸಕಲೇಶಪುರದಲ್ಲಿ ಪತ್ತೆ ಹಚ್ಚುವಲ್ಲಿ ಯಶಸ್ವಿಯಾಗಿದ್ದಾರೆ. ನಾಪತ್ತೆಯಾಗಿದ್ದ ವಿದ್ಯಾರ್ಥಿಯನ್ನು ಕೋಟ ಮೂರುಕೈ ನಿವಾಸಿ ಅಭಿಷೇಕ್ (17) ಎಂದು ಗುರುತಿಸಲಾಗಿದೆ. ಆತ ಹಾಸ್ಟೆಲ್‌ನಲ್ಲಿ ವಾಸವಾಗಿದ್ದ. ಮೇ 3ರಂದು ಉಡುಪಿಯಲ್ಲಿ ನೀಟ್ ಪರೀಕ್ಷೆ ಬರೆದಿದ್ದು, ಮೇ 4ರಂದು ಹಾಸನದಲ್ಲಿರುವ ತಾಯಿಗೆ ಕರೆ ಮಾಡಿ ಮನೆಯಿಂದ ಮಣಿಪಾಲಕ್ಕೆ ಹೋಗುವುದಾಗಿ ತಿಳಿಸಿದ್ದ. ಆದರೆ ಸಂಜೆಯಾದರೂ ಮನೆಗೆ ವಾಪಸ್ಸಾಗದೇ ಇದ್ದುದರಿಂದ ಆತಂಕಗೊಂಡ ಪೋಷಕರು ಹುಡುಕಾಟ ಆರಂಭಿಸಿದರು. ಈ ವೇಳೆ ಮನೆಯಲ್ಲಿ ಅಭಿಷೇಕ್ ಬರೆದಿಟ್ಟಿದ್ದ ಪತ್ರ ಪತ್ತೆಯಾಗಿದ್ದು, ಅದರಲ್ಲಿ ನೀಟ್ ಪರೀಕ್ಷೆಯಲ್ಲಿ ಕಡಿಮೆ ಅಂಕ ಬರಬಹುದೆಂಬ ಭೀತಿಯನ್ನು ವ್ಯಕ್ತಪಡಿಸಿದ್ದಾನೆ ಎಂದು ತಿಳಿದುಬಂದಿದೆ. ಪ್ರಕರಣ ದಾಖಲಾಗುತ್ತಿದ್ದಂತೆಯೇ ಕೋಟ ಠಾಣೆಯ ಪೊಲೀಸರು ತಕ್ಷಣ ಕಾರ್ಯಪ್ರವೃತ್ತರಾಗಿ, ಅಭಿಷೇಕ್ ಧರ್ಮಸ್ಥಳದ ಮೂಲಕ ಸಕಲೇಶಪುರ ಕಡೆ ತೆರಳಿರುವ ಮಾಹಿತಿ ದೊರೆತಿದ್ದು, ಆತನನ್ನು ಸುರಕ್ಷಿತವಾಗಿ ಪತ್ತೆ ಹಚ್ಚಿ ಕರೆ ತಂದಿದ್ದಾರೆ. ನೀಟ್ ಪರೀಕ್ಷೆಯ ಫಲಿತಾಂಶದ ಭೀತಿಯಿಂದ ಮಾನಸಿಕ ಖಿನ್ನತೆಗೆ ಒಳಗಾಗಿದ್ದ ಆತ ಮನೆ ಬಿಟ್ಟು ಹೋಗಿದ್ದ ಎಂದು ತಿಳಿಸಲಾಗಿದೆ.

9, 10ರಂದು ರಾಜ್ಯ ಮಟ್ಟದ ಹಿರಿಯರ ಕ್ರಿಕೆಟ್ ಹಬ್ಬ



ಕ್ಲಬ್ ಪ್ರಧಾನ ಕಾರ್ಯದರ್ಶಿ ಕಿರಣ್ ಹೊಸಬೆಟ್ಟು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

• **ಕನ್ನಡಪ್ರಭ ವಾರ್ತೆ** ಮಂಗಳೂರು

ಸುರತ್ಕಲ್ ಸ್ಪೋರ್ಟ್ಸ್ ಆ್ಯಂಡ್ ಕಲ್ಚರಲ್ ಕ್ಲಬ್ ಸುರತ್ಕಲ್ ಮತ್ತು ಸುರತ್ಕಲ್ ಸ್ಪೋರ್ಟ್ಸ್ ಆ್ಯಂಡ್ ಕಲ್ಚರಲ್ ಸೇವಾ ಟ್ರಸ್ಟ್ ಜಂಟಿ ಆಶ್ರಯದಲ್ಲಿ ರಾಜ್ಯ ಮಟ್ಟದ 45 ವರ್ಷ ಮೇಲ್ಪಟ್ಟ ಆಟಗಾರರ ತಂಡಗಳ ಓವರ್ ಆರ್ಮ್ ಲಿಜೆಂಡ್ಸ್ ಕ್ರಿಕೆಟ್ ಲೀಗ್ ಸೀಸನ್ 5 'ಹಿರಿಯರ ಕ್ರಿಕೆಟ್ ಹಬ್ಬ' ಮೇ 9 ಮತ್ತು 10ರಂದು ಸುರತ್ಕಲ್ ಗೋವಿಂದದಾಸ ಕಾಲೇಜು ಕ್ರೀಡಾಂಗಣದಲ್ಲಿ ನಡೆಯಲಿದೆ ಎಂದು ಕ್ಲಬ್ ಪ್ರಧಾನ ಕಾರ್ಯದರ್ಶಿ ಕಿರಣ್ ಹೊಸಬೆಟ್ಟು ತಿಳಿಸಿದರು.

ಅವರು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ ಅವರು, ಮೇ 9ರಂದು ಬೆಳಗ್ಗೆ 8 ಗಂಟೆಗೆ ಉದ್ಘಾಟನಾ ಸಮಾರಂಭ ನಡೆಯಲಿದೆ. ಮುಂಬಯಿ ಬಂಟರ ಸಂಘದ ಮಾಜಿ ಅಧ್ಯಕ್ಷ ಡಾ.ಪಿ.ವಿ.ಶೆಟ್ಟಿ ಮುಂಬಯಿ ಅಧ್ಯಕ್ಷತೆ ವಹಿಸುವರು. ಚಿತ್ರಾಪುರ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ ಮತ್ತು ಮಠದ ಏಕಮಾತ್ರ ಅನುವಂಶಿಕ ಆಡಳಿತ ಮೊಕ್ತೇಸರ ಶ್ರೀ ವಿದ್ಯೇಂದ್ರತೀರ್ಥ ಶ್ರೀಪಾದರು ಆಶೀರ್ವಚನ ನೀಡುವರು. ಇಡ್ಯಾ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಅನುವಂಶಿಕ ಆಡಳಿ ಮೊಕ್ತೇಸರ ವೇ.ಮೂ.ಥೈ.ರಮಾನಂದ ಭಟ್ ಮತ್ತು ಶ್ರೀ ಮೂಕಾಂಬಿಕಾ ತಡಂಬೈಲ್ ಸುರತ್ಕಲ್ ಜ್ಯೋತಿಷ್ಯರಾದ ನಾಗೇಂದ್ರ ಭಾರಧ್ವಾಜ್ ದೀಪ ಪ್ರಜ್ವಲನೆ ಮಾಡುವರು. ಅಸ್ತ್ರ ಸಮೂಹ ಸಂಸ್ಥೆ ಆಡಳಿತ ನಿರ್ದೇಶಕ ಲಾಂಚುಲಾಲ್ ಪಂದ್ಯಾಟ ಉದ್ಘಾಟಿಸುವರು. ಮೇ 10ರಂದು ಸಂಜೆ 5ಕ್ಕೆ ಸಮಾರೋಪ ಸಮಾರಂಭ ನಡೆಯಲಿದ್ದು, ಕ್ಲಬ್‌ನ ಅಧ್ಯಕ್ಷ ಮಹಾಬಲ ಪೂಜಾರಿ ಅಧ್ಯಕ್ಷತೆ ವಹಿಸುವರು. ಸೇವ್ ಲೈಫ್ ಚಾರಿಟೇಬಲ್ ಟ್ರಸ್ಟ್‌ನ ಅರ್ಜುನ್ ಭಂಡಾರ್ಕರ್ ಬಹುಮಾನ ವಿತರಿಸುವರು. ಹಲವು ಗಣ್ಯರು ಭಾಗವಹಿಸುವರು.

ಪ್ರಥಮ ಬಹುಮಾನ ಟ್ರೋಫಿ ಹಾಗೂ ನಗದು 1,00,005 ರು., ದ್ವಿತೀಯ ಬಹುಮಾನ ಟ್ರೋಫಿ ಹಾಗೂ ನಗದು 50,005 ರು., ತೃತೀಯ ಮತ್ತು ಚತುರ್ಥ ಬಹುಮಾನ ಆಕರ್ಷಕ ಟ್ರೋಫಿ ಎಂದು ಪಂದ್ಯಾಟದ ಬಗ್ಗೆ ಮಾಹಿತಿ ನೀಡಿದರು.

ಕ್ಲಬ್ ಅಧ್ಯಕ್ಷ ಮಹಾಬಲ ಪೂಜಾರಿ, ಸದಸ್ಯ ಪುಷ್ಪರಾಜ್ ಶೆಟ್ಟಿ ಇದ್ದರು.

ಎಸ್‌ಎಂವಿಐಟಿ ವಿದ್ಯಾರ್ಥಿಗಳಿಗೆ ಹ್ಯಾಕಥಾನ್ ಬಹುಮಾನ



ಬಂಟಕಲ್ ಎಸ್‌ಎಂವಿಐಟಿ ವಿದ್ಯಾರ್ಥಿಗಳಿಗೆ ಹ್ಯಾಕಥಾನ್ ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನ ಲಭಿಸಿದೆ

• **ಕನ್ನಡಪ್ರಭ ವಾರ್ತೆ** ಕಾಪು

ಇಲ್ಲಿನ ಬಂಟಕಲ್‌ನ ಶ್ರೀ ಮಧ್ವ ವಾದಿರಾಜ ತಾಂತ್ರಿಕ ಮಹಾವಿದ್ಯಾಲಯದ ವಿದ್ಯಾರ್ಥಿಗಳಾದ ಪಿ. ಪ್ರಮೋದ್ ರಾವ್, ಸಾಗರ್‌ಎಸ್., ಮೋಹಿತ್ ಕೋಟ್ಯಾನ್ ಮತ್ತು ಪ್ರದ್ಯುಮ್ನ ಶೆಟ್ಟಿಗಾರ್‌ಇವರು ನಿರ್ಮಿಸಿದ್ದ ವಿಜ್ಞಾನ ಮಾದರಿಗೆ ಸೃಷ್ಟಿ 2026' ರಾಜ್ಯ ಮಟ್ಟದ ತಾಂತ್ರಿಕ ಪ್ರಾಜೆಕ್ಟ್ ಪ್ರದರ್ಶನ ಮತ್ತು ಹ್ಯಾಕಥಾನ್‌ನಲ್ಲಿ ದ್ವಿತೀಯ ಬಹುಮಾನ ಪಡೆದಿರುತ್ತಾರೆ.

ಈ ಸ್ಪರ್ಧೆಯನ್ನು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜ್ ಆಫ್ ಇಂಜಿನಿಯರಿಂಗ್ ಆಂಡ್ ಟೆಕ್ನಾಲಜಿಯು ಅಖಿಲ ಭಾರತ ವಿದ್ಯಾರ್ಥಿ ಪರಿಷತ್ ಇದರ ಸಹಯೋಗದೊಂದಿಗೆ ಸೃಷ್ಟಿ ಇನೋವೇಟಿವ್ ಎಕ್ಸ್‌ಚೇಂಜ್ 2026 ಕಾರ್ಯಕ್ರಮದ ಅಂಗವಾಗಿ ಏ. 28ರಿಂದ 30ರವರೆಗೆ ಆಯೋಜಿಸಿತ್ತು.

ವಿದ್ಯಾರ್ಥಿಗಳು ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಅಭಿವೃದ್ಧಿಪಡಿಸಿದ ಈ ಪ್ರಾಜೆಕ್ಟ್ ಮೂಲಕ ಆರೋಗ್ಯ ಸೇವೆಯಲ್ಲಿ ಎದುರಾಗುವ ಸವಾಲುಗಳನ್ನು ಪರಿಹರಿಸುವ ಮೂಲಕ ಸೇವೆಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸುವ ಉದ್ದೇಶವನ್ನು ಹೊಂದಿದೆ.

ವಿದ್ಯಾರ್ಥಿಗಳ ಈ ಸಾಧನೆಗೆ ಸಂಸ್ಥೆಯ ಆಡಳಿತ ಮಂಡಳಿಯವರು, ಪ್ರಾಂಶುಪಾಲರು ಹೃತ್ಪೂರ್ವಕ ಅಭಿನಂದನೆಗಳನ್ನು ವ್ಯಕ್ತಪಡಿಸಿರುತ್ತಾರೆ. ಈ ರೀತಿಯ ಯಶಸ್ಸು ವಿದ್ಯಾರ್ಥಿಗಳ ನಿಷ್ಠೆ, ಶ್ರಮ ಹಾಗೂ ಶಿಕ್ಷಣದ ಗುಣಮಟ್ಟವನ್ನು ಪ್ರತಿಬಿಂಬಿಸುತ್ತದೆ ಎಂದು ತಿಳಿಸಿದ್ದಾರೆ.

ಹೂಡಿಕೆ ನೆಪದಲ್ಲಿ ವೃದ್ಧರಿಗೆ 18 ಲಕ್ಷ ರು. ವಂಚನೆ

• **ಕನ್ನಡಪ್ರಭ ವಾರ್ತೆ** ಮಂಗಳೂರು

ಆನ್‌ಟ್ರೇಡಿಂಗ್, ಹೂಡಿಕೆ ನೆಪದಲ್ಲಿ 75 ವರ್ಷದ ವ್ಯಕ್ತಿಯೋರ್ವರು 18 ಲಕ್ಷ ರು.ಗೂ ಅಧಿಕ ಹಣ ಕಳೆದುಕೊಂಡಿರುವ ಘಟನೆ ಮಂಗಳೂರಿನಲ್ಲಿ ನಡೆದಿದೆ.

75 ವರ್ಷದ ವಂಚನೆಗೊಳಗಾದ ವ್ಯಕ್ತಿ 2025ರ ಡಿ.6ರಂದು ಮೊಬೈಲ್‌ನಲ್ಲಿ ಫೇಸ್ ಬುಕ್ ನೋಡುವಾಗ ಆನ್‌ಲೈನ್ ಟ್ರೇಡಿಂಗ್ ಬಗ್ಗೆ ನಿರ್ಮಲಾ ಸೀತಾರಾಮನ್ ಸ್ಪೀಚ್ ಇರುವ ವಿಡೀಯೋ ನೋಡಿ ಆನ್‌ಲೈನ್ ಟ್ರೇಡಿಂಗ್ ಮಾಡುವ ಉದ್ದೇಶದಿಂದ ಅದರ ಕೆಳಗೆ ಇದ್ದ ಲಿಂಕ್ ನ್ನು ಕ್ಲಿಕ್ ಮಾಡಿ, ನೋಂದಾಯಿಸಿದ್ದಾರೆ. ನಂತರ ಅವರಿಗೆ ಕರೆಯೊಂದು ಬಂದಿದ್ದು, ತನ್ನ ಹೆಸರು ಮೀನಾಕ್ಷಿ ಎಂದು ಪರಿಚಯ ಮಾಡಿಕೊಂಡು ಡಿ.6ರಂದು 21,000 ರು. ಹಣವನ್ನು ಅವರು ಮೀನಾಕ್ಷಿ ಎಂಬಾಕೆ ನೀಡಿದ ಬ್ಯಾಂಕ್ ಖಾತೆಗೆ ವರ್ಗಾಹಿಸಿದ್ದಾರೆ. ಡಿ.15ರಂದು ಅಕ್ಷರಗೌಡ ಎಂಬವರು ಆನಂದ ಉನ್ನಿಕೃಷ್ಣರವರ ಅಸಿಸ್ಟೆಂಟ್ ಎಂದು ಹೇಳಿ ಟ್ರೇಡ್ ಮಾಡುವ ಬಗ್ಗೆ ಮಾಹಿತಿ ನೀಡಿದ್ದು ಅದರಂತೆ ವಾಟ್ಸಪ್ ಮೇಸೆಜ್ ಕಳುಹಿಸಿದ್ದು ಅದರಲ್ಲಿ ಟ್ರೇಡ್ ಮಾಡುವ ಬಗ್ಗೆ ಮಾಹಿತಿ ನೀಡುತ್ತಾ ಹೆಚ್ಚಿನ ಹಣ ನೀಡುವುದಾಗಿ ಹೇಳಿದ್ದಾರೆ. ಡಿ.18ರಂದು ಆರೋಪಿತನ ಖಾತೆಗೆ 3,00,000 ರು. ಹಣವನ್ನು ಅವರು ತಿಳಿಸಿದಂತೆ ಹಣ ವರ್ಗಾವಣೆ ಮಾಡಿದ್ದು, ನಂತರ ನಿಮಗೆ ಹೆಚ್ಚಿನ ಹಣ ನೀಡುವುದಾಗಿ ಹೇಳಿ ಡಿ.26ರಂದು ಆರೋಪಿತನ ಖಾತೆಗೆ 7,00,000 ರು. ಹಣವನ್ನು ಅವರು ತಿಳಿಸಿದಂತೆ ಹಣ ವರ್ಗಾವಣೆ ಮಾಡಿದ್ದಾರೆ. 2026ರ ಜ.6ರಂದು ಆರೋಪಿತನ ಖಾತೆಗೆ 3,00,000 ರು. ಹಣವನ್ನು ವರ್ಗಾಯಿಸಿದ್ದಾರೆ. ಜ.12ರಂದು 5,60,000 ರು. ಹಣವನ್ನು ವರ್ಗಾಯಿಸಿದ್ದಾರೆ. ಈ ರೀತಿಯಲ್ಲಿ ಬೇರೆ ಬೇರೆ ದಿನದಂತೆ ಬೇರೆ ಬೇರೆ ಖಾತೆಗೆ ಒಟ್ಟು 18,81,000 ರು. ಹಣವನ್ನು ಹಾಕಿಸಿ 1 ಕೋಟಿ ರೂಪಾಯಿ ಹೆಚ್ಚಿನ ಹಣವನ್ನು ನೀಡುವುದಾಗಿ ನಂಬಿಸಿ, ಯಾವುದೇ ಲಾಭವನ್ನು ನೀಡದೆ ವಂಚಿಸಿದ್ದಾರೆ ಎಂದು ಆರೋಪಿಸಲಾಗಿದೆ. ಈ ಬಗ್ಗೆ ಕಂಕನಾಡಿ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೆಂಗಳೂರು ಪೊಲೀಸರಿಂದ ಮಂಗಳೂರಿನಲ್ಲಿ ತನಿಖೆ

• **ಕನ್ನಡಪ್ರಭ ವಾರ್ತೆ** ಮಂಗಳೂರು

ಬೆಂಗಳೂರಿನಲ್ಲಿ ನಡೆದ ಚಿನ್ನಾಭರಣ ಕಳವು ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಂಗಳೂರು ಪೊಲೀಸರು ಮಂಗಳೂರಿನ ಜ್ಯುವೆಲ್ಲರಿಯೊಂದರಲ್ಲಿ ತನಿಖೆ ನಡೆಸಿದ್ದಾರೆ.

ಬೆಂಗಳೂರಿನ ಬ್ಯಾಡರಹಳ್ಳಿ ಠಾಣಾ ವ್ಯಾಪ್ತಿಯಲ್ಲಿ ಶಂಕರ್‌ಶ್ಯಾಮ್ ಸುಂದರ್‌ಎಂಬವರ ಮನೆಯವರು ಕಾಶಿಗೆ ತೆರಳಿದ್ದ ವೇಳೆ ಕಿಟಕಿ ಬಾಗಿಲು ಮುರಿದು ಒಳ ನುಗ್ಗಿದ ಕಳ್ಳರು 1.96 ಕೋಟಿ ರು. ಮೌಲ್ಯದ 783 ಗ್ರಾಂ. ಚಿನ್ನ, 10 ಲಕ್ಷ ರು.ನಗದು ಕಳವು ಮಾಡಿದ್ದರು. ಅಂತರಾಜ್ಯ ಕಳ್ಳ ದೊಡ್ಡಬಳ್ಳಾಪುರದ ಗಂಗಾಧರ್‌ಮತ್ತು ಆತನ ಇಬ್ಬರು ಸಹಚರರು ಈ ಕಳ್ಳತನ ಕೃತ್ಯ ನಡೆಸಿದ್ದರು.

ಆರೋಪಿಗಳಲ್ಲಿ ಒರ್ವನಾದ ದೊಡ್ಡಬಳ್ಳಾಪುರದ ಗಂಗಾಧರ್ ಕಳವು ಮಾಡಿದ ಚಿನ್ನವನ್ನು ಬೆಂಗಳೂರಿನಲ್ಲಿ ಜ್ಯುವೆಲ್ಲರಿ ಹೊಂದಿರುವ ಹೊಂದಿರುವ ಮಂಗಳೂರು ಮೂಲದ ವ್ಯಕ್ತಿಯಲ್ಲಿ ಮಾರಾಟ ಮಾಡಲು ತಿಳಿಸಿದ್ದು, ಆತ ತನ್ನ ಪರಿಚಯದ ರಥಬೀದಿಯ ಜ್ಯುವೆಲ್ಲರಿ ಮಾಲಕರಿಗೆ 54 ಲಕ್ಷ ರು.ಗೆ ಮಾರಾಟ ಮಾಡಿ, ತನ್ನ ಪಾಲಿನ ಹಣ ಪಡೆದು ಉಳಿದ ಹಣವನ್ನು ಗಂಗಾಧರ್‌ಗೆ ನೀಡಿದ್ದ.

ಈ ನಡುವೆ ಚಿಕ್ಕಮಗಳೂರಿನ ಲಕ್ಕವಳ್ಳಿ ಠಾಣಾ ವ್ಯಾಪ್ತಿಯಲ್ಲಿ ನಡೆದ ಕಳ್ಳತನ ಪ್ರಕರಣವೊಂದರಲ್ಲಿ ಗಂಗಾಧರನನ್ನು ಅಲ್ಲಿನ ಪೊಲೀಸರು ಬಂಧಿಸಿ, ವಿಚಾರಣೆ ನಡೆಸಿದಾಗ ಬೆಂಗಳೂರಿನ ಮನೆ ಕಳ್ಳತನ ಪ್ರಕರಣ ಬೆಳಕಿಗೆ ಬಂದಿದೆ. ಅದರಂತೆ ಬೆಂಗಳೂರು ಪೊಲೀಸರು ಆತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದು, ಈ ವೇಳೆ ಆತ ಇನ್ನಷ್ಟು ಮಾಹಿತಿ ನೀಡಿದ್ದಾನೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಂಗಳೂರು ಪೊಲೀಸರು ರಥಬೀದಿಯ ಜ್ಯುವೆಲ್ಲರಿ ಮಾಲಕರಿಗೆ ನೋಟೀಸ್ ನೀಡಿದ್ದರು. ಮಾಲಕ ನಾಪತ್ತೆಯಾಗಿದ್ದು, ಸರ್ಚ್ ವಾರಂಟ್ ಸಹಿತ ಸೋಮವಾರ ಸಂಜೆ ಬೆಂಗಳೂರು ಪೊಲೀಸರು ಮಂಗಳೂರಿಗೆ ಆಗಮಿಸಿ ಜ್ಯುವೆಲ್ಲರಿ ಶೋಧ ನಡೆಸಿ, ಸಿಬ್ಬಂದಿ ಹಾಗೂ ಇತರರನ್ನು ವಿಚಾರಣೆ ನಡೆಸಿದ್ದಾರೆ.

ಬಳಂಜ ಪಂಚಲಿಂಗೇಶ್ವರ ದುರ್ಗಾಪರಮೇಶ್ವರಿ ಕ್ಷೇತ್ರ: ಭಜನಾ ಸತ್ಸಂಗ

• **ಕನ್ನಡಪ್ರಭವಾರ್ತೆ** ಬೆಳ್ತಂಗಡಿ

ಬಳಂಜ ಶ್ರೀ ಪಂಚಲಿಂಗೇಶ್ವರ ಶ್ರೀ ದುರ್ಗಾಪರಮೇಶ್ವರಿ ಕ್ಷೇತ್ರದಲ್ಲಿ ಡಾ.ಸೋನಾ ರಾಮ್ ಮತ್ತು ಶಕ್ತಿ ರಾಮ್ ಅವರು ತಮ್ಮ ಭಕ್ತಾದಿಗಳ ತಂಡದೊಂದಿಗೆ ದೇವಸ್ಥಾನಕ್ಕೆ ಆಗಮಿಸಿ ಭಜನಾ ಸತ್ಸಂಗವನ್ನು ನೆರವೇರಿಸಿದರು.

ಡಾ ಸೋನಾ ರಾಮ್ ಮತ್ತು ಶಕ್ತಿ ರಾಮ್ ಅವರು ದುಬೈಯಲ್ಲಿ ಸಾವಿರಾರು ಭಾರತೀಯರಿಗೆ ಉದ್ಯೋಗದಾತರಾಗಿದ್ದು, ದುಬೈನಂತಹ ದೇಶದಲ್ಲಿ ತಮಿಳ್ ರೇಡಿಯೋವನ್ನು ಕಳೆದ ಒಂದು ದಶಕಗಳಿಂದ ನಡೆಸಿಕೊಂಡು ಬರುತ್ತಿದ್ದಾರೆ. ತಮಿಳುನಾಡಿನ ಶಿವಕಾಶಿ, ಮಧುರೈ ಮೀನಾಕ್ಷಿ ದೇವಸ್ಥಾನ ಸೇರಿದಂತೆ ಅನೇಕ ಧಾರ್ಮಿಕ ಸಂಸ್ಥೆಗಳಿಗೆ ಪೋಷಕರಾಗಿದ್ದಾರೆ. ಬಳಂಜ ದೇವಳದಲ್ಲಿ ಸುಮಾರು 50 ಜನರ ತಂಡ ಆಗಮಿಸಿ ಸತ್ಸಂಗ ನೆರವೇರಿಸಿದರು.

ಕ್ಷೇತ್ರದ ವತಿಯಿಂದ ಅವರನ್ನು ಆಡಳಿತ ಮೊಕ್ತೆಸರ ಶೀತಲ್ ಪಡಿವಾಳ್, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಸತೀಶ್ ರೈ ಬಾರ್ದಡ್ಕ, ಗುರು ಹೆಗ್ಡೆ, ಪ್ರಭಾಕರ ಹೆಗ್ಡೆ ಕೋಡಿ, ಚಂದ್ರಶೇಖರ ಪಿ.ಕೆ, ದಿನೇಶ್ ಪಿ.ಕೆ, ಜಗದೀಶ್ ರೈ, ವಿನು ಬಳಂಜ, ಸಂತೋಷ್ ಸಾಲಿಯಾನ್ ಕಾಪಿನಡ್ಕ, ಚಿತ್ತರಂಜನ್ ಹೆಗ್ಡೆ, ರತ್ನರಾಜ್ ಜೈನ್ ಪೇರಂದಬೈಲ್, ಗಣೇಶ್ ಬೊಂಟ್ರೊಟ್ಟು, ಸದಾನಂದ ಬೊಂಟ್ರೊಟ್ಟು, ಮನೋಹರ್‌ಬಳಂಜ, ಸುನಂದ ಕುಳೆಂಜಿರೋಡಿ ಗುತ್ತು, ಸತೀಶ್ ಶೆಟ್ಟಿ ಕುರೇಲ್ಯ, ಅರ್ಚಕರಾದ ಸುರೇಶ್ ಭಟ್, ಮಂಜುನಾಥ್ ಭಟ್, ವಿಕ್ರಮ್ ಭಟ್, ಮತ್ತು ಊರವರು ಸ್ವಾಗತಿಸಿದರು. ಕ್ಷೇತ್ರದ ವತಿಯಿಂದ ಭಜನಾ ತಂಡವನ್ನು ಗೌರವಿಸಲಾಯಿತು. ಉದ್ಯಮಿ ಅಶ್ವಥ್ ಹೆಗ್ಡೆ ನೇತೃತ್ವ ವಹಿಸಿದ್ದರು.




3 ಈಡಿಯೆಟ್ಸ್ ಸೀಕ್ವೆಲ್‌ನಲ್ಲಿ ವಿಕ್ಕಿ ಕೌಶಲ್


ನಾಲ್ಕನೇ ಈಡಿಯೆಟ್ ಆಗಿ ನಟನೆ

• **ಕನ್ನಡಪ್ರಭ** ಸಿನಿವಾರ್ತೆ

ಯಶಸ್ವಿ ಬಾಲಿವುಡ್ ಸಿನಿಮಾ '3 ಈಡಿಯೆಟ್ಸ್'ನ ಎರಡನೇ ಭಾಗ ಹೊರಬರುತ್ತಿರುವುದನ್ನು ಅಮೀರ್ ಖಾನ್ ದೃಢಪಡಿಸಿದ್ದಾರೆ. ವಿಶೇಷ ಅಂದರೆ ಈ ಸಿನಿಮಾ ಶೀರ್ಷಿಕೆ '4 ಈಡಿಯೆಟ್ಸ್' ಎಂದಾಗಿದ್ದು, ನಾಲ್ಕನೇ ಈಡಿಯೆಟ್ ಆಗಿ ವಿಕ್ಕಿ ಕೌಶಲ್ ಎಂಟ್ರಿ ಕೊಟ್ಟಿದ್ದಾರೆ ಎನ್ನಲಾಗಿದೆ. ಚಿತ್ರದ ಶೂಟಿಂಗ್ ಮುಂದಿನ ವರ್ಷ ಟೇಕಾಫ್ ಆಗಲಿದ್ದು, ಅಷ್ಟೊತ್ತಿಗೆ ವಿಕ್ಕಿ ತನ್ನ 'ಮಹಾವತಾರ' ಸಿನಿಮಾ ಶೂಟಿಂಗ್ ಮುಗಿಸಿ ಅಮೀರ್ ಖಾನ್ ಟೀಮ್ ಸೇರಿಕೊಳ್ಳಲಿದ್ದಾರೆ ಎಂದು ಮೂಲಗಳು ತಿಳಿಸಿವೆ. ರಾಜ್‌ಕುಮಾರ್ ಹಿರಾನಿ ನಿರ್ದೇಶನದ ಈ ಸಿನಿಮಾದಲ್ಲಿ ಅಮೀರ್ ಖಾನ್, ಮಾಧವನ್, ಶರ್ಮಾನ್ ಜೋಷಿ ಇದ್ದಾರೆ.



ಯಶ್ ಟಾಕ್ಸಿಕ್ ಚಿತ್ರದ ದೃಶ್ಯ ಎಡಿಟ್ ಮಾಡಲು ಹೇಳಿಲ್ಲ! ಕಿಯಾರಾ



ಗಾಸಿಪ್ 'ಅಟ್ಟರ್ ನಾನ್‌ಸೆನ್ಸ್' ಎಂದ ಟಾಕ್ಸಿಕ್ ನಾಯಕಿ



ಕಿಯಾರಾ ಅಡ್ವಾಣಿ

• **ಕನ್ನಡಪ್ರಭ** ಸಿನಿವಾರ್ತೆ

'ಅಟ್ಟರ್ ನಾನ್‌ಸೆನ್ಸ್!' – ಇದು 'ಟಾಕ್ಸಿಕ್ ನಟಿ ಕಿಯಾರಾ ಅಡ್ವಾಣಿ ಅವರ ಒನ್ ಲೈನ್ ರಿಯಾಕ್ಷನ್.

ವಿಶ್ವಮಟ್ಟದಲ್ಲಿ ಸುದ್ದಿ ಮಾಡಿರುವ ಯಶ್ ನಟನೆಯ 'ಟಾಕ್ಸಿಕ್' ಸಿನಿಮಾದಲ್ಲಿ ಬಾಲಿವುಡ್ ನಟಿ ಕಿಯಾರಾ ಅಡ್ವಾಣಿ ನಾಯಕಿಯಾಗಿ ಅಭಿನಯಿಸಿದ್ದಾರೆ. ಇದರಲ್ಲಿ ಯಶ್ ಹಾಗೂ ಕಿಯಾರಾ ನಡುವೆ ಇಂಟಿಮೇಟ್ ದೃಶ್ಯಗಳಿವೆ ಎನ್ನಲಾಗಿದೆ.

ಇತ್ತೀಚೆಗೆ 'ಟಾಕ್ಸಿಕ್' ಸಿನಿಮಾವನ್ನು ವೀಕ್ಷಿಸಿದ ಕಿಯಾರಾ ಆ ಬೋಲ್ಡ್ ದೃಶ್ಯಗಳನ್ನು ಕಂಡು ನರ್ವಸ್ ಆಗಿ ಅದನ್ನು ಎಡಿಟ್ ಮಾಡುವಂತೆ ಒತ್ತಾಯಿಸಿದ್ದಾರೆ ಎಂಬ ದಟ್ಟ ವದಂತಿ ಹಬ್ಬಿತ್ತು. ಈ ಗಾಳಿಸುದ್ದಿ ಹೆಚ್ಚಾಗುತ್ತಿರುವಂತೆ ಕಿಯಾರಾ ಇದಕ್ಕೆ ಸ್ಪಷ್ಟನೆ ಕೊಟ್ಟಿದ್ದಾರೆ.

'ಇದೆಲ್ಲ ಪಕ್ಕಾ ಅಸಂಬದ್ಧ' ಎನ್ನುವ ಮೂಲಕ ಚಿತ್ರದ ಬೋಲ್ಡ್ ದೃಶ್ಯಗಳ ಬಗ್ಗೆ ತನಗೆ ಯಾವುದೇ ತಕರಾರು ಇಲ್ಲ ಎಂಬುದನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಪುತ್ರಿ ಸರಾಯಾ ಜನನದ ಬಳಿಕ ಹೊರಬರುತ್ತಿರುವ ಕಿಯಾರಾ ಮೊದಲ ಸಿನಿಮಾ 'ಟಾಕ್ಸಿಕ್' ಆಗಿದ್ದು, ಇದರ ಹೊಸ ಬಿಡುಗಡೆ ದಿನಾಂಕ ಇನ್ನಷ್ಟೇ ಘೋಷಣೆಯಾಗಬೇಕಿದೆ.



ರಿಷಬ್ ಶೆಟ್ಟಿ



ಶಿವರಾಜ್ ಕುಮಾರ್

ವಿಜಯ್‌ಗೆ ಅಭಿನಂದಿಸಿದ ಶಿವಣ್ಣ, ರಿಷಬ್ ಶೆಟ್ಟಿ

• **ಕನ್ನಡಪ್ರಭ** ಸಿನಿವಾರ್ತೆ

ಟಿವಿಕೆ ನಾಯಕ, ಸೂಪರ್‌ಸ್ಟಾರ್ ವಿಜಯ್ ಗೆಲುವಿಗೆ ಶಿವರಾಜ್ ಕುಮಾರ್, ರಿಷಬ್ ಶೆಟ್ಟಿ ಅಭಿನಂದಿಸಿದ್ದಾರೆ.

'ವಿಜಯ್ ಅವರೇ ಈ ಗೆಲುವಿಗೆ ನೀವು ಅರ್ಹರು' ಎಂದಿರುವ ಶಿವಣ್ಣ, 'ಹಿಂದೊಮ್ಮೆ ನಾನು ಟಿವಿಕೆ ಅಂದರೆ ಟ್ರೈ ವಿಜಯ್ ಆ್ಯಸ್ ಕಿಂಗ್ ಎಂದು ತಮಾಷೆಯಾಗಿ ಹೇಳಿದ್ದೆ. ಆ ಮಾತನ್ನು ನಿಜ ಮಾಡಿ ನೀವಿಂದು ರಾಜನಂತೆ ಎತ್ತರಕ್ಕೆ ಬೆಳೆದು ನಿಂತಿದ್ದೀರಿ. ಎಷ್ಟೇ ಟೀಕೆ ಬಂದರೂ ಮೌನವಾಗಿದ್ದು, ಕೆಲಸದ ಮೂಲಕವೇ ಉತ್ತರ ಕೊಡುವುದು ಎಲ್ಲಕ್ಕಿಂತ ದೊಡ್ಡ ಗೆಲುವು. ತಮಿಳುನಾಡಿನ ಜನತೆಗೆ ನೀಡಿದ ಭರವಸೆಗಳನ್ನು ಈಡೇರಿಸುವಂತಾಗಲಿ, ಅಭಿವೃದ್ಧಿ ನಿರಂತರವಾಗಿರಲಿ' ಎಂದಿದ್ದಾರೆ.

ರಿಷಬ್ ಶೆಟ್ಟಿ, 'ತಮಿಳುನಾಡಿನ ರಾಜಕೀಯ ಇತಿಹಾಸದಲ್ಲಿ ಹೊಸ ಅಧ್ಯಾಯ ಬರೆದಿರುವ ವಿಜಯ್ ಅವರಿಗೆ ಹೃದಯಪೂರ್ವಕ ಅಭಿನಂದನೆಗಳು. ನಿಮ್ಮ ನಾಯಕತ್ವದಲ್ಲಿ ರಾಜ್ಯ ಅತ್ಯುತ್ತಮ ಅಭಿವೃದ್ಧಿ ಕಾಣಲಿ. ಈ ಸಾಧನೆ ಯುವಕರಿಗೆ ಸ್ಫೂರ್ತಿಯಾಗಲಿ' ಎಂದಿದ್ದಾರೆ. ರಜನಿಕಾಂತ್, ಕಮಲ್‌ಹಾಸನ್, ಪೂಜಾ ಹೆಗ್ಡೆ, ರಶ್ಮಿಕಾ ಮಂದಣ್ಣ, ಟೈಗರ್ ಶ್ರಾಫ್, ನಿರ್ದೇಶಕರಾದ ರಾಮ್‌ಗೋಪಾಲ್ ವರ್ಮಾ, ಸಂದೀಪ್ ರೆಡ್ಡಿ ವಂಗಾ ಸೇರಿ ಚಿತ್ರರಂಗದ ಹಲವರು ಅಭಿನಂದನೆ ಸಲ್ಲಿಸಿದ್ದಾರೆ.



ವಿಜಯ್

ತುಮಕೂರಿಗೂ ನನಗೂ ಹತ್ತಿರದ ನಂಟು: ಗಣೇಶ್


ಬೃಂದಾವಿಹಾರಿ ಚಿತ್ರದ ಆಡಿಯೋ ಬಿಡುಗಡೆ

• **ಕನ್ನಡಪ್ರಭ** ಸಿನಿವಾರ್ತೆ

ಗಣೇಶ್ ಅಭಿನಯದ 'ಬೃಂದಾವಿಹಾರಿ' ಚಿತ್ರದ 'ರಾಧಾ ರಾಧಾ...' ಎನ್ನುವ ಹಾಡನ್ನು ತುಮಕೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಬಿಡುಗಡೆ ಮಾಡಲಾಗಿದೆ. ಈ ಹಾಡಿಗೆ ಡಾ. ವಿ.ನಾಗೇಂದ್ರ ಪ್ರಸಾದ್ ಸಾಹಿತ್ಯ, ಹೇಶಮ್ ಅಬ್ದುಲ್ ವಹಾಬ್ ಸಂಗೀತವಿದೆ. ಸಿದ್ ಶ್ರೀರಾಮ್ ಹಾಗೂ ಚಿನ್ಮಯಿ ಹಾಡಿದ್ದಾರೆ.

ಗಣೇಶ್, 'ತುಮಕೂರಿಗೂ, ನನಗೂ ಹತ್ತಿರದ ನಂಟು. ನಾನು ಓದಿದ್ದು ನೆಲಮಂಗಲದಲ್ಲಿ. ಆಗಾಗ ತುಮಕೂರಿಗೆ ಬರುತ್ತಿದ್ದೆ. ಈಗ ನನ್ನ ಅಭಿನಯದ ಚಿತ್ರದ ಹಾಡು ತುಮಕೂರಿನಲ್ಲಿ ಬಿಡುಗಡೆಯಾಗಿದ್ದು ಬಹಳ ಖುಷಿಯಾಗಿದೆ. ನಾನು ನಾಯಕ ನಟನಾಗಿ 20 ವರ್ಷಗಳಾಗಿವೆ. 'ಕಾಮಿಡಿ ಟೈಮ್' ಕಾರ್ಯಕ್ರಮವೇ ನನ್ನನ್ನು ಚಿತ್ರರಂಗಕ್ಕೆ ಕರೆತಂದಿದ್ದು' ಎಂದರು.

ಸಮೃದ್ಧಿ ವಿ. ಮಂಜುನಾಥ್ ನಿರ್ಮಾಣದ ಚಿತ್ರವನ್ನು ಶ್ರೀನಿವಾಸರಾಜು ನಿರ್ದೇಶಿಸಿದ್ದಾರೆ. ದೇವಿಕಾ ಭಟ್ ನಾಯಕಿ.



ಗಣೇಶ್ ದೇವಿಕಾ ಭಟ್

ಇತರೆ

ಸುದ್ದಿ ಸಿಂಚನ

ಸಿಇಟಿ ಮೀಸಲು: 11ರಿಂದ ದಾಖಲೆಗಳ ಪರಿಶೀಲನೆ

ಬೆಂಗಳೂರು: ಪ್ರಸಕ್ತ ಸಾಲಿನ ಯುಜಿ-ಸಿಇಟಿಯಲ್ಲಿ ವಿವಿಧ ಅರ್ಹತಾ ಕಂಡಿಕೆಯಡಿ ಮೀಸಲಾತಿ ಕೋರಿರುವ ಅಭ್ಯರ್ಥಿಗಳ ಮೂಲ ದಾಖಲೆಗಳ ಪರಿಶೀಲನೆಯನ್ನು ಮೇ 11ರಿಂದ 22ರವರೆಗೆ ನಡೆಸಲಾಗುವುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ತಿಳಿಸಿದೆ. ಪರಿಶೀಲನೆಗೆ ಹಾಜರಾಗಿ ಅರ್ಹತೆ ಪಡೆಯುವ ಅಭ್ಯರ್ಥಿಗಳಿಗೆ ಮಾತ್ರ ಆನ್‌ಲೈನ್ ಸೀಟು ಹಂಚಿಕೆಯಲ್ಲಿ ಭಾಗವಹಿಸಲು ಹಾಗೂ ಆಪ್ಷನ್ಸ್ ದಾಖಲಿಸಲು ಅವಕಾಶ ನೀಡಲಾಗುತ್ತದೆ. ನಗರದ ಮಲ್ಲೇಶ್ವರದ ಕೆಇಎ ಕಚೇರಿಯಲ್ಲಿ ನಡೆಯುವ ದಾಖಲೆ ಪರಿಶೀಲನೆಗೆ ಅಭ್ಯರ್ಥಿಗಳು ಬರುವ ಮುನ್ನ ವೆಬ್‌ಸೈಟ್‌ನಲ್ಲಿ ನೀಡಿರುವ ಲಿಂಕ್‌ನಲ್ಲಿ ಸ್ಲಾಟ್ ಬುಕ್ ಮಾಡಿಕೊಂಡು ಬರಬೇಕು. ಮೇ 7ರಿಂದ ಸ್ಲಾಟ್ ಬುಕ್ ಲಿಂಕ್ ತೆರೆದುಕೊಳ್ಳಲಿದೆ.

ಮತಗಳನ್ನು ಅಮಾನ್ಯ ಮಾಡುವುದೇ ಬಿಜೆಪಿಗರ ದೊಡ್ಡತನ: ಸಚಿವ ಲಾಡ್

ಬೆಂಗಳೂರು: ಮತ ಎಣಿಕೆ ವೇಳೆ ಮಾನ್ಯಗೊಂಡಿದ್ದ ಮತಗಳನ್ನು ನಂತರ ಅಮಾನ್ಯ ಮಾಡುವುದೇ ಬಿಜೆಪಿಯವರ ದೊಡ್ಡತನ. ಇದು ಈಗ ಅವರಿಗೆ ಸ್ವಲ್ಪ ದಿನ ಮಜಾ ಕೊಡಬಹುದು. ಮುಂದೆ ಇದರ ಪರಿಣಾಮ ಅವರಿಗೆ ಅರ್ಥವಾಗಲಿದೆ ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಹೇಳಿದರು. ನಗರದಲ್ಲಿ ಮಂಗಳವಾರ ಮಾಧ್ಯಮದವರೊಂದಿಗೆ ಮಾತನಾಡಿ, ಶೃಂಗೇರಿ ಕ್ಷೇತ್ರದ ಅಂಚೆ ಮತಗಳ ಮರು ಎಣಿಕೆಯಲ್ಲಿ ಬಿಜೆಪಿ ಅಭ್ಯರ್ಥಿ ಜೀವರಾಜ್ ಅವರ ಗೆಲುವಿನ ಕುರಿತು ಕೇಳಿದಾಗ, ಅಲ್ಲಿ ಈಗಾಗಲೇ ಅಂಚೆ ಮತಪತ್ರಗಳ ಎಣಿಕೆ ಆಗಿತ್ತು. ಆಗ ಮಾನ್ಯ ಆಗಿದ್ದ ಮತಗಳು ಈಗ ಅಮಾನ್ಯ ಆಗಿವೆ ಎಂಬುದು ಕಂಡುಬರುತ್ತಿದೆ. ಇಲ್ಲಿ ಪ್ರಶ್ನೆ ಇರುವುದು ಒಮ್ಮೆ ಮಾನ್ಯ ಆಗಿದ್ದ ಮತಗಳು ಈಗ ಹೇಗೆ ಅಮಾನ್ಯ ಆದವು ಎನ್ನುವುದು ಎಂದರು.

ಗ್ಯಾಸ್ ಜಿಎಸ್‌ಟಿ ಕಡಿತಕ್ಕೆ ವಿತ್ತ ಸಚಿವೆಗೆ ಪತ್ರ ಬರೆದ ಹೋಟೆಲ್‌ಗಳ ಸಂಘ

ಬೆಂಗಳೂರು: ವಾಣಿಜ್ಯ ಬಳಕೆಯ ಅನಿಲ ಸಿಲಿಂಡರ್‌ಗಳ ಜಿಎಸ್‌ಟಿಯನ್ನು ಶೇ.18 ರಿಂದ 5ಕ್ಕೆ ಇಳಿಸಬೇಕು ಎಂದು ಬೆಂಗಳೂರು ಹೋಟೆಲ್‌ಗಳ ಸಂಘದಿಂದ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಮನವಿ ಮಾಡಲಾಗಿದೆ. ಈ ಬಗ್ಗೆ ಸಂಘದ ಗೌರವಾಧ್ಯಕ್ಷ ಪಿ.ಸಿ.ರಾವ್ ಅವರು ಪತ್ರ ಬರೆದಿದ್ದು, ವಾಣಿಜ್ಯ ಬಳಕೆಯ ಅನಿಲ ಸಿಲಿಂಡರ್‌ಗಳ ಜಿಎಸ್‌ಟಿಯನ್ನು ಶೇ.18 ರಿಂದ 5ಕ್ಕೆ ಇಳಿಸಬೇಕು. ಹೋಟೆಲ್‌ಗಳು ಆತಿಥ್ಯ ವಲಯದಲ್ಲಿದ್ದು ಹೆಚ್ಚಿನ ಪ್ರಮಾಣದಲ್ಲಿ ಉದ್ಯೋಗ ನೀಡುತ್ತಿವೆ. ನಾವು ತರಕಾರಿ, ಹಾಲು, ಹಣ್ಣುಗಳನ್ನು ಅಧಿಕ ಪ್ರಮಾಣದಲ್ಲಿ ಖರೀದಿ ಮಾಡುವುದರಿಂದ ಕೃಷಿಕರಿಗೂ ಸಹಾಯಕವಾಗುತ್ತಿದೆ. ಆದ್ದರಿಂದ ನಮ್ಮ ಬೇಡಿಕೆಯನ್ನು ಪರಿಗಣಿಸಬೇಕು ಎಂದು ವಿವರಿಸಿದ್ದಾರೆ.

ಮುಂದಿನ ವಾರ ಸಿಎಂ ಸಿದ್ದು, ಡಿಕೆಶಿಗೆ ದೆಹಲಿಗೆ ಬುಲಾವ್?

ಮೊದಲ ಪುಟದಿಂದ

ಹೀಗಾದಲ್ಲಿ ಹೈಕಮಾಂಡ್ ಸಿಎಂ ಹಾಗೂ ಡಿಸಿಎಂ ಅವರನ್ನು ದೆಹಲಿಗೆ ಕರೆಸುವ ಸಾಧ್ಯತೆಯಿದೆ ಎನ್ನಲಾಗುತ್ತಿದೆ.

ಕರೆಯದೆಹೋಗಲ್ಲಸಿಎಂ?: ಮಂಗಳವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೈಕಮಾಂಡ್ ಕರೆದಾಗ ದೆಹಲಿಗೆ ತೆರಳುವುದಾಗಿ ಸ್ಪಷ್ಟವಾಗಿ ಹೇಳಿದ್ದಾರೆ. ಇದರರ್ಥ ಹೈಕಮಾಂಡ್ ಬುಲಾವ್ ನೀಡದೆ ತಾವು ದೆಹಲಿಗೆ ಯಾವ ವಿಚಾರದ ಬಗ್ಗೆಯೂ ಚರ್ಚೆ ನಡೆಸಲು ತೆರಳುವುದಿಲ್ಲ ಎಂದರ್ಥ ಬರುತ್ತದೆ.



ಆದರೆ, ರಾಜ್ಯದಲ್ಲಿ ನಾಯಕತ್ವ ಹಾಗೂ ಸಚಿವ ಸಂಪುಟ ಪುನಾರಚನೆಯಂಥ ವಿಚಾರಗಳಬಗ್ಗೆತೀವ್ರ ಒತ್ತಡವಿರುವುದರಿಂದ ಈ ಬಗ್ಗೆ ಒಂದು ಸ್ಪಷ್ಟತೆಯನ್ನು ಹೈಕಮಾಂಡ್ ನೀಡಬೇಕಾದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಹೀಗಾಗಿ ಕೇರಳದ ಬೆಳವಣಿಗೆಗಳು ಮುಗಿದ ನಂತರ ರಾಜ್ಯ ನಾಯಕರನ್ನು ದೆಹಲಿಗೆಆಹ್ವಾನಿಸಿನಾಯಕತ್ವ ಹಾಗೂ ಸಂಪುಟ ಪುನಾರಚನೆ ವಿಚಾರದ ಬಗ್ಗೆ ಚರ್ಚೆ ಆರಂಭಿಸಬಹುದು ಎನ್ನಲಾಗುತ್ತಿದೆ.

ಒಂದು ಮೂಲಗಳ ಪ್ರಕಾರ ಸರ್ಕಾರಕ್ಕೆ ಮೂರು ವರ್ಷ ಪೂರ್ಣಗೊಳ್ಳುವ ಒಳಗೆ ಈ ವಿಚಾರಗಳನ್ನು ಇತ್ಯರ್ಥಪಡಿಸುವ ಇರಾದೆ ಹೈಕಮಾಂಡ್‌ಗೆ ಇದೆ ಎನ್ನುತ್ತವೆ. ಆದರೆ, ಅದನ್ನು ಅಲ್ಲಗಳೆಯುವ ಮತ್ತೊಂದು ಬಣ, ಸರ್ಕಾರಕ್ಕೆಮೂರು ವರ್ಷ ತುಂಬುವವರೆಗೂ ಇಂತಹ ವಿಚಾರದಲ್ಲಿ ಹೈಕಮಾಂಡ್ ಆತುರ ತೋರುವುದಿಲ್ಲ. ಆದರೆ, ಮೂರು ವರ್ಷ ಪೂರ್ಣಗೊಂಡ ಅಂದರೆ ಮೇ 20ರ ನಂತರ ಈ ವಿಚಾರಗಳ ಬಗ್ಗೆ ಚರ್ಚೆ ತೀವ್ರಗೊಳ್ಳಬಹುದು ಎನ್ನುತ್ತದೆ.

ಹೈಕಮಾಂಡ್ ಮಧ್ಯಪ್ರವೇಶ: ಪಂಚರಾಜ್ಯ ಚುನಾವಣೆಯಲ್ಲಿ ಕೇರಳ ಹೊರತುಪಡಿಸಿ ಉಳಿದೆಡೆ ಕಾಂಗ್ರೆಸ್‌ಗೆ ಪೂರಕ ಫಲಿತಾಂಶ ಬಂದಿಲ್ಲ. ಕರ್ನಾಟಕದಲ್ಲಿ ಸದೃಢ ಸರ್ಕಾರವಿದ್ದರೂ ಅಧಿಕಾರ ಹಸ್ತಾಂತರ ಕುರಿತ ಗೊಂದಲಗಳಿಂದ ಬಣ ರಾಜಕೀಯ ಜೋರು ಪಡೆಯುತ್ತಿದೆ. ಇದು ಮುಂದಿನ ವಿಧಾನಸಭೆ ಚುನಾವಣೆ ವೇಳೆ ಪಕ್ಷಕ್ಕೆ ನಷ್ಟ ಉಂಟಾಗಬಹುದು ಎಂಬ ಕಾರಣಕ್ಕೆ ಹೈಕಮಾಂಡ್ ಮಧ್ಯಪ್ರವೇಶಕ್ಕೆ ಮುಂದಾಗಿದೆ ಎನ್ನಲಾಗಿದೆ.

ಅಧಿಕಾರಹಂಚಿಕೆಗೊಂದಲಬಗೆಹರಿಸುವ ಪ್ರಕ್ರಿಯೆ ಮತ್ತಷ್ಟು ಗೊಂದಲ ಸೃಷ್ಟಿಗೆ ಕಾರಣವಾಗಬಾರದು ಎಂಬ ಕಾರಣಕ್ಕೆ ಇಬ್ಬರನ್ನೂ ವಿಶ್ವಾಸಕ್ಕೆ ಪಡೆದು ಅಳೆದು ತೂಗಿ ನಿರ್ಧಾರ ಮಾಡಲು ಹೈಕಮಾಂಡ್ ಮುಂದಾಗಿದೆ.

ಹೀಗಾಗಿಮುಖ್ಯಮಂತ್ರಿಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಇಬ್ಬರನ್ನೂ ಕರೆದು ಪ್ರತ್ಯೇಕವಾಗಿ ಚರ್ಚೆ ನಡೆಸಲಿದ್ದಾರೆ. ಈವೇಳೆಹೈಕಮಾಂಡ್ ನಿರ್ಧಾರಕ್ಕೆ ಇಬ್ಬರೂ ನಾಯಕರು ಹಾಗೂ ಅವರ ಬಣವೂ ಬದ್ಧವಾಗಿರಬೇಕು ಎಂಬ ಬಗ್ಗೆ ಸ್ಪಷ್ಟ ಸೂಚನೆ ನೀಡಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪ.ಬಂಗಾಳ ಸಿಎಂ ಹುದ್ದೆಗಾಗಿ ನಾಲ್ವರ ನಡುವೆ ಸೆಣಸಾಟ

ಮೊದಲ ಪುಟದಿಂದ

ಮಹಿಳಾ ಮೀಸಲಿಗೆ ಬಿಜೆಪಿ ಹೋರಾಟದ ಹಿನ್ನೆಲೆಯಲ್ಲಿ ಈ ಇಬ್ಬರು ಮಹಿಳೆಯರ ಹೆಸರು ಮಹತ್ವ ಪಡೆದಿದೆ.





ಈ ಹಿನ್ನೆಲೆಯಲ್ಲಿ ಶಾಸಕಾಂಗ ಪಕ್ಷದ ನಾಯಕನ ಆಯ್ಕೆಗೆ ಬಿಜೆಪಿಯ ಕೇಂದ್ರ ವೀಕ್ಷಕರಾಗಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಮಂಗಳವಾರ ನೇಮಕ ಮಾಡಲಾಗಿದೆ.

ಈ ಬಗ್ಗೆ ಮಾತನಾಡಿದ ಪ.ಬಂಗಾಳ ಬಿಜೆಪಿ ಅಧ್ಯಕ್ಷ ಶಮಿಕ್ ಭಟ್ಟಾಚಾರ್ಯ, 'ಟ್ಯಾಗೋರ್‌ಜನ್ಮದಿನ ನಿಮಿತ್ತ ಪ. ಬಂಗಾಳದ ನೂತನ ಮುಖ್ಯಮಂತ್ರಿಯ ಪ್ರಮಾಣ ವಚನ ಸ್ವೀಕಾರ ಸಮಾರಂಭ ಮೇ 9 ರಂದು ನಡೆಯಲಿದೆ' ಎಂದರು.

ಸಿಎಂ ರೇಸ್‌ನಲ್ಲಿ ಯಾರು?: ರೂಪಾ ಗಂಗೂಲಿ 2 ಬಾರಿ ಶಾಸಕಿ ಆದವರು. ಮಹಾಭಾರತದ ದ್ರೌಪದಿ ಪಾತ್ರಧಾರಿ. ಪ.ಬಂಗಾಳ ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆಯೂ ಆಗಿದ್ದರು. ಅವರು ತಳಮಟ್ಟದಲ್ಲಿ ಕಾರ್ಯಕರ್ತರಿಗೆ ಪರಿಚಿತೆ.

ಇನ್ನು ಫ್ಯಾಷನ್ ಡಿಸೈನರ್‌ಆಗಿರುವ ಅಗ್ನಿಮಿತ್ರಾ ಪೌಲ್ ರಾಜ್ಯ ಬಿಜೆಪಿ ಉಪಾಧ್ಯಕ್ಷೆ. ಹಿಂದೆ ಬಂಗಾಳ ಮಹಿಳಾ ಬಿಜೆಪಿ ಅಧ್ಯಕ್ಷೆ ಕೂಡ ಆಗಿದ್ದರು. ಸಂಸದೆ ಆಗಿರುವ ಅವರು ಮಹಿಳಾ ಕೋಟಾದಲ್ಲಿ ಸಿಎಂ ಹುದ್ದೆಗೆ ಮುಂಚೂಣಿಯಲ್ಲಿದ್ದಾರೆ.

ಇನ್ನು 2021ರ ಚುನಾವಣೆಗೂ ಮುನ್ನ ಟಿಎಂಸಿಯಲ್ಲಿದ್ದು ಬಿಜೆಪಿಗೆ ಪಕ್ಷಾಂತರಗೊಂಡ ಸುವೇಂದು ಅಧಿಕಾರಿ 2 ಸಲ ತಮ್ಮ ಮಾಜಿ ಗುರು ಮಮತಾ ಬ್ಯಾನರ್ಜಿ ಅವರನ್ನು ಸೋಲಿಸಿದ ಖ್ಯಾತಿ ಪಡೆದಿದ್ದಾರೆ. ಹೈಕಮಾಂಡ್‌ನ ನೆಚ್ಚಿನ ವ್ಯಕ್ತಿ ಆಗಿದ್ದಾರೆ.

ಇನ್ನು ಬಿಜೆಪಿ ಕಷ್ಟಕಾಲದಲ್ಲಿದ್ದಾಗ ರಾಜ್ಯಾಧ್ಯಕ್ಷರಾಗಿ ಪಕ್ಷ ಸಂಘಟಿಸಿದವರು ದಿಲೀಪ್ ಘೋಷ್. ಇವರೂ ರಾಜ್ಯದ ಪ್ರಭಾವಿ ವ್ಯಕ್ತಿ. ಇವರೂ ಸಿಎಂ ರೇಸಲ್ಲಿದ್ದಾರೆ.

ಸರ್ಕಾರ ರಚನೆಗೆ ವಿಜಯ್ ಕಸರತ್ತು: ನಾಳೆ ಪ್ರಮಾಣ?

ಮೊದಲ ಪುಟದಿಂದ

ಈ ನಡುವೆ ರಾಜ್ಯಪಾಲರಿಗೆ ವಿಜಯ್ ಪತ್ರ ಬರೆದು, 'ಸರ್ಕಾರ ರಚನೆಗೆ ನಮಗೆ ಆಹ್ವಾನ ನೀಡಬೇಕು ಹಾಗೂ 2 ವಾರದಲ್ಲಿ ಬಹುಮತ ಸಾಬೀತು ಮಾಡುವೆ' ಎಂದು ತಿಳಿಸಿದ್ದಾರೆ ಎಂದು ಮೂಲಗಳು ಹೇಳಿವೆ.



ಲೆಕ್ಕಾಚಾರ ಹೇಗೆ?: 234 ಸದಸ್ಯ ಬಲದ ತಮಿಳುನಾಡು ವಿಧಾನಸಭೆಯಲ್ಲಿ ಟಿವಿಕೆ 108 ಸ್ಥಾನ ಪಡೆದಿದ್ದು, ಬಹುಮತಕ್ಕೆ ಬೇಕಾದ 118 ಸ್ಥಾನಕ್ಕೆ 10 ಸ್ಥಾನಗಳ ಕೊರತೆ ಎದುರಿಸುತ್ತಿದೆ.

ಆಡಳಿತಾರೂಢ ಡಿಎಂಕೆ 59, ಎಐಎಡಿಎಂಕೆ 47, ಡಿಎಂಕೆ ಮಿತ್ರಪಕ್ಷಗಳಾದ ಕಾಂಗ್ರೆಸ್ 5, ಐಯುಎಂಎಲ್, ಸಿಪಿಐ, ಸಿಪಿಐ (ಎಂ) ಮತ್ತು ವಿಸಿಕೆ ತಲಾ 2 ಸ್ಥಾನಗಳನ್ನು ಮತ್ತು ಡಿಎಂಡಿಕೆ 1, ಎಐಎಡಿಎಂಕೆ ಮಿತ್ರರಾದ ಪಿಎಂಕೆ 4 ಮತ್ತು ಬಿಜೆಪಿ ಮತ್ತು ಎಎಂಎಂಕೆ ತಲಾ 1 ಸ್ಥಾನ ಗಳಿಸಿವೆ.

ಈ ಹಂತದಲ್ಲಿ ವಿಜಯ್ ಮಾಡಬಹುದಾದ ಒಂದು ಕೆಲಸವೆಂದರೆ ಡಿಎಂಕೆ ಮೈತ್ರಿಕೂಟದ ಸಣ್ಣ ಪಕ್ಷಗಳನ್ನು ತಮ್ಮೊಂದಿಗೆ ತೆಗೆದುಕೊಂಡು ಸರ್ಕಾರ ರಚಿಸುವುದು. ಡಿಎಂಕೆ ಕೂಟದಲ್ಲಿರುವ ಸಣ್ಣ ಪಕ್ಷಗಳು (ಕಾಂಗ್ರೆಸ್ ಸೇರಿ) 14 ಶಾಸಕರನ್ನು ಹೊಂದಿವೆ. ಈ 14ರಲ್ಲಿ ಕನಿಷ್ಠ 10 ಶಾಸಕರು ವಿಜಯ್ ಪರ ವಾಲಿದರೆ ಸುಲಭವಾಗಿ ಅಧಿಕಾರ ಅವರಿಗೆ ಸಿಗಲಿದೆ.

ಕಾಂಗ್ರೆಸ್ ಉತ್ಸುಕ: ಡಿಎಂಕೆ ಜತೆ ನಂಟು ಕಡಿದುಕೊಂಡು ಕಾಂಗ್ರೆಸ್ ಪಕ್ಷ ಟಿವಿಕೆ ಸೇರಲು ಉತ್ಸುಕವಾಗಿದೆ ಎನ್ನಲಾಗಿದೆ. ಕಾಂಗ್ರೆಸ್‌ನ 5 ಶಾಸಕರು ಮಂಗಳವಾರ ಸಿಎಂ ಸ್ಟಾಲಿನ್ ಕರೆದ ಸಭೆಗೆ ಗೈರಾಗಿ, ಪಕ್ಷದ ವರಿಷ್ಠರಿಗೆ ತಾವು ಟಿವಿಕೆ ಬೆಂಬಲಿಸಲು ಸಿದ್ಧ ಎಂಬ ಸಂದೇಶ ರವಾನಿಸಿದ್ದಾರೆ. ಅಂತಿಮ ತೀರ್ಮಾನ ಹೈಕಮಾಂಡ್‌ಗೆ ಬಿಟ್ಟಿದ್ದು ಎಂದಿದ್ದಾರೆ ಎಂದು ಮೂಲಗಳು ಹೇಳಿವೆ. ಇದಕ್ಕೆ ಪ್ರತಿಯಾಗಿ ಕಾಂಗ್ರೆಸ್ 2 ಸಚಿವ ಸ್ಥಾನಕ್ಕೆ ಬೇಡಿಕೆ ಇಟ್ಟಿದೆ ಎನ್ನಲಾಗಿದೆ. ಇದಕ್ಕೆಪೂರಕವಾಗಿ ಕಾಂಗ್ರೆಸ್ ನಾಯಕಕೆ.ಸಿ. ವೇಣುಗೋಪಾಲ್ ಪ್ರತಿಕ್ರಿಯಿಸಿ, ಮೈತ್ರಿ ಬಗ್ಗೆ ಬುಧವಾರ ಪಕ್ಷ ನಿರ್ಧರಿಸಲಿದೆ ಎಂದಿದ್ದಾರೆ.

ಇನ್ನು ಇದು ಸಾಧ್ಯವಾಗದೇ ಹೋದರೆ ಡಿಎಂಕೆ ಅಥವಾ ಅಣ್ಣಾಡಿಎಂಕೆ ಬೆಂಬಲಿಸಬೇಕು. ಆದರೆ ಡಿಎಂಕೆ ಬೆಂಬಲ ಸಾಧ್ಯವಾಗದ ಮಾತು. ಏಕೆಂದರೆ 'ಡಿಎಂಕೆ ನನ್ನ ರಾಜಕೀಯ ಶತ್ರು' ಎಂದು ವಿಜಯ್ ಹೇಳಿದ್ದರು. ಇನ್ನು 'ಬಿಜೆಪಿ ಸೈದ್ಧಾಂತಿಕ ಶತ್ರು' ಎಂದಿದ್ದರು. ಇಂಥದ್ದರಲ್ಲಿ ಬಿಜೆಪಿ ಜತೆ ನಂಟು ಕಡಿದುಕೊಂಡು ಎಐಎಡಿಎಂಕೆ, ವಿಜಯ್‌ರತ್ತ ವಾಲಿದರೆ ಮೈತ್ರಿ ಸರ್ಕಾರ ರಚನೆ ಸಾಧ್ಯವಾಗಬಹುದು.

ಸ್ಟಾಲಿನ್ ರಾಜೀನಾಮೆ: ಈ ನಡುವೆ, ಪರಾಜಯದಹಿನ್ನೆಲೆಯಲ್ಲಿಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ರಾಜೀನಾಮೆ ನೀಡಿದ್ದಾರೆ. ರಾಜೀನಾಮೆ ಅಂಗೀಕರಿಸಿರುವ ರಾಜ್ಯಪಾಲರು 'ಮುಂದಿನ ಪರ್ಯಾಯ ವ್ಯವಸ್ಥೆ ಆಗುವ ತನಕ ಸಿಎಂ ಸ್ಥಾನದಲ್ಲಿ ಮುಂದುವರಿಯಿರಿ' ಎಂದು ಕೋರಿದ್ದಾರೆ.

ಖರ್ಗೆ ಹೇಳಿದ ಮೇಲೆ ಸಿಎಂ ಚರ್ಚೆ ಬೇಕಿಲ್ಲ

ಮೊದಲ ಪುಟದಿಂದ

ಬದಲಾವಣೆಯಿದ್ದರೆ ತೀರ್ಮಾನ ತೆಗೆದುಕೊಳ್ಳುತ್ತೇವೆ. ಸಂದರ್ಭ, ಸನ್ನಿವೇಶ ಬರಲಿ ಎಂದು ಸ್ಪಷ್ಟಪಡಿಸಿದ್ದಾರೆ. ಅವರೇ ಹಾಗೆ ಹೇಳಿದ ಮೇಲೆ ನಾವು ಮಾತನಾಡುವುದು ಅಪ್ರಸ್ತುತ ಎಂದರು.



ಉಪಚುನಾವಣೆ ಫಲಿತಾಂಶ ನಂತರ ಸಚಿವ ಸಂಪುಟ ಪುನಾರಚನೆಯಾಗುತ್ತದೆ ಎಂಬ ಚರ್ಚೆ ಕುರಿತು ಮಾತನಾಡಿ, ಉಪಚುನಾವಣೆ ಫಲಿತಾಂಶಕ್ಕೂ ಸಚಿವ ಸಂಪುಟ ಪುನಾ ರಚನೆಗೂ ಸಂಬಂಧವಿಲ್ಲ. ಸಚಿವ ಸಂಪುಟ ಪುನಾರಚನೆ ಎಂಬುದು ಸಹಜ ಪ್ರಕ್ರಿಯೆ. ಸರ್ಕಾರ ರಚನೆಯಾದ ಎರಡೂವರೆಯಿಂದ ಮೂರು ವರ್ಷಗಳಿಗೆ ಸಚಿವ ಸಂಪುಟ ಪುನಾರಚನೆ ಯಾಗುವುದು ಸಹಜ. ಸದ್ಯಕ್ಕೆ ಅದರ ಚರ್ಚೆಯಿಲ್ಲ. ಚರ್ಚೆ ಶುರುವಾದಾಗ ಆ ವಿಚಾರದ ಬಗ್ಗೆ ಮಾತನಾಡೋಣ ಎಂದು ತಿಳಿಸಿದರು.

77 ವರ್ಷದ ಸಿದ್ದು ಇದೀಗ ದೇಶದ ಹಿರಿಯ ಸಿಎಂ!

ಮೊದಲ ಪುಟದಿಂದ

ಅರುಣಾಚಲ ಪ್ರದೇಶ ಪೇಮಾ ಖಂಡು (46) ಅತಿ ಕಿರಿಯ ಸಿಎಂ ಆಗಿದ್ದಾರೆ.



2ನೇ ಬಾರಿಗೆ ಕರ್ನಾಟಕದ ಮುಖ್ಯಮಂತ್ರಿಯಾಗಿರುವ ಇವರು 2026ರ ಜ.6ರಂದು 2,792 ದಿನಗಳ ಕಾಲ ಸಿಎಂ ಆಗಿದ್ದ ದೇವರಾಜ ಅರಸ್ ಅವರನ್ನು ಸರಿಗಟ್ಟಿದ್ದರು ಹಾಗೂ ಅದನ್ನು ಮೀರುವ ಮೂಲಕ ರಾಜ್ಯದಲ್ಲಿ ಸುದೀರ್ಘಾವಧಿ ಆಳ್ವಿಕೆ ನಡೆಸಿದವರು ಎಂಬ ಖ್ಯಾತಿಗೆ ಪಾತ್ರರಾಗಿದ್ದರು.

ಒಟ್ಟಾರೆ ನೋಡುವುದಾದರೆ ಎಂ. ಕರುಣಾನಿಧಿ (92) ಈವರೆಗೆ ರಾಜ್ಯವೊಂದನ್ನು ಆಳಿದ ಅತಿ ಹಿರಿಯ ಸಿಎಂ ಎನಿಸಿಕೊಳ್ಳುತ್ತಾರೆ.

ತ.ನಾಡಿನಲ್ಲಿ ಟಿವಿಕೆಯಿಂದ ತುರುವೇಕೆರೆಯ ಸುನೀಲ್ ಆನಂದ್ ವಿಜಯ!

ಮೊದಲ ಪುಟದಿಂದ

ರಿಯಲ್ ಎಸ್ಟೇಟ್ ಉದ್ಯಮಿ: ಮೂಲತಃ ತುರುವೇಕೆರೆಯವರಾದ ಇವರು, ತಮಿಳುನಾಡಿನ ಮೆಟ್ಟುಪಾಳ್ಯಂನಲ್ಲಿ ನೆಲೆಸಿದ್ದಾರೆ.

ಸುನೀಲ್ ಆನಂದ್ ಅವರ ಅಜ್ಜನ ಊರು ತಾಲೂಕಿನ ದಬ್ಬೇಘಟ್ಟ ಹೋಬಳಿಯಹೊಡಿಕೇಘಟ್ಟ. ಹಲವುದಶಕಗಳಹಿಂದೆನಿಂಗೇಗೌಡರು ತಮಿಳುನಾಡಿಗೆ ವಲಸೆ ಹೋಗಿದ್ದರು. ತದ ನಂತರದ ದಿನಗಳಲ್ಲಿ ಅಲ್ಲೇ ತಮ್ಮ ಜೀವನ ಸಾಗಿಸಿದರು. ನಿಂಗೇಗೌಡರ ಮಗ ಎಚ್.ಎನ್.ನಾಗರಾಜು ಅವರ ಮಗನೇ ಈಗ ಮೆಟ್ಟುಪಾಳ್ಯಂನ ಶಾಸಕರಾಗಿರುವ ಸುನಿಲ್ ಆನಂದ್.

10ನೇ ತರಗತಿಯವರೆಗೆ ಓದು ಪೂರೈಸಿದ್ದು, ತಮಿಳುನಾಡಿನಲ್ಲಿಯೇ ರಿಯಲ್ ಎಸ್ಟೇಟ್ ಹಾಗೂ ಇತರ ಉದ್ಯಮದಲ್ಲಿ ತೊಡಗಿಕೊಂಡಿದ್ದಾರೆ. ಬಹುದೀರ್ಘಕಾಲದಿಂದಲೂ ವಿಜಯ್‌ರ ಬೆಂಬಲಿಗರಾಗಿದ್ದರು. ಜೊತೆಗೆ, ಟಿವಿಕೆಯ ನಿಷ್ಠಾವಂತ ಕಾರ್ಯಕರ್ತ ಕೂಡಾ ಹೌದು. ಚುನಾವಣೆಗೆ ನಿಲ್ಲುವ ಮೊದಲು ಪಕ್ಷದಲ್ಲಿ ತಮ್ಮ ವರ್ಚಸ್ಸು ಬೆಳೆಸಿಕೊಳ್ಳುತ್ತಾ ಬಂದಿದ್ದರು.

₹365 ಎಫ್‌ಆರ್‌ಪಿ ಒಪ್ಪಿಗೆ ರಾಜ್ಯದ 10 ಲಕ್ಷ ರೈತರಿಗೆ ಅನುಕೂಲ: ಸಚಿವ ಜೋಶಿ

• **ಕನ್ನಡಪ್ರಭ ವಾರ್ತೆ** ನವದೆಹಲಿ

ಕರ್ನಾಟಕದ ಸೂರ್ಯಕಾಂತಿ ಬೆಳೆಗಾರರ ಬೆಂಬಲಕ್ಕೆ ನಿಂತ ಬೆನ್ನಲ್ಲೇ ಕೇಂದ್ರ ಸರ್ಕಾರ ಇದೀಗ ಕಬ್ಬು ಬೆಳೆಗಾರರಿಗೂ ಬೆಂಬಲ ಬೆಲೆ ಹೆಚ್ಚಿಸಿ ನೆರವಿಗೆ ಬಂದಿದೆ. ಇದರಿಂದಾಗಿ ಕರ್ನಾಟಕದ ಸರಿ ಸುಮಾರು 8 ರಿಂದ 10 ಲಕ್ಷ ರೈತರಿಗೆ ಪ್ರಯೋಜನವಾಗಲಿದೆ ಎಂದು ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಹ್ಲಾದ ಜೋಶಿ ತಿಳಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಕೇಂದ್ರ ಸಚಿವ ಸಂಪುಟ 2026–27ನೇ ಹಂಗಾಮಿಗೆ ಕಬ್ಬಿಗೆ ಶೇ.10.25 ಮೂಲ ರಿಕವರಿ ದರದ ಮೇಲೆ ಪ್ರತಿ ಕ್ವಿಂಟಲ್‌ಗೆ ₹365 ನ್ಯಾಯೋಚಿತ ಮತ್ತು ಲಾಭದಾಯಕ ಬೆಲೆಯನ್ನು (ಎಫ್‌ಆರ್‌ಪಿ) ಅನುಮೋದಿಸಿದೆ. ರಾಜ್ಯದ ಬೆಳಗಾವಿ, ಬಾಗಲಕೋಟೆ, ಮಂಡ್ಯ, ಮೈಸೂರು, ವಿಜಯಪುರ ಮತ್ತು ಬಳ್ಳಾರಿ, ದಾವಣಗೆರೆ, ಬೀದರ್‌ಹೀಗೆ ವಿವಿಧ ಜಿಲ್ಲೆಗಳು ಕಬ್ಬು ಬೆಳೆಯುವಲ್ಲಿ ಮುಂಚೂಣಿಯಲ್ಲಿದ್ದು, ದೇಶದ ಒಟ್ಟು ಸಕ್ಕರೆ ಉತ್ಪಾದನೆಯ ಶೇ.16 ರಷ್ಟು ಕರ್ನಾಟಕದ ಪಾಲಿದೆ. ಹೀಗಾಗಿ ಈ ಎಫ್‌ಆರ್‌ಪಿ ಹೆಚ್ಚಳವು ರಾಜ್ಯದ ಪಾಲಿಗೂ ಅನನ್ಯ ಕೊಡುಗೆಯಾಗಿದೆ ಎಂದು ಜೋಶಿ ತಿಳಿಸಿದ್ದಾರೆ.